ಸಂಪುಟ: 14 Volume ಸಂಚಿಕೆ: 44 Issue ಪುಟಗಳು 08 Pages ಬುಧವಾರ 20 ಮೇ 2026 ₹4 PRGINO.120927 (RNINO:KARKAN/2011/48371) BDR/054/2026-2027 www.mallammanudi.in
mallammanudi@gmail.com 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ವಿವೇಕಿಯಾದವನು ಬೇರೆಯವರ ತಪ್ಪನ್ನು ಕಂಡು ತನ್ನಲ್ಲಿರುವ ತಪ್ಪನ್ನು ತಿದ್ದಿಕೊಳ್ಳುತ್ತಾನೆ.

–ಸ್ವಾಮಿ ವಿವೇಕಾನಂದ



ಮಾನ್ಯ ಶ್ರೀ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದು ಮೂರು ವರ್ಷ ಆಗಿರುವ ಹಿನ್ನೆಲೆಯಲ್ಲಿ ತುಮಕೂರಿನಲ್ಲಿ ಆಯೋಜಿಸಿದ್ದ ಸಾಧನಾ ಸಮಾವೇಶವಾದ ಸಮರ್ಪಣೆ ಸಂಕಲ್ಪ ಕಾರ್ಯಕ್ರಮದಲ್ಲಿ ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಸೇರಿದಂತೆ ಎಲ್ಲ ಸಚಿವರೂ ಭಾಗವಹಿಸಿದ್ದರು.

## ಎಮ್‌ಆರ್–ಲಿನಾಕ್ ತಂತ್ರಜ್ಞಾನ ಲೋಕಾರ್ಪಣೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕ್ಯಾನ್ಸರ್ ಚಿಕಿತ್ಸೆಗಾಗಿಯೇ ಮೀಸಲಾದ ಭಾರತದ ಅತಿ–ದೊಡ್ಡ ಆಸ್ಪತ್ರೆಗಳ ಸಮೂಹವಾಗಿರುವ, ಹೆಲ್ತ್‌ಕೇರ್ ಗ್ಲೋಬಲ್ ಎಂಟರ್‌ಪ್ರೈಸಸ್ ಲಿಮಿಟೆಡ್ (HCG), ಇಂದು ಬ್ಯಾಟರಾಯನಪುರದಲ್ಲಿ ತನ್ನ ನೂತನ ಸಮಗ್ರ ಕ್ಯಾನ್ಸರ್ ಆಸ್ಪತ್ರೆಯನ್ನು ಉದ್ಘಾಟಿಸಿದೆ. ಈ ಮೂಲಕ ಉತ್ತರ ಬೆಂಗಳೂರಿನಲ್ಲಿ ಸುಧಾರಿತ ಆಂಕೊಲಾಜಿ ಸೇವೆಗಳ ಲಭ್ಯತೆಯನ್ನು ಮತ್ತಷ್ಟು ಬಲಪಡಿಸಿದೆ. ಅತ್ಯಾಧುನಿಕ ತಂತ್ರಜ್ಞಾನ, ಪರಿಣಿತ ವೈದ್ಯಕೀಯ ತಂಡ ಒಂದೇ ಸೂರಿನಡಿ ತರುತ್ತಿರುವ ಈ ಆಸ್ಪತ್ರೆಯು, ಕರ್ನಾಟಕದ ಜನತೆಗೆ ವಿಶ್ವದರ್ಜೆಯ ಚಿಕಿತ್ಸೆಯನ್ನು ನೀಡುವಲ್ಲಿ ಒಂದು ಪ್ರಮುಖ ಮೈಲಿಗಲ್ಲಾಗಲಿದೆ.

ನೂತನ ಸೌಲಭ್ಯವನ್ನು ಉದ್ಘಾಟಿಸಿ ಮಾತನಾಡಿದ ಸ್ಯಾಂಡಲ್‌ವುಡ್‌ನ ಖ್ಯಾತ ನಟ ಹಾಗೂ ನಿರ್ದೇಶಕ, ಕಿಚ್ಚ ಸುದೀಪ್, "ಕ್ಯಾನ್ಸರ್ ಎಂಬುದು ಕೇವಲ ರೋಗಿಯನ್ನಷ್ಟೇ ಅಲ್ಲ, ಇಡೀ ಕುಟುಂಬವನ್ನೇ ತಲ್ಲಣಗೊಳಿಸುವ ಒಂದು ಕಠಿಣ



ಪ್ರಯಾಣವಾಗಿದೆ. ಈ ನಿಟ್ಟಿನಲ್ಲಿ ಸಕಾಲಿಕ ರೋಗನಿರ್ಣಯ, ವ್ಯಾಪಕ ಜಾಗೃತಿ ಮತ್ತು ಸರಿಯಾದ ಸಮಯದಲ್ಲಿ ಸೂಕ್ತ ಚಿಕಿತ್ಸೆ ಲಭ್ಯವಾಗುವುದು ರೋಗಿಯ ಜೀವನದಲ್ಲಿ ನಿಜವಾದ ಬದಲಾವಣೆಯನ್ನು ತರಬಲ್ಲದು. ಎಚ್‌ಸಿಜಿಯ ಈ ಹೆಬ್ಬಾಳದ ಹೊಸ ಆಸ್ಪತ್ರೆಯು ಅತ್ಯಾಧುನಿಕ ತಂತ್ರಜ್ಞಾನ ಮತ್ತು ಪರಿಣಿತ ವೈದ್ಯಕೀಯ ಆರೈಕೆಯನ್ನು ಜನರಿಗೆ ತಲುಪಿಸುವ ಮೂಲಕ ಈ ದಿಸೆಯಲ್ಲಿ ಒಂದು ಶಕ್ತಿಶಾಲಿ ಹೆಜ್ಜೆಯನ್ನಿಟ್ಟಿದೆ. ಕರ್ನಾಟಕದಾದ್ಯಂತ ಇರುವ ಕುಟುಂಬಗಳಿಗೆ ಇಂತಹ ವಿಶ್ವದರ್ಜೆಯ ಕ್ಯಾನ್ಸರ್ ಚಿಕಿತ್ಸೆ ಅತ್ಯಂತ ಸುಲಭವಾಗಿ ಸಿಗುತ್ತಿರುವುದು ನಿಜಕ್ಕೂ ಹೆಮ್ಮೆಯ ಹಾಗೂ ಸಂತೋಷದ ಸಂಗತಿಯಾಗಿದೆ," ಎಂದು ಪ್ರಶಂಸಿಸಿದರು.

## ಕಾಳಗದಲ್ಲಿ ಗಾಯ, ಮಾರ್ತಾಂಡ ನಿಧನ, ಸಂತಾಪ

• ಮಲ್ಲಮ್ಮ ನುಡಿ ವಾರ್ತೆ ತುಮಕೂರು

ದುಬಾರೆ ಆನೆ ಶಿಬಿರದಲ್ಲಿ ನಿನ್ನೆ ದಸರಾ ಆನೆ ಕಂಜನ್ ಮತ್ತು ಮಕನಾ ಆನೆ ಮಾರ್ತಾಂಡ ನಡುವೆ ನಡೆದ ಕಾಳಗದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಮಾರ್ತಾಂಡ ಇಂದು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ಅನಿರೀಕ್ಷಿತವಾದ ಮತ್ತು ಊಹಿಸಲೂ ಆಗದ ದುರ್ಘಟನೆಯಲ್ಲಿ ಒಬ್ಬ ಪ್ರವಾಸಿ ಮಹಿಳೆ ಮತ್ತು ಒಂದು ಆನೆ ಮೃತಪಟ್ಟಿರುವುದು ಅತ್ಯಂತ ದುಃಖದ ಸಂಗತಿ ಎಂದು ತಿಳಿಸಿರುವ ಅವರು ಸಂತಾಪ ಸೂಚಿಸಿದ್ದಾರೆ.

ಹಾಸನ ಜಿಲ್ಲೆ ಆಲೂರಿನಲ್ಲಿ 2023 ರಲ್ಲಿ ಸೆರೆ ಹಿಡಿಯಲಾಗಿದ್ದ 53 ವರ್ಷದ ಮಾರ್ತಾಂಡ 4500 ಕೆ.ಜಿ. ತೂಕವಿತ್ತು. ಹಾಸನ ಜಿಲ್ಲೆ ಯಸಳೂರಿನ



ಬಳಿ 2014ರಲ್ಲಿ ಸೆರೆ ಹಿಡಿಯಲಾಗಿದ್ದ 26 ವರ್ಷದ ಕಂಜನ್ 3 ಬಾರಿ ದಸರಾ ಮಹೋತ್ಸವದಲ್ಲಿ ಭಾಗಿಯಾಗುತ್ತಿದ್ದ. ಇನ್ನು ಮುಂದೆ ದಸರಾ ಮಹೋತ್ಸವಕ್ಕೆ ಈ ಆನೆಯನ್ನು ಬಳಸದಂತೆ ಸೂಚಿಸಿರುವುದಾಗಿಯೂ ಈಶ್ವರ ಖಂಡ್ರೆ ತಿಳಿಸಿದ್ದಾರೆ.

## ಪತ್ರಕರ್ತೆ ಚಿಕಿತ್ಸೆಗೆ ೯೦ ಸಾವಿರ

**ಬೆಂಗಳೂರು:** ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಎರಡೂವರೆ ದಶಕಗಳಿಗೂ ಹೆಚ್ಚು ಕಾಲ ಸುದೀರ್ಘ ಅವಧಿಗೆ ಕೆಲಸ ಮಾಡಿದ್ದ ಹಿರಿಯ ಪತ್ರಕರ್ತರಾದ ಹುಬ್ಬಳ್ಳಿಯ ಜಯಶ್ರೀ ಬಿ ವಾಳ್ವಕರ್ ಅವರ ಆಸ್ಪತ್ರೆ ಚಿಕಿತ್ಸೆ ಭಾಗವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 90 ಸಾವಿರ ರೂ ಪರಿಹಾರ ಬಿಡುಗಡೆ ಮಾಡಿದ್ದು ಅವರ ಅಕೌಂಟ್‌ಗೆ ಜಮೆಯಾಗಿದೆ. ಜಯಶ್ರೀ ವಾಳ್ವಕರ್ ಅವರು ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗೊಳಗಾಗಿ ಚಿಕಿತ್ಸೆ ಪಡೆಯುತ್ತಿರುವ ಬಗ್ಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯೂಜೆ) ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಅವರು ಸರ್ಕಾರಕ್ಕೆ ಮನವಿ ಸಲ್ಲಿಸಿ, ಚಿಕಿತ್ಸೆಗೆ ನೆರವು ಕೋರಿದ್ದರು. ಕೆಯುಡಬ್ಲ್ಯೂಜೆ ಮನವಿ ಮೇರೆಗೆ ಪರಿಹಾರ ಮಂಜೂರು ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ, ಈ ನಿಟ್ಟಿನಲ್ಲಿ ಸಹಕಾರ ನೀಡಿದ ಸಿಎಂ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್ ಅವರಿಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯೂಜೆ) ಧನ್ಯವಾದ ಸಲ್ಲಿಸಿದೆ.

# ಸಾಧನಾ ಪರ್ವ ಅನಾವರಣ

## ಕಾಂಗ್ರೆಸ್ ಸರ್ಕಾರಕ್ಕೆ ಇಂದು 3 ವರ್ಷ ಪೂರ್ಣ | 290 ಭರವಸೆಗಳ ಈಡೇರಿಕೆ: ಸಿಎಂ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಸಿಎಂ ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಇಂದು (ಮೇ 20) 3 ವರ್ಷ ಪೂರ್ಣಗೊಳಿಸಲಿದೆ. ಈ ಹಿನ್ನೆಲೆಯಲ್ಲಿ ತುಮಕೂರಿನಲ್ಲಿ ಮಂಗಳವಾರ ಸಾಧನಾ ಸಮಾವೇಶವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಮಾವೇಶದಲ್ಲಿ ಸರ್ಕಾರದ ಸಾಧನೆಗಳನ್ನು ಅನಾವರಣಗೊಳಿಸಲಾಯಿತು. ಈ ನಡುವೆ 2023 ರ ವಿಧಾನಸಭೆ ಚುನಾವಣೆಯ ಸಂದರ್ಭದಲ್ಲಿ ನೀಡಲಾಗಿದ್ದ 580 ಭರವಸೆಗಳ ಪೈಕಿ 290 ಭರವಸೆಗಳನ್ನು ಈಡೇರಿಸಲಾಗಿದೆ ಎಂದು ಸ್ವತಃ ಸಿಎಂ ತಿಳಿಸಿದ್ದಾರೆ.

**ಕೊಟ್ಟ ಮಾತು ಈಡೇರಿಕೆ:** ಅಂದು ಜಿ.ಪರಮೇಶ್ವರ್ ಅಧ್ಯಕ್ಷತೆಯ ಪ್ರಣಾಳಿಕೆ ಸಮಿತಿ ರಚನೆ ಮಾಡಲಾಗಿತ್ತು. ಸಮಿತಿ ಪ್ರಣಾಳಿಕೆ ಸಿದ್ಧಪಡಿಸಿತ್ತು. ಈ ಪ್ರಣಾಳಿಕೆಯಲ್ಲಿನ 580 ಭರವಸೆಗಳಲ್ಲಿ 290 ಕ್ಕೂ ಹೆಚ್ಚು ಭರವಸೆ ಈಡೇರಿಸಲಾಗಿದೆ. ಈ ಬಗ್ಗೆ ಸಮಾವೇಶದಲ್ಲಿ ಸಿಎಂ ಮಾಹಿತಿ ನೀಡಿದ್ದಾರೆ.

**ಸಾಧನಾ ಸಮರ್ಪಣಾ ಸಮಾವೇಶ:** ತುಮಕೂರಲ್ಲಿ ಯೋಜಿಸಿದ್ದ "ಮೂರು ವರ್ಷಗಳ ಸಾಧನಾ ಸಮರ್ಪಣಾ ಸಮಾವೇಶವನ್ನು ಸಿಎಂ ಉದ್ಘಾಟಿಸಿ ಬಳಿಕ, "ನವ ಕರ್ನಾಟಕ" ಅಭಿವೃದ್ಧಿ ಮಾದರಿಯ ವಸ್ತು ಪ್ರದರ್ಶನ, ಜಿಲ್ಲೆಯಲ್ಲಿ ನಡೆದ 682 ಕೋಟಿ ಮೊತ್ತದ ಬೃಹತ್ ಅಭಿವೃದ್ಧಿ ಕಾರ್ಯಗಳ ಉದ್ಘಾಟಿಸಿದ್ದಾರೆ.



### ನೀಟ್ ರದ್ದಿಗೆ ಪಿಎಂ ಕಾರಣ

ನೀಟ್ ಪರೀಕ್ಷೆ ರದ್ದಾಗಿ 22 ಲಕ್ಷ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಚೆಲ್ಲಾಟ ಆಡಿ, ಹಲವು ವಿದ್ಯಾರ್ಥಿಗಳ ಆತ್ಮಹತ್ಯೆಗೆ ಮೋದಿ ಸರ್ಕಾರ ಕಾರಣ. ರಾಜ್ಯದ CET ಮಾದರಿಯಲ್ಲಿ ಪರೀಕ್ಷೆ ನಡೆಸಿ ಎನ್ನುವ ನಮ್ಮ ಸಲಹೆಯನ್ನು ತಿರಸ್ಕರಿಸಿ ನೀಟ್‌ನಲ್ಲಿ ಅದ್ವಾನ ಮಾಡಿದ್ದಾರೆ. ವರ್ಷಕ್ಕೆ 2 ಕೋಟಿ ಉದ್ಯೋಗದ ಭರವಸೆ ನೀಡಿದ್ದ ಮೋದಿಯ ಅಚ್ಛೇ ದಿನ ಬರಲಿಲ್ಲ ಎಂದು ಟೀಕಿಸಿದ್ದಾರೆ ಸಿಎಂ.

### ಬಡವರಿಗೆ ಕೊಟ್ಟ ಶಕ್ತಿ

ನಾವು ಅಧಿಕಾರಕ್ಕೆ ಬಂದ ಬಳಿಕ ಸರ್ವ ಜಾತಿ, ಸರ್ವ ಧರ್ಮದ ಸಕಲ ಜನತೆಯ ಅಭಿವೃದ್ಧಿಗೆ ಕೆಲಸ ಮಾಡಿದ್ದೇವೆ. ಎಲ್ಲಾ ಜಾತಿ, ಎಲ್ಲಾ ಧರ್ಮದ ಬಡವರಿಗೆ ಶಕ್ತಿ ತುಂಬುವ ಕೆಲಸ ಮಾಡಿದ್ದೇವೆ. ಬಿಜೆಪಿಯವರ ರೀತಿ ಜಾತಿ ಧರ್ಮದದ ಹೆಸರಲ್ಲಿ ವಿಭಜಿಸುವ ಕೆಟ್ಟ ರಾಜ–ಕಾರಣ ನಾವು ಮಾಡಲಿಲ್ಲ. ಬಿಜೆಪಿಯವರ ಎಲ್ಲಾ ಅಪಪ್ರಚಾರಗಳನ್ನು ಸುಳ್ಳಾಗಿಸಿ ಅಭಿವೃದ್ಧಿ ಮಾಡಿದ್ದೇವೆ ಎಂದಿದ್ದಾರೆ ಸಿಎಂ.

### ಗ್ಯಾರಂಟಿ ಮಾದರಿ

ನಮ್ಮ ಬಿಜೆಪಿ ಸ್ನೇಹಿತರು, ಪ್ರಧಾನಮಂತ್ರಿ ನಮ್ಮ ಗ್ಯಾರಂಟಿ ಯೋಜನೆಗಳ ಬಗ್ಗೆ ಟೀಕೆ ಮಾಡಿದ್ದರು. ಇಂದು ಪ್ರತಿಯೊಂದು ರಾಜ್ಯದಲ್ಲೂ ಅವರೇ ಗ್ಯಾರಂಟಿ ಯೋಜನೆ ಪ್ರಕಟಿಸುತ್ತಿದ್ದಾರೆ. ಯಾವುದೇ ಪಕ್ಷವೂ ಇದಕ್ಕೆ ಹೊರತಾಗಿಲ್ಲ. ಗ್ಯಾರಂಟಿಗಳು ಇಡೀ ದೇಶಕ್ಕೆ ಮಾದರಿಯಾಗಿವೆ. ನಮ್ಮ ಗ್ಯಾರಂಟಿ ಯೋಜನೆಗಳನ್ನು ನಕಲು ಮಾಡುತ್ತಿದ್ದಾರೆ ಎಂದಿದ್ದಾರೆ ಡಿಸಿಎಂ ಡಿಕೆಶಿ.

ರಾಜ್ಯದ ಜನತೆ, ರೈತರು ಮತ್ತು ಸಾರಿಗೆ ನೌಕರರು ಸಂಕಷ್ಟದಲ್ಲಿದ್ದರೆ, ಈ ಸರ್ಕಾರ 3ನೇ ವರ್ಷದ ಸಾಧನಾ ಸಮಾವೇಶಕ್ಕೆ ಮುಂದಾಗಿದೆ. ಇದು ಯಾರ ಖುಷಿ ಮತ್ತು ಯಾರನ್ನು ಓಲೈಸಲು? ಕೋಟ್ಯಂತರ ರೂ. ಸಾರ್ವಜನಿಕ ಹಣವನ್ನು ಪೋಲು ಮಾಡುತ್ತಿದೆ. ಮಹಿಳೆಯರ ಅಕೌಂಟ್ಗೆ ಬರಬೇಕಿದ್ದ ಗೃಹಲಕ್ಷ್ಮಿ ಹಣ ಈಗ ದಿಢೀರನೆ ಮಾಯವಾಗಿದೆ.

–ಪ್ರಹ್ಲಾದ್ ಜೋಶಿ, ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವ



ತುಮಕೂರಿನಲ್ಲಿ ನಡೆದ ಕಾಂಗ್ರೆಸ್ ಸಾಧನಾ ಸಮಾವೇಶದಲ್ಲಿ ಭಾಗಿಯಾಗಿದ್ದ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಅವರಿಂದು ಶ್ರೀಸಿದ್ದಗಂಗಾಮಠಕ್ಕೆ ಭೇಟಿ ನೀಡಿ ಶ್ರೀ ಸಿದ್ದಲಿಂಗ ಸ್ವಾಮಿಗಳ ಆಶೀರ್ವಾದ ಪಡೆದರು.


## ವಿದ್ಯುತ್ ತಂತಿ ತಗಲಿ ಬಣವೆಗಳು ಸುಟ್ಟು ಭಸ್ಮ

• ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ

ತಾಲೂಕಿನ ಸಮೀಪದ ಹೊಸ ನೆಲ್ಲೂಡಿ ಗ್ರಾಮದಲ್ಲಿ ಸೋಮವಾರ ರಾತ್ರಿ 7.30 ಸಮಯದಲ್ಲಿ ವಿದ್ಯುತ್ ತಂತಿ ಕಟ್ಟಾಗಿ ಹುಲ್ಲು ಬಣವೆ ಮೇಲೆ ಬಿದ್ದು ಬಣವೆ ಸುಟ್ಟು ಬೂದಿಯಾದ ಘಟನೆ ನಡೆದಿದೆ.

ಈ ಸಂದರ್ಭದಲ್ಲಿ ಬಣವೆಯ ಮಾಲೀಕ ನಾಯಕರ ಸ್ವಾಮಿ ಹಾಗೂ ಹರಿಜನ ಹುಲುಗಪ್ಪ ಮಾತನಾಡಿ ಬೇಸಿಗೆ ಸಮಯದಲ್ಲಿ ದನ ಕರುಗಳಿಗೆ ಮೇವು ಸಿಗುವುದೇ ತುಂಬಾ ಕಷ್ಟ ಇದೆ. ಈ ಹುಲ್ಲಿನ ಬಣವೆಯನ್ನು ಸಾಲ ಸೂಲ ಮಾಡಿ ಬೇರೆ ಕಡೆಯಿಂದ ಸಂಗ್ರಹಿಸಿ ಸುಮಾರು 3 ಬಣವೆಗಳನ್ನ ಹಾಕಿದ್ದೆವು.

101 ಸಂಖ್ಯೆಗೆ 10 ರಿಂದ 20 ಬಾರಿ ಕಾಲ್ ಮಾಡಿದರು ಯಾವುದೇ ಕಾಲ್ ರಿಚ್ ಆಗಿಲ್ಲ, ಪಕ್ಕದಲ್ಲಿ ಇನ್ನೂ ಐದಾರು ಬಣವೆ ಇದ್ದು ಹಾಗೂ ಹತ್ತಿರದಲ್ಲಿ ಮನೆ ಆಂಜಿನಯ್ಯ ದೇವಸ್ಥಾನ ಹಾಗೂ ಹಾರ್ವೆಸ್ಟರ್ ಮಿಷನಗಳಿದ್ದು, ಬಹಳಷ್ಟು ತೊಂದರೆ ಆಗುವ ಸಂಭವ ಸೃಷ್ಟಿಯಾಗಿತ್ತು. ಇಂಥ ಸಂದರ್ಭದಲ್ಲಿ ಮನೆ ಮನೆಯಿಂದ ನೀರನ್ನು ಸಂಗ್ರಹಿಸಿ ಊರಿನ ಜನರು ಬೆಂಕಿಯನ್ನು ಹಾರಿಸುವ ಅರಸಹಾಸ ಪಟ್ಟರು.



ವಿಶೇಷವಾಗಿ ಸೋಮವಾರ ಮುಂಜಾನೆಯಿಂದ ಕರೆಂಟ್ ಇಲ್ಲದೆ, ನಮ್ಮ ಹಳ್ಳಿಯಲ್ಲಿ ನೀರಿನ ಕೊರತೆಗಳು ಸಹ ಬಹಳಷ್ಟು ಇತ್ತು . ನೀರಿಲ್ಲದ ಸಮಯದಲ್ಲಿ ಇಂತಹ ಒಂದು ದುರ್ಘಟನೆ ಸಂಭವಿಸಿದ್ದು ಅಧಿಕಾರಿಗಳು ಹಾಗೂ ಸಂಬಂಧಪಟ್ಟ ಇಲಾಖೆ ಮುಂದಿನ ದಿನಗಳಲ್ಲಿ ಇಂಥ ದುರ್ಘಟನೆ ಆಗದಂತೆ ಕ್ರಮವಹಿಸಬೇಕು. ಇಲ್ಲದಿದ್ದರೆ ರೈತರು ಈ ನಷ್ಟವನ್ನು ತಾಳಲಾರದೆ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬರುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಗ್ರಾಮದ ಹಿರಿಯರು ಯುವಕರು ಸೇರಿದಂತೆ ಅಗ್ನಿಶಾಮಕ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯತಿ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಜನರ ನೀರಿನ ದಾಹ, ಜಿಲ್ಲಾಡಳಿತ ದ್ರೋಹ..!

• ಸತೀಶಕುಮಾರ ತುಪ್ಪದ, ಬೀದರ್

**ಪಂಚಾಯಿತಿ ಫಜೀತಿ**

ಜೀವನಕ್ಕೆ ನೀರೇ ಆಧಾರ ಎಂಬ ಮಾತು ಕೇವಲ ಘೋಷಣೆಯಾಗಿ ಉಳಿದಿದೆ. ಔರಾದ ತಾಲೂಕಿನ ಕೌಠಾ(ಬಿ) ಗ್ರಾಮ ಪಂಚಾಯತ ವ್ಯಾಪ್ತಿಯ ಕೌಠಾ(ಬಿ), ಕೌಡಗಾಂವ್, ಗಡಿಕುಸನೂರ, ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಇದ್ದು, ಈ ಗ್ರಾಮಕ್ಕೆ ಸರಕಾರದ ಶುದ್ಧ ಕುಡಿಯುವ ನೀರಿನ ಘಟಕ ಕೊಟ್ಟ ಆಘಾತವೇನೇನೂ ಇಲ್ಲ, ಆದರೆ ಅದು ಕಳೆದ ಕೆಲವು ತಿಂಗಳಿಂದ ಅನುಮಾನಾಸ್ಪದವಾಗಿ ಸಂಪೂರ್ಣ ನಿಷ್ಕ್ರಿಯವಾಗಿ ನಿಂತಿರುವುದು ಜನರ ನಿತ್ಯಜೀವನಕ್ಕೆ ದೊಡ್ಡ ಸಂಕಷ್ಟವಾಗಿದೆ.

**ಬದ್ಧತೆಯ ಕೊರತೆ:** ಒಂದೆಡೆ ಸರ್ಕಾರ ಆರೋಗ್ಯಕರ ಜೀವನಕ್ಕಾಗಿ ಶುದ್ಧ ಕುಡಿಯುವ ನೀರಿನ ಹಕ್ಕಿನ ಬಗ್ಗೆ ಜಾಗೃತಿ ಮೂಡಿಸುತ್ತಿದ್ದರೆ, ಇನ್ನೊಂದೆಡೆ ಗ್ರಾಮೀಣ ಪ್ರದೇಶಗಳಲ್ಲಿ ಇಂತಹ ಮೂಲಭೂತ ಸೌಕರ್ಯಗಳ ನಿರ್ವಹಣೆಯಲ್ಲಿ ಭಾರೀ ಬದ್ಧತೆಯ ಕೊರತೆಯಿದೆ ಎಂಬುದು ಈ ಘಟನೆಯಿಂದ ಸ್ಪಷ್ಟವಾಗುತ್ತಿದೆ.

**ಊರಿನಲ್ಲಿ ಯೋಜನೆ ಇದೆ, ಆದರೆ ನೀರಿಲ್ಲ..!**

ತುಕ್ಕು ಹಿಡಿದ ನೀರಿ ಘಟಕ: ಗ್ರಾಮದಲ್ಲಿ ಲಕ್ಷಾಂತರ



ರೂಪಾಯಿ ವೆಚ್ಚದಲ್ಲಿ ಗ್ರಾಮ ಪಂಚಾಯತ ವ್ಯಾಪ್ತಿಯ ಕೆಲ ಗ್ರಾಮದಲ್ಲಿ ಕಟ್ಟಲಾದ ಶುದ್ಧ ಕುಡಿಯುವ ನೀರಿನ ಘಟಕ ಪ್ರಾರಂಭದಲ್ಲಿ ಕೆಲವು ತಿಂಗಳು ಮಾತ್ರ ಸರಿಯಾಗಿ ಕಾರ್ಯನಿರ್ವಹಿಸಿತು. ಹಳ್ಳಿಯಲ್ಲಿ ಕೊಡಕ್ಕೆ 5 ರೂಪಾಯಿಯಂತೆ ದರ ನಿಗದಿಯಂತೆ ಇತ್ತು, ಪ್ರಾರಂಭದಲ್ಲಿ ಸರಿಯಾಗಿಯೇ ಚಲಾವಣೆಯಲ್ಲಿತ್ತು ನಂತರ ನಿರ್ಲಕ್ಷ್ಯ, ನಿರ್ವಹಣಾ ಕೊರತೆ, ಮತ್ತು ಅಧಿಕಾರಿಗಳ ಗಮನದ ಅಭಾವದಿಂದಾಗಿ ಸಂಪೂರ್ಣವಾಗಿ ಸ್ಥಗಿತಗೊಂಡಿದೆ. ಪೂರ್ತಿ ಘಟಕಕ್ಕೆ ಬೀಗ ಬಿದ್ದಿದ್ದು, ನೀರಿನ ಘಟಕವು ತುಕ್ಕು ಹಿಡಿದು ಧೂಳು ತಿನ್ನುತ್ತಿದೆ.

### ದೂರದ ಬೋರ್‌ವೆಲ್‌ಗಳೇ ಬದುಕಿಗೆ ಆಸರೆ

ಇಲ್ಲಿನ ಜನರಿಗೆ ಈಗ ಶುದ್ಧ ಕುಡಿಯುವ ನೀರಿನಿಗಾಗಿ ದಿನವಿಡೀ ಕಾಲ ಕಳೆಯಬೇಕಾಗಿದೆ. ಕೆಲವರು ಗ್ರಾಮದಲ್ಲಿನ ದೂರದ ಬಾವಿಗಳ, ಬೊರಗಳಿಗೆ ತೆರಳಿ ನೀರನ್ನು ತರುತ್ತಿದ್ದಾರೆ. ಇದರಿಂದ ಮಹಿಳೆಯರು, ಹಿರಿಯ ನಾಗರಿಕರು, ಮಕ್ಕಳು ಎಲ್ಲರೂ ತೊಂದರೆಗೆ ಒಳಗಾಗುತ್ತಿದ್ದಾರೆ. ಶಾಲೆಗೆ ಹೋಗುವ ಮಕ್ಕಳಿಗೂ ಬೆಳಿಗ್ಗೆ ನೀರಿನ ಹಂಗಾಮದಿಂದಾಗಿ ಸಮಯ ತಪ್ಪುತ್ತಿದೆ ಎಂದು ಕೆಲ ಪೋಷಕರು ದುರುತ್ತಿದ್ದಾರೆ.

### ಅಧಿಕಾರಿಗಳ ತೀವ್ರ ನಿರ್ಲಕ್ಷ್ಯ

ಸಮಸ್ಯೆ ಬಗ್ಗೆ ಹಲವಾರು ಬಾರಿ ಪಂಚಾಯತ್ ಸದಸ್ಯರಿಂದ ಜಿಲ್ಲಾ ಪಂಚಾಯತ್ ಅಧಿಕಾರಿಗಳಿಗೆ ದೂರು ನೀಡಲಾಗಿದೆ. ಆದರೂ ಕ್ರಮವಿಲ್ಲ. ಸ್ಥಳೀಯ ನಿವಾಸಿಗಳ ಪ್ರಕಾರ, ನಮ್ಮ ಆಲೋಚನೆ ಕೇಳೋಕೆ ಬಂದ ಅಧಿಕಾರಿಯನ್ನೂ ಕಳೆದ ಎರಡು ತಿಂಗಳುಗಳಿಂದ ಕಾಣಲೇ ಇಲ್ಲ, ಇದು ಸರ್ಕಾರದ ಯೋಜನೆಗಳಿಗೆ ಭದ್ರತೆ ಎಷ್ಟು ಕಡಿಮೆಯಿದೆ ಎಂಬುದನ್ನು ತೋರಿಸುತ್ತದೆ.

### ರೂಪಿಸಿದ ಯೋಜನೆ ಸ್ಥಗಿತ, ಇಡೀ ಗ್ರಾಮಸ್ಥರ ಆಕ್ರೋಶ..!

ಈ ಯೋಜನೆ ರೂಪಿಸಿದ್ದು ಜನಸಾಮಾನ್ಯರಿಗಾಗಿ, ಆದರೆ ಅದು ನಿಂತು ಹೋಗಿದ್ದು ಕೆಲವರ ನಿರ್ಲಕ್ಷ್ಯದಿಂದ ಎನ್ನುತ್ತಾರೆ ಗ್ರಾಮಸ್ಥರು. ಮೂಲಸೌಕರ್ಯಗಳ ಅಭಾವವಿದ್ದರೂ ಸಹ ನಾವು ಸಹನೆ ತೋರುತ್ತಿದ್ದೆವು, ಆದರೆ ನೀರಿನಂತಹ ಮೂಲಭೂತ ಅವಶ್ಯಕತೆಗೆ ಇಷ್ಟೊಂದು ನಿರ್ಲಕ್ಷ್ಯ ತೋರುತ್ತಿರುವುದು ಎಷ್ಟರ ಮಟ್ಟಿಗೆ ಸರಿ? ಎಂದು ಜನತೆ ಕೇಳುತ್ತಿದ್ದಾರೆ.

15ನೇ ಹಣಕಾಸು ಯೋಜನೆಯಲ್ಲಿ ಹಣದ ಕೊರತೆ ಇರುವುದರಿಂದ ಕೆಲ ದಿನಗಳಿಂದ ಘಟಕಗಳ ನಿರ್ವಹಣೆ ಮತ್ತು ದುರಸ್ತಿ ಕಾರ್ಯ ಸ್ಥಗಿತಗೊಂಡಿತ್ತು. ಆದರೆ ಜನರಿಗೆ ಯಾವುದೇ ತೊಂದರೆ ಆಗದಂತೆ ಒಂದು ವಾರದೊಳಗೆ ಶುದ್ಧ ಕುಡಿಯುವ ನೀರಿನ ಘಟಕವನ್ನು ದುರಸ್ತಿ ಮಾಡಿ ಪುನಃ ಆರಂಭಿಸಲಾಗುವುದು.

–ಕಿರಣ ಪಾಟೀಲ್
ಔರಾದ್ ಇಒ, ತಾಲೂಕು ಪಂಚಾಯತ್

ಸ್ಥಳೀಯ ಪಂಚಾಯತ್, ಗ್ರಾಮೀಣ ಕುಡಿಯುವ ನೀರಿನ ಇಲಾಖೆಯ ಅಧಿಕಾರಿಗಳು ಈ ಘಟಕವನ್ನು ಪರಿಶೀಲನೆಗೂ ಬಾರದಿರುವುದು ವಿಪರ್ಯಾಸ. ಗ್ರಾಮಸ್ಥರು ಈ ಬಗ್ಗೆ ಅನೇಕ ಬಾರಿ ದೂರು ನೀಡಿದರೂ ಕ್ರಮವೇ ಇಲ್ಲ. ಇಲ್ಲಿಯವರಿಗೆ ಸಮಸ್ಯೆ ದೂರ ಮಾಡಲು ಬರುವವರಿಗಿಂತ ಭರವಸೆ ನೀಡುವವರು ಹೆಚ್ಚು.

–ಗೌತಮ ಮೇತ್ರೆ, ಅಧ್ಯಕ್ಷ,
ಭೀಮ ಆರ್ಮಿ ಏಕ್ತಾ ಮಿಸನ ಔರಾದ ತಾಲೂಕು

**ಅನಕ್ಷರಸ್ಥ ಪ್ರಧಾನಿಯಿಂದಾಗಿ ಪೆಟ್ರೋಲ್–ಡೀಸೆಲ್ ಮತ್ತು ಅನಿಲ ಬೆಲೆಗಳು ಹೆಚ್ಚಳವಾಗಿದೆ: ಸಿಎಂ ಸಿದ್ದರಾಮಯ್ಯ**

## ಪೆಟ್ರೋಲ್, ಡೀಸೆಲ್ ಕೊರತೆ: ಜನರಲ್ಲಿ ಹೆಚ್ಚುತ್ತಿರುವ ಆತಂಕ

ದೇಶದ ಮಹಾರಾಷ್ಟ್ರ, ಆಂಧ್ರ ಪ್ರದೇಶ ಸೇರಿದಂತೆ ಹಲವು ರಾಜ್ಯಗಳಲ್ಲಿ ಕೆಲ ಪೆಟ್ರೋಲ್ ಬಂಕ್‌ಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗುತ್ತಿರುವ ಸುದ್ದಿ ಸಾರ್ವಜನಿಕರಲ್ಲಿ ಆತಂಕ ಮೂಡಿಸಿದೆ. ವಾಹನ ಸವಾರರು ಗಂಟೆಗಳ ಕಾಲ ಸಾಲಿನಲ್ಲಿ ನಿಂತು ಇಂಧನ ಪಡೆಯುವ ಪರಿಸ್ಥಿತಿ ಎದುರಾಗಿದ್ದು, ಸಾಮಾನ್ಯ ಜನರ ದೈನಂದಿನ ಬದುಕಿನ ಮೇಲೂ ಪರಿಣಾಮ ಬೀರುತ್ತಿದೆ.

## ಸಂಪಾದಕೀಯ

**ಮಾಣಿಕರೆಡ್ಡಿ ಕೌಡಾಳೆ**
**ಪ್ರಧಾನ ಸಂಪಾದಕರು**
**ಮೊ: 9845028349**



ಇಂಧನವು ಇಂದಿನ ಜೀವನದ ಅವಿಭಾಜ್ಯ ಅಂಗವಾಗಿದೆ. ರೈತರಿಂದ ಹಿಡಿದು ವ್ಯಾಪಾರಿಗಳವರೆಗೆ, ವಿದ್ಯಾರ್ಥಿಗಳಿಂದ ಉದ್ಯೋಗಿಗಳವರೆಗೆ ಪ್ರತಿಯೊಬ್ಬರ ಬದುಕು ಸಾರಿಗೆ ವ್ಯವಸ್ಥೆಯ ಮೇಲೆ ಅವಲಂಬಿತವಾಗಿದೆ. ಇಂತಹ ಸಂದರ್ಭದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಕೊರತೆ ಉಂಟಾದರೆ ಜನರಲ್ಲಿ ಸಹಜವಾಗಿಯೇ ಭಯ ಮತ್ತು ಗೊಂದಲ ಉಂಟಾಗುತ್ತದೆ.

ಕೆಲವೆಡೆ ಸಾರಿಗೆ ಸಮಸ್ಯೆ, ಸರಬರಾಜು ವ್ಯತ್ಯಯ, ಟ್ಯಾಂಕರ್ ಚಾಲಕರ ಮುಷ್ಕರ ಅಥವಾ ತಾಂತ್ರಿಕ ಕಾರಣಗಳಿಂದ ತಾತ್ಕಾಲಿಕ ಕೊರತೆ ಉಂಟಾಗಬಹುದು. ಆದರೆ ಈ ಬಗ್ಗೆ ಸರ್ಕಾರ ಮತ್ತು ತೈಲ ಕಂಪನಿಗಳು ತಕ್ಷಣ ಸ್ಪಷ್ಟ ಮಾಹಿತಿ ನೀಡುವುದು ಅತ್ಯಂತ ಅಗತ್ಯ. ಮಾಹಿತಿ ಕೊರತೆಯಿಂದ ಜನರು ಅಗತ್ಯಕ್ಕಿಂತ ಹೆಚ್ಚು ಇಂಧನ ಸಂಗ್ರಹಿಸಲು ಮುಂದಾಗುತ್ತಾರೆ. ಇದರಿಂದ ಸಮಸ್ಯೆ ಇನ್ನಷ್ಟು ಗಂಭೀರವಾಗುವ ಸಾಧ್ಯತೆ ಇದೆ.

ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಜನರಲ್ಲಿ ಆತಂಕ ನಿವಾರಿಸಲು ಸ್ಪಷ್ಟ ಪ್ರಕಟಣೆ ನೀಡಬೇಕು. ತೈಲ ಸರಬರಾಜು ನಿರಂತರವಾಗಿರುವಂತೆ ಕ್ರಮ ಕೈಗೊಳ್ಳಬೇಕು. ಪೆಟ್ರೋಲ್ ಬಂಕ್ ಮಾಲೀಕರು ಸಹ ಕೃತಕ ಕೊರತೆ ಸೃಷ್ಟಿಸದೆ, ನಿಯಮಬದ್ಧವಾಗಿ ಇಂಧನ ವಿತರಣೆ ಮಾಡಬೇಕು.

ಜನತೆ ಕೂಡ ಆತಂಕಕ್ಕೆ ಒಳಗಾಗದೆ ಶಾಂತವಾಗಿರಬೇಕು. ಅಗತ್ಯವಿರುವಷ್ಟೇ ಇಂಧನ ಖರೀದಿಸುವುದು ಮತ್ತು ವದಂತಿಗಳಿಗೆ ಕಿವಿಗೊಡದಿರುವುದು ಸಮಾಜದ ಹೊಣೆಗಾರಿಕೆ. ಸರ್ಕಾರ, ತೈಲ ಕಂಪನಿಗಳು ಮತ್ತು ಸಾರ್ವಜನಿಕರ ಸಹಕಾರದಿಂದ ಮಾತ್ರ ಇಂತಹ ಸಮಸ್ಯೆಗಳನ್ನು ಸುಗಮವಾಗಿ ಎದುರಿಸಲು ಸಾಧ್ಯ.

## ‘ಸಮಾದಾನ ಸಮಾರೋಹ’ ವಿಶೇಷ ಲೋಕ ಅದಾಲತ್



**ಕಲಬುರಗಿ:** ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ‘ಸಮಾದಾನ ಸಮಾರೋಹ; ವಿಶೇಷ ಲೋಕ ಅದಾಲತ್ ಕಾರ್ಯಕ್ರಮವು ಆಗಷ್ಟ ತಿಂಗಳ 21, 22, ಮತ್ತು 23ರಂದು ಮೂರು ದಿನಗಳ ಕಾಲ ನಡೆಯಲಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ನ್ಯಾಯಾಧೀಶರಾದ ಶ್ರೀನಿವಾಸ ನವಲೆ ತಿಳಿಸಿದರು.

ನಗರದ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಕರೆದ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಕಲಬುರಗಿ ಜಿಲ್ಲೆಯಲ್ಲಿ ಇತ್ಯರ್ಥಗೊಂಡ ಪ್ರಕರಣಗಳ ಕುರಿತು ಈಗ ಅವುಗಳ ಬಗ್ಗೆ ಸರ್ವೋಚ್ಚ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳನ್ನು ರಾಜಿ ಮೂಲಕ ಇತ್ಯರ್ಥಪಡಿಸಿಕೊಳ್ಳಲು ವಿಶೇಷ ಲೋಕ ಅದಾಲತ್ ಆಯೋಜಿಸಲಾಗಿದೆ. ಪಕ್ಷಗಾರರು ನವದೆಹಲಿಗೆ ಹೋಗದೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಛೇರಿಯಲ್ಲಿ ಮತ್ತು ತಾಲ್ಲೂಕು ಕಾನೂನು ಸೇವಾ ಸಮಿತಿಯಲ್ಲಿ ಹಾಜರಾಗಿ ರಾಜಿ ಸಂಧಾನಕ್ಕೆ ಮಧ್ಯಸ್ಥಗಾರರ ಮೂಲಕ ಪ್ರಕರಣವನ್ನು ಇತ್ಯರ್ಥಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ರಾಜಿ ಸಂಧಾನದಲ್ಲಿ ಭಾಗವಹಿಸಲು ವಿ.ಸಿ. ಸೌಲಭ್ಯ ಸಹ ಇರುತ್ತದೆ. ಕಾರಣ ಕಲಬುರಗಿ ಜಿಲ್ಲೆಯಲ್ಲಿ ಇತ್ಯರ್ಥಗೊಂಡಿರುವ ಪ್ರಕರಣಗಳ ಕುರಿತು ಸರ್ವೋಚ್ಚ ನ್ಯಾಯಾಲಯದಲ್ಲಿರುವ ಪ್ರಕರಣಗಳನ್ನು ರಾಜಿ ಮೂಲಕ ಇತ್ಯರ್ಥಪಡಿಸಿಕೊಳ್ಳಲು ಕಕ್ಷಿದಾರರು ಸಹಕರಿಸಬೇಕೆಂದು ಮತ್ತು ತಮ್ಮ ಪ್ರಕರಣಗಳನ್ನು ರಾಜಿ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ಭಾಗ ವಹಿಸಬೇಕೆಂದು ಕಕ್ಷಿದಾರರಿಗೆ ಸಲಹೆ ನೀಡಿದರು.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕರ್ನಾಟಕಕ್ಕೆ ಸಂಬಂಧಪಟ್ಟ ಒಟ್ಟು 4,328 ಪ್ರಕರಣಗಳನ್ನು ಈ ಪೂರ್ವ ಸಮಾಧಾನ ಪ್ರಕ್ರಿಯೆಗಾಗಿ ಗುರುತಿಸಿದ್ದು, ಇವುಗಳನ್ನು ಜಿಲ್ಲಾವಾರು ವಿಂಗಡಿಸಿ ಆಯಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳಿಗೆ ರವಾನಿಸಲಾಗಿದೆ. ಇದರಲ್ಲಿ ಸರ್ಕಾರಿ ಸಂಸ್ಥೆಗಳು ಪಕ್ಷಗಾರರಾಗಿರುವ 937 ಕ್ಕೂ ಹೆಚ್ಚು ಪ್ರಕರಣಗಳೂ ಸೇರಿದ್ದು, ಇವುಗಳ ಶೀಘ್ರ ಇತ್ಯರ್ಥಕ್ಕಾಗಿ ಮಾನ್ಯ ಅಡ್ವೋಕೇಟ್ ಜನರಲ್ ಅವರೊಂದಿಗೆ ಸಭೆ ನಡೆಸಿ ಸರ್ಕಾರದ ಪೂರ್ಣ ಸಹಕಾರವನ್ನು ಕೋರಲಾಗಿದೆ ಎಂದು ಹೇಳಿದರು.

ಈ ವಿಶೇಷ ಅದಾಲತ್ನಲ್ಲಿ ಬ್ಯಾಂಕಿಂಗ್, ನಾಗರಿಕ ಕಾನೂನು (ಅತುಟ), ಪರಿಹಾರ ಪ್ರಕರಣಗಳು, ಗ್ರಾಹಕ ವ್ಯಾಜ್ಯಗಳು ಮತ್ತು ರೇರಾ (ಖಇಖಂ), ಕ್ರಿಮಿನಲ್, ಕೌಟುಂಬಿಕ ವಿವಾದಗಳು, ಕಾರ್ಮಿಕ ಮತ್ತು ಕೈಗಾರಿಕಾ ಕಾನೂನುಗಳು, ಭೂಸ್ವಾಧೀನ, ಆಸ್ತಿ ತೆರಿಗೆ ಹಾಗೂ ಬಾಡಿಗೆ ನಿಯಂತ್ರಣಕ್ಕೆ ಸಂಬಂಧಿಸಿದ 12 ಪ್ರಮುಖ ವಿಭಾಗಗಳ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗುತ್ತದೆ.

ವಕೀಲರು ಮತ್ತು ಸಾರ್ವಜನಿಕರು ಈ ಅದಾಲತ್ನ ಪ್ರಯೋಜನ ಪಡೆಯಲು ಸುಪ್ರೀಂ ಕೋರ್ಟ್ನ ಅಧಿಕೃತ ವೆಬ್ಸೈಟ್ www.sci.gov.in ನಲ್ಲಿ ಲಭ್ಯವಿರುವ ಗೂಗಲ್ ಫಾರ್ಮ್ ಲಿಂಕ್ ಮೂಲಕ ತಮ್ಮ ವಿನಂತಿಯನ್ನು ಸಲ್ಲಿಸಬಹುದು. ನ್ಯಾಯಾಲಯದ ಅಲೆದಾಟವಿಲ್ಲದೆ, ಉಚಿತವಾಗಿ ಹಾಗೂ ಸೌಹಾರ್ದಯುತವಾಗಿ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಅವರು ಮನವಿ ಮಾಡಿದರು.

# ಎಚ್.ಡಿ ದೇವೇಗೌಡರ ಜನ್ಮದಿನ ಅದ್ದೂರಿ ಆಚರಣೆ

• **ಮಲ್ಲಮ್ಮ ನುಡಿ ವಾರ್ತೆ ಶಿಡ್ಲಘಟ್ಟ**



ಮಾಜಿ ಪ್ರಧಾನಿ ಮತ್ತು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರ ರಾಜ್ಯಸಭಾ ಸದಸ್ಯತ್ವ ಅವಧಿ ಬರುವ ಜೂ.25ಕ್ಕೆ ಮುಕ್ತಾಯವಾಗುವುದರಿಂದ ಮತ್ತೊಮ್ಮೆ ರಾಜ್ಯಸಭೆ ಪ್ರವೇಶಿಸಲು ಅವರನ್ನ ಅವಿರೋಧವಾಗಿ ಆಯ್ಕೆ ಮಾಡಿ ಕಳಿಸಬೇಕು ಎಂಬುದೇ ನಮ್ಮ ಆಶಯ ಎಂದು ಶಾಸಕ ಬಿ.ಎನ್ ರವಿಕುಮಾರ್ ಅವರು ಅಭಿಪ್ರಾಯಪಟ್ಟರು.

ನಗರದ ಹೊರಹೊಲಯದ ಹಂಡಿಗನಾಳ ಗ್ರಾಮದ ಶ್ರೀ ಬಾಲಾಜಿ ಕನ್ವೆನ್ಷನ್ ಹಾಲ್ ನಲ್ಲಿ ಹಮ್ಮಿಕೊಂಡಿದ್ದ ಭಾರತದ ಮಾಜಿ ಪ್ರಧಾನ ಮಂತ್ರಿ ಹಾಗೂ ನಾಡಿನ ಮಣ್ಣಿನ ಮಗ ಹೆಚ್.ಡಿ ದೇವೇಗೌಡ ಅವರ 94ನೇ ಹುಟ್ಟುಹಬ್ಬದ ಪ್ರಯುಕ್ತ ಕೇಕ್ ಕತ್ತರಿಸಿ ಮಾತನಾಡಿದರು.

ಮುಂಬರುವ ರಾಜ್ಯಸಭಾ ಚುನಾವಣೆಯಲ್ಲಿ ಮಾಜಿ ಪ್ರಧಾನ ಮಂತ್ರಿಗಳು ಮಣ್ಣಿನ ಮಗ ಎಚ್.ಡಿ ದೇವೇಗೌಡ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಿ ಕಳಿಸಿದರೆ,ಇಡೀ ಕರ್ನಾಟಕ ರಾಜ್ಯದ ರೈತರಿಗೆ ಹೆಮ್ಮೆಯಾಗುತ್ತದೆ.ರಾಜ್ಯ ಅಭಿವೃದ್ಧಿಯಾಗುತ್ತದೆ ಅದರಲ್ಲೂ ಮುಖ್ಯವಾಗಿ ನೀರಾವರಿ ಯೋಜನೆಗಳು,ರೈತರ ಪರ ಸದನದಲ್ಲಿ ಧ್ವನಿ ಎತ್ತಲಿದ್ದಾರೆ. ಅಷ್ಟೇ ಅಲ್ಲದೆ ಈ ರಾಜ್ಯದ ಪರ ಯೋಜನೆಗಳನ್ನ, ಅನುದಾನಗಳನ್ನ ತರುವ ಪ್ರಯತ್ನ ಈ ರಾಜ್ಯದ ಮಾಜಿ ಪ್ರಧಾನಿ ದೇವೇಗೌಡ ಅವರು ಮಾಡುತ್ತಾರೆಂಬ ನಂಬಿಕೆಯಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಸಂಸದ ಮಲ್ಲೇಶ್ ಬಾಬು ರವರು ದೇವೇಗೌಡರು ದೇಶದ ರಾಜಕಾರಣದಲ್ಲಿ ಅಪಾರ ಅನುಭವ ಹೊಂದಿರುವ ಹಿರಿಯ ನಾಯಕರು.ರೈತರ ಸಮಸ್ಯೆಗಳಿಗೆ ಸದಾ ಸ್ಪಂದಿಸಿದ ಅವರು ಸಾಮಾನ್ಯ ಜನರ ಧ್ವನಿಯಾಗಿ ಕೆಲಸ ಮಾಡಿದ್ದಾರೆ.

ಪ್ರಧಾನಿಯಾಗಿ ಸೇವೆ ಸಲ್ಲಿಸಿದ ಅವಧಿಯಲ್ಲೂ ಗ್ರಾಮೀಣಾಭಿವೃದ್ಧಿ ಹಾಗೂ ರೈತರ ಹಿತಾಸಕ್ತಿಗೆ ಹೆಚ್ಚಿನ ಆದ್ಯತೆ ನೀಡಿದ್ದರು.ಇಂತಹ ಮಹಾನ್ ನಾಯಕನ ಜನ್ಮದಿನವನ್ನು ಸಮಾಜಮುಖಿ ಕಾರ್ಯಕ್ರಮಗಳ ಮೂಲಕ ಆಚರಿಸುತ್ತಿರುವುದು ಶ್ಲಾಘನೀಯ ಕಾರ್ಯ ಎಂದು ಹೇಳಿದರು.

ಸರ್ಕಾರಿ ಶಾಲೆಯ 10ನೇ ತರಗತಿ ವಿದ್ಯಾರ್ಥಿಗಳು ಅತಿ ಹೆಚ್ಚು ಅಂಕ ಗಳಿಸಿದವರಿಗೆ ಮೊದಲನೇ ಬಹುಮಾನ ಒಂದು ಲಕ್ಷ ದ್ವಿತೀಯ ಬಹುಮಾನ 50,000 ಹಾಗೂ ತೃತೀಯ ಬಹುಮಾನ 25000 ಘೋಷಣೆ ಮಾಡಿದ್ದರು. ಅದರಂತೆಯೇ ಶಿಡ್ಲಘಟ್ಟ ತಾಲೂಕಿನ ಸಾದಲಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಪ್ರಶಾಂತ್.ಎಂ,592 ಅಂಕ ಪಡೆದು, ಪ್ರಥಮ ಬಹುಮಾನವಾಗಿ 1 ಲಕ್ಷ, ರಶ್ಮಿ ಪಿಎಸ್ ಹಾಗೂ ವೈಭವಿ ಎ ಅವರು 589 ಅಂಕ ಪಡೆದು ದ್ವಿತೀಯ ಬಹುಮಾನವಾಗಿ ಇಬ್ಬರಿಗೆ ತಲಾ 50 ಸಾವಿರ ಹಾಗೂ ಮಾನಸ 581 ಅಂಕ ಪಡೆದು ತೃತೀಯ ಬಹುಮಾನವಾಗಿ 25 ಸಾವಿರ ನಗದನ್ನು ನೀಡಿದರು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಇಂಚರ ಗೋವಿಂದರಾಜು,ಚಿಮುಲ್ ನಿರ್ದೇಶಕರಾದ(ಬಂಕ್) ಮುನಿಯಪ್ಪ,ಹುಜಗೂರು ರಾಮಯ್ಯ,ಕೆಂಚಾರ್ಲಹಳ್ಳಿ ಕೃಷ್ಣಾರೆಡ್ಡಿ ,ಶಿಡ್ಲಘಟ್ಟ ತಾಲ್ಲೂಕು ಜೆಡಿಎಸ್ ಪಕ್ಷದ ಅಧ್ಯಕ್ಷ ಡಿ.ಬಿ ವೆಂಕಟೇಶ್,ನಗರ ಘಟಕ ಅಧ್ಯಕ್ಷೆ ಮಂಜುಳಮ್ಮ,ಶಿಡ್ಲಘಟ್ಟ ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷ ಎ.ನಾರಾಯಣಸ್ವಾಮಿ,ಕೋಲಾರ ಜಿಲ್ಲಾ ಜೆಡಿಎಸ್ ಮುಖಂಡ ವಕ್ಕಲೇರಿ ರಾಮು,ಪೂಲಕುಂಟಹಳ್ಳಿ ರಘುನಾಥರೆಡ್ಡಿ,ಮುಖಂಡರಾದ ಗಂಜಿಗುಂಟೆ ನರಸಿಂಹಮೂರ್ತಿ,ಈ.ತಿಮ್ಮಸಂದ್ರ ಶಿವಾರೆಡ್ಡಿ ,ಜೆ.ವಿ.ಸದಾಶಿವ,ತಿಮ್ಮನಾಯಕನಹಳ್ಳಿ ರಮೇಶ್,ನಗರಸಭೆ ಮಾಜಿ ಅಧ್ಯಕ್ಷ ವೆಂಕಟಸ್ವಾಮಿ ಮುಖಂಡರಾದ ತಾದೂರು ರಘು,ಮೇಲೂರು ಉಮೇಶ್,ಮಂಜುನಾಥ್,ಎಸ್.ಎಂ ರಮೇಶ್,ನಂದ ಕಿಶನ್, ಚೌಡಸಂದ್ರ ಸಿ ಕೆ ಗಜೇಂದ್ರ ಬಾಬು, ಶಾಸಕ ರವಿಕುಮಾರ್ ಅವರ ಅಭಿಮಾನಿಗಳು ಮತ್ತು ಜೆಡಿಎಸ್ ಕಾರ್ಯಕರ್ತರು ಹಾಜರಿದ್ದರು.

## ಬಟ್ಟೆ ತೊಳೆಯಲು ಹೋದ ಬಾಲಕಿಯರ ಸಾವು

• **ಮಲ್ಲಮ್ಮ ನುಡಿ ವಾರ್ತೆ ಕುಕನೂರ**



ತಾಲೂಕಿನ ಯರೇಹಂಚಿನಾಳ ಗ್ರಾಮದಿಂದ ಗದಗ ಕಡೆಗೆ ಹೋಗುವ ರಸ್ತೆ ಪಕ್ಕದಲ್ಲಿ ಯರೇಹಂಚಿನಾಳ ಗ್ರಾಮದ ಸಿಮೆಗೆ ಹೊಂದಿಕೊಂಡ 362ನೇ ಸರ್ವೆ ನಂಬರಿನ ಕೃಷಿ ಹೊಂಡದಲ್ಲಿ ಯಾರು ಇಲ್ಲದ ಹೊತ್ತಿನಲ್ಲಿ ಬಟ್ಟಿ ತೊಳೆಯಲು ಹೋದಾಗ ಇಬ್ಬರು ಬಾಲಕಿಯರು ಕಾಲು ಜಾರಿ ಬಿದ್ದು ಇಬ್ಬರು ಬಾಲಕಿಯರು ಮೃತಪಟ್ಟಿದ್ದಾರೆ.

ಈ ಮೃತಪಟ್ಟ ಬಾಲಕಿಯರು ಲಕ್ಷ್ಮವ್ವ ಹರಣಸಿಕಾರಿ (15) ವರ್ಷ ಮುತ್ತುವ್ವ ಹರಣಸಿಕಾರಿ (8) ವರ್ಷ ಈ ಬಾಲಕಿಯರು ಗದಗ ಜಿಲ್ಲೆ ಗದಗ ತಾಲ್ಲೂಕಿನ ತಿಮ್ಮಾಪೂರ ಗ್ರಾಮದ ನಿವಾಸಿಯ ಕಟ್ಟಪ್ಪ ಹರಣಸಿಕಾರಿ.ಮತ್ತು ಜಾರೆಪ್ಪ ಹರಣಸಿಕಾರಿ ಈ ಎರಡು ಬಡ ಕುಟುಂಬಸ್ಥರು ಬಾಲಕಿಯರನ್ನು ಕಳೆದುಕೊಂಡು ಅವರ ಆಕ್ರಂದನ ಮುಗಿಲಮುಟ್ಟಿದೆ.

ಈ ಬಡ ಕುಟುಂಬಕ್ಕೆ ಸರ್ಕಾರ ಪರಿಹಾರ ಘೋಷಣೆ ಮಾಡಬೇಕೆಂದು ಸ್ಥಳೀಯರು ಹಾಗೂ ಕುಟುಂಬಸ್ಥರು ಆಗ್ರಹಿಸಿದರು.

ಮಾಹಿತಿ ತಿಳಿದ ಕೂಡಲೇ ಕುಕನೂರ ಪೊಲೀಸ ಠಾಣೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡು ಪರಿಶೀಲನೆ ನಡೆಸಿದ್ದಾರೆ.

## ವಿವಿಧೆಡೆ ಬಿರುಗಾಳಿ ಸಹಿತ ಮಳೆ

• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ**



ನಗರ ಸೇರಿ ಗ್ರಾಮೀಣ ಭಾಗದ ವಿವಿಧೆಡೆ ಮಂಗಳವಾರ ಗುಡುಗು, ಬಿರುಗಾಳಿ ಸಹಿತ ಮಳೆ ಸುರಿದಿದೆ. ಸಾಯಂಕಾಲ 4.10 ಗಂಟೆ ಸುಮಾರಿಗೆ ಭಾರಿ ಬಿರುಗಾಳಿ, ಗುಡುಗು, ಮಿಂಚು ಸಹಿತ ಮಳೆ ಸುರಿಯಿತು. ಸುಮಾರು ಅರ್ಧ ಗಂಟೆ ಸುರಿದ ಮಳೆಗೆ ವಿವಿಧೆಡೆ ಗಿಡಗಳು, ಕೊಂಬೆಗಳು ಮುರಿದು ಬಿದ್ದಿವೆ.

ದಿಢೀರ ಸುರಿದ ಬಿರುಗಾಳಿ ಸಹಿತ ಭಾರಿ ಮಳೆಗೆ ಜನರು ಆತಂಕ್ಕಿಡಾಗಿದ್ದರು. ಅಲ್ಲಲ್ಲಿ ಓಡಾಡುತ್ತಿದ್ದ ಜನರು ತಕ್ಷಣವೇ ಮನೆಯತ್ತ ಓಡಿದರು. ಕೆಲಕಾಲ ವಿವಿಧೆಡೆ ತೆರಳುತ್ತಿದ್ದ ವಾಹನ ಸವಾರರು ವಿವಿಧೆಡೆ ಓಡೋಡಿ ಆಶ್ರಯ ಪಡೆಯುತ್ತಿರುವ ದೃಶ್ಯ ಕಂಡುಬಂತು. ಮಳೆ, ಬಿರುಗಾಳಿ ನಿಲ್ಲುವ ವರೆಗೂ ತಮ್ಮ ಪ್ರಯಾಣ ಸ್ಥಗಿತಗೊಳಿಸಿದರು. ಹಾಗಾಗಿ ಕೆಲಹೊತ್ತು ಮುಖ್ಯ ರಸ್ತೆಗಳು ಖಾಲಿ ಇರುವುದು ಕಂಡು ಬಂತು. ಮಾಸುಮ ಪಾಶಾ ಕಾಲೋನಿಯ ಬಿಎಸ್ಎನ್ಎಲ್ ಕಚೇರಿ ಸಮೀಪ ಸೇರಿ ಕೆಲವೆಡೆ ಗಿಡದ ಕೊಂಬೆಗಳು ವಿದ್ಯುತ್ ತಂತಿ ಮೇಲೆ ಮುರಿದು ಬಿದ್ದಿದ್ದರಿಂದ ವಿದ್ಯುತ್ ಸ್ಥಗಿತಗೊಂಡಿತು.

ಸುಮಾರು ಸಂಜೆ 6 ಗಂಟೆ ವರೆಗೂ ಕರೆಂಟ್ ಕೈಕೊಟ್ಟಿತು. ಇದರಿಂದ ಮೊದಲೇ ಬಿಸಿಲಿನಿಂದ ಬಸವಳಿದ ಜನರಿಗೆ ಕರೆಂಟ್ ಕೈಕೊಟ್ಟಿದ್ದು, ಮತ್ತಷ್ಟು ಶಾಕ್ ನೀಡುವಂತೆ ಮಾಡಿತು.

## ಅಂಬೇಡ್ಕರ್ ಸರ್ಕಲ್‌ಗೆ 50 ಲಕ್ಷ ಅನುದಾನ ಎಲ್ಲಿದೆ?

• **ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ**



ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ಪಟ್ಟಣದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಸರ್ಕಲ್ ನಿರ್ಮಾಣ ವಿಚಾರ ಇದೀಗ ದಲಿತ ಸಮುದಾಯದ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಹಲವು ದಶಕಗಳಿಂದ ಅಂಬೇಡ್ಕರ್ ಸರ್ಕಲ್ ನಿರ್ಮಾಣಕ್ಕೆ ಆಗ್ರಹಿಸುತ್ತಿದ್ದ ದಲಿತ ಸಂಘಟನೆಗಳು, ಈ ವರ್ಷ ಅಂಬೇಡ್ಕರ್ ಜಯಂತಿಯ ಎರಡು ವಾರಗಳ ಮುಂಚಿತವಾಗಿ ನಡೆದ ಭೂಮಿ ಪೂಜೆಯನ್ನು “ರಾಜಕೀಯ ಗಿಮಿಕ್” ಎಂದು ಆರೋಪಿಸಿವೆ.

ರಾಮನಗರ ಪೊಲೀಸ್ ಠಾಣೆ ಸಮೀಪದಲ್ಲಿ ನಿರ್ಮಾಣವಾಗಬೇಕಿರುವ ಅಂಬೇಡ್ಕರ್ ಸರ್ಕಲ್‌ಗೆ 50 ಲಕ್ಷ ರೂಪಾಯಿ ಅನುದಾನ ಮಂಜೂರಾಗಿದೆ ಎಂದು ಹೇಳಿ ಭೂಮಿ ಪೂಜೆ ನೆರವೇರಿಸಿದ ಹಾಲಿ ಶಾಸಕರಾದ ಕೆ. ನೇಮಿರಾಜ್ ನಾಯ್ಕ ವಿರುದ್ಧ ದಲಿತ ಸಂಘಟನೆಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿವೆ. ಅನುದಾನ ಯಾವ ಇಲಾಖೆಯಿಂದ ಬಂದಿದೆ, ಯಾವ ಯೋಜನೆಯಡಿ ಕಾಮಗಾರಿ ನಡೆಯುತ್ತಿದೆ ಹಾಗೂ ಗುತ್ತಿಗೆದಾರರು ಯಾರು ಎಂಬ ಪ್ರಶ್ನೆಗಳಿಗೆ ಇನ್ನೂ ಸ್ಪಷ್ಟ ಉತ್ತರ ಸಿಕ್ಕಿಲ್ಲ ಎಂದು ಪ್ರತಿಭಟನಾಕಾರರು ಆರೋಪಿಸಿದ್ದಾರೆ.

“20 ವರ್ಷಗಳ ಕಾಲ ಎಸ್‌ಸಿ ಮೀಸಲು ಕ್ಷೇತ್ರದಿಂದ ರಾಜಕೀಯ ಸೌಲಭ್ಯಗಳನ್ನು ಪಡೆದು ಅಧಿಕಾರ ಅನುಭವಿಸಿದವರು, ಅಂಬೇಡ್ಕರ್ ಅವರ ಹೆಸರಿನ ಸರ್ಕಲ್ ನಿರ್ಮಾಣಕ್ಕೆ ಇಷ್ಟು ವರ್ಷ ಯಾಕೆ ಕಾಯಬೇಕಾಯಿತು?” ಎಂಬ ಪ್ರಶ್ನೆ ಈಗ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ.

**ದಲಿತ ಸಂಘಟನೆಗಳು ಕೇಳುತ್ತಿರುವ ಪ್ರಮುಖ ಪ್ರಶ್ನೆಗಳು ಹೀಗಿವೆ:**

- 50 ಲಕ್ಷ ರೂ. ಅನುದಾನ ನಿಜವಾಗಿಯೂ ಮಂಜೂರಾಗಿದೆಯೇ?
- ಯಾವ ಇಲಾಖೆಯಡಿ ಕಾಮಗಾರಿ ನಡೆಯುತ್ತಿದೆ?
- ಟೆಂಡರ್ ಪ್ರಕ್ರಿಯೆ ನಡೆದಿದೆಯೇ?
- ಟೆಂಡರ್ ಪ್ರತಿಯನ್ನು ಕೇಳಿದಾಗ ಯಾಕೆ ನೀಡಲಾಗುತ್ತಿಲ್ಲ?
- ಕಾಮಗಾರಿ ಸ್ಥಳದಲ್ಲಿ ಇಲಾಖೆಯ ನಾಮಫಲಕ ಯಾಕಿಲ್ಲ?
- ಅಂಬೇಡ್ಕರ್ ಸಂವಿಧಾನದ ಆಶಯಗಳನ್ನು ಮಾತಿನಲ್ಲಿ ಮಾತ್ರ ಹೊಗಳಿ, ಕಾರ್ಯರೂಪಕ್ಕೆ ತರದಿರುವುದು ಯಾಕೆ?

ಪ್ರತಿಭಟನಾಕಾರರು ಮಾತನಾಡಿ, “ಅಂಬೇಡ್ಕರ್ ಅವರ ಹೆಸರನ್ನು ರಾಜಕೀಯ ಲಾಭಕ್ಕಾಗಿ ಬಳಸಬಾರದು. ಅದು ದಲಿತ ಸಮುದಾಯದ ಆತ್ಮಗೌರವದ ಸಂಕೇತ. ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಗೌರವವನ್ನು ಜಾರಿಗೆ ತರುವುದೇ ಅಂಬೇಡ್ಕರ್ ಅವರಿಗೆ ನಿಜವಾದ ಗೌರವ” ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂಬಂಧ ನಡೆದ ಪ್ರತಿಭಟನೆಯಲ್ಲಿ ವಿವಿಧ ದಲಿತ ಪರ ಸಂಘಟನೆಗಳ ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷರು, ಬ್ಲಾಕ್ ಕಾಂಗ್ರೆಸ್ ಎಸ್‌ಸಿ ಘಟಕದ ಪದಾಧಿಕಾರಿಗಳು ಹಾಗೂ ಡಿಎಸ್‌ಎಸ್ ತಾಲೂಕು ಅಧ್ಯಕ್ಷ ಪರಶುರಾಮ್ ಹೆಗ್ಡಾಳ್ ಸೇರಿದಂತೆ ಮರಿಯಪ್ಪ ದಸಮಾಪುರ, ರಾಮೇಶ್ ಚಿಂತ್ರಪಳ್ಳಿ, ಬಾಸವರಾಜ್ ಕಾಳಿ, ಪಕ್ಕೀರಪ್ಪ ಕಡ್ಲಬಾಳು, ಕೊಟೆಪ್ಪ ದೂಪದಹಳ್ಳಿ, ನಾಗರಾಜ್ ಕಲ್ಲಹಳ್ಳಿ, ಮೈಲಪ್ಪ ಕೋಗಳಿ, ರಾಮೇಶ್ ಪೂಜಾರ್, ಬಸವರಾಜ್ ಕೆಚ್ಚಿನಬಂಡಿ, ಗೋಣೆಪ್ಪ ಕೆಚ್ಚಿನಬಂಡಿ ಮತ್ತಿತರರು ಭಾಗವಹಿಸಿದ್ದರು.

## ಇಂದಿರಾ ಕ್ಯಾಂಟೀನ್ ಸ್ಥಳಾಂತರಕ್ಕೆ ಒತ್ತಾಯ



• **ಮಲ್ಲಮ್ಮ ನುಡಿ ವಾರ್ತೆ ಬೀದರ್**

ನಗರದ ನೌಬಾದ್ ಪ್ರದೇಶದಲ್ಲಿ ನಿರ್ಮಾಣವಾಗುತ್ತಿರುವ ಇಂದಿರಾ ಕ್ಯಾಂಟೀನ್ ಅನ್ನು ಜನಸಾಮಾನ್ಯರಿಗೆ ಅನುಕೂಲವಾಗುವ ಸ್ಥಳಕ್ಕೆ ಸ್ಥಳಾಂತರಿಸಬೇಕೆಂದು ಕಲ್ಯಾಣ ಕರ್ನಾಟಕ ನವ ನಿರ್ಮಾಣ ಸೇನೆಯ ಮುಖಂಡರು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದ್ದಾರೆ.

ಈ ಕುರಿತು ಜಿಲ್ಲಾಧಿಕಾರಿಗಳು, ಬೀದರ್ ಮಹಾನಗರ ಪಾಲಿಕೆ ಆಯುಕ್ತರು ಹಾಗೂ ಜಿಲ್ಲಾ ಯೋಜನಾ ನಿರ್ದೇಶಕರಿಗೆ ಮನವಿ ಸಲ್ಲಿಸಿರುವ ಮುಖಂಡರು, ನೌಬಾದ್ ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರದ ಮಧ್ಯಭಾಗದಲ್ಲಿ ಇಂದಿರಾ ಕ್ಯಾಂಟೀನ್ ನಿರ್ಮಾಣ ಮಾಡುತ್ತಿರುವುದನ್ನು ತೀವ್ರವಾಗಿ ಖಂಡಿಸಿದ್ದಾರೆ.

ಸದರಿ ಸ್ಥಳವು ಸಾರ್ವಜನಿಕರು ಸುಲಭವಾಗಿ ಸೇರುವಂತಿಲ್ಲ. ಅಲ್ಲದೆ ಮಧ್ಯದಲ್ಲಿ ಡಿವೈಡರ್ ಇರುವುದರಿಂದ ಜನರು ಕ್ಯಾಂಟೀನ್‌ಗೆ ಬರಲು ಹಾಗೂ ಹೋಗಲು ಸಾಕಷ್ಟು ತೊಂದರೆ ಅನುಭವಿಸಬೇಕಾಗುತ್ತದೆ ಎಂದು ಅವರು ತಿಳಿಸಿದ್ದಾರೆ. ಹೀಗಾಗಿ ನೌಬಾದ್–ಹುಮನಾಬಾದ್ ಮುಖ್ಯರಸ್ತೆಯ ಸರ್ಕಾರಿ ಶಾಲೆಯ ಆವರಣದ ಮೂಲೆಯಲ್ಲಿ ಇಂದಿರಾ ಕ್ಯಾಂಟೀನ್ ಅನ್ನು ಸ್ಥಳಾಂತರಿಸಬೇಕು ಎಂದು ಆಗ್ರಹಿಸಿದ್ದಾರೆ. ಬಡವರು, ಕೂಲಿ ಕಾರ್ಮಿಕರು ಹಾಗೂ ವಿದ್ಯಾರ್ಥಿಗಳಿಗೆ ಕಡಿಮೆ ದರದಲ್ಲಿ ಗುಣಮಟ್ಟದ ಆಹಾರ ಒದಗಿಸುವ ಜನಪ್ರಿಯ ಯೋಜನೆ ಜನರಿಗೆ ಸುಲಭವಾಗಿ ತಲುಪುವಂತಾಗಬೇಕು ಹೊರತು ಜನರು ಬಾರದ ಸ್ಥಳದಲ್ಲಿ ನಿರ್ಮಿಸಿ ಯೋಜನೆಗೆ ಕಪ್ಪುಚುಕ್ಕೆ ತರುವಂತಾಗಬಾರದು ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ. ಈ ಸಂದರ್ಭದಲ್ಲಿ ಸಂಸ್ಥಾಪಕ ಅಧ್ಯಕ್ಷ ಸ್ವಾಮಿದಾಸ ಕೆಂಪೇನೋರ್, ಪ್ರಧಾನ ಕಾರ್ಯದರ್ಶಿ ಎಂ.ಡಿ. ಮಸ್ತಾನಮುಲ್ಲಾ, ಸಂಸ್ಥಾಪಕ ಉಪಾಧ್ಯಕ್ಷ ಸಂಗಮೇಶ ಏಣಕೂರ್. ಜಿಲ್ಲಾಧ್ಯಕ್ಷ ಜೇಮ್ಸ್ ಇಸ್ಲಾಂಪೂರ, ಸುರೇಶ ಎನ್. ದೊಡ್ಡಿ, ಕಮಲಹಾಸನ ಭಾವಿದೊಡ್ಡಿ, ಶ್ರೀನಾಥ ದರ್ಗಾ, ಹಾಗೂ ತುಕಾರಾಮ ರಾಗಾಪೂರೆ ಉಪಸ್ಥಿತರಿದ್ದರು.

## ಗ್ಯಾರಂಟಿ ಯೋಜನೆಗಳಿಂದ ಯಾವೊಬ್ಬ ಫಲಾನುಭವಿಯೂ ಹೊರಗುಳಿಯಬಾರದು

• **ಮಲ್ಲಮ್ಮ ನುಡಿ ವಾರ್ತೆ ಬೀದರ್**



ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಕಾರ್ಯಕ್ರಮಗಳಾದ ಪಂಚ ಗ್ಯಾರಂಟಿ ಯೋಜನೆಗಳಿಂದ ಜಿಲ್ಲೆಯ ಯಾವೊಬ್ಬ ಫಲಾನುಭವಿಯೂ ಹೊರಗುಳಿಯದಂತೆ ಎಚ್ಚರ ವಹಿಸಬೇಕು, ಅರ್ಹರಿರುವ ಪ್ರತಿಯೊಬ್ಬ ಫಲಾನುಭವಿಗೂ ಸಕಾರದ ಸೌಲಭ್ಯಗಳು ತಲುಪಿಸುವ ಅಗತ್ಯ ಕ್ರಮವಹಿಸುವಂತೆ ಅಧಿಕಾರಿಗಳಿಗೆ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಅಮೃತರಾವ ಚಿಮಕೋಡೆ ಅವರು ಸೂಚಿಸಿದರು.

ಅವರು ಸೋಮವಾರ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಗ್ಯಾರಂಟಿ ಯೋಜನೆಗಳ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯ ಎಲ್ಲ ಬಸ್ ನಿಲ್ದಾಣಗಳಲ್ಲಿ ಕುಡಿಯುವ ನೀರು ಮತ್ತು ಸ್ವಚ್ಛತೆ ಬಗ್ಗೆ ಅನೇಕ ದೂರುಗಳು ಬರುತ್ತಿದ್ದು, ವಿಭಾಗೀಯ ನಿಯಂತ್ರಣಾಧಿಕಾರಿ ಕ್ರಮವಹಿಸಬೇಕು. ಆಹಾರ ಇಲಾಖೆಯಲ್ಲಿ ಪಡಿತರ ವಿತರಿಸುವ ಅಂಗಡಿಗಳಲ್ಲಿ ಬೇಸಿಗೆ ಕಾಲ ಇರುವುದರಿಂದ ಕುಡಿಯುವ ನೀರು ಹಾಗೂ ನೆರಳಿನ ವ್ಯವಸ್ಥೆ ಮಾಡಿ ಸಾಧ್ಯವಾದರೆ ಪಡಿತರ ವಿತರಿಸುವ ವೇಳೆ ಬದಲಾಯಿಸಿಕೊಳ್ಳುವಂತೆ ನೋಡಿಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು. ಇದೇ ಸಂದರ್ಭದಲ್ಲಿ ಸದಸ್ಯರು ಇನ್ನಿತರ ವಿಷಯಗಳ ಬಗ್ಗೆ ಚರ್ಚಿಸಿದರು.

ಗೃಹಲಕ್ಷ್ಮಿ ಯೋಜನೆಯಡಿ ಜಿಲ್ಲೆಯಲ್ಲಿ 345132 ಫಲಾನುಭವಿಗಳು ಸದರಿ ಯೋಜನೆಯ ಲಾಭ ಪಡೆಯುತ್ತಿದ್ದು, ಜನವರಿಗೆ 18925778000 ಕೋಟಿ ಡಿಬಿಟಿ ಮುಖಾಂತರ ಅವರ ಖಾತೆಗೆ ಜಮೆ ಮಾಡಲಾಗಿದೆ. ಮಾರ್ಚ.2026 ರ ಹಣ ಒಂದು ವಾರದೊಳಗೆ ಫಲಾನುಭವಿಗಳ ಖಾತೆಗೆ ಜಮಾ ಆಗಲಿದೆ. ಜಿಲ್ಲೆಯಲ್ಲಿ ಮರಣ ಹೊಂದಿರುವ ಫಲಾನುಭವಿಗಳ ಸಂಖ್ಯೆ; 5339 ಇದ್ದು, 4917 ಮರಣ ಹೊಂದಿರುವ ಫಲಾನುಭವಿಗಳ ಸೇವಾ ಸಿಂಧೂ ಲಾಗಿನಲ್ಲಿ ಅಪಡೆಟ್ ಮಾಡಲಾಗಿದೆ. ಬಾಕಿ 422 ಫಲಾನುಭವಿಗಳು ಸೇವ ಲಾಗಿನಲ್ಲಿ ಅಪಡೆಟ್ ಮಾಡಬೇಕಾಗಿದೆ.

ಗೃಹಕ್ಯೋತಿ ಯೋಜನೆಯಡಿ ಜಿಲ್ಲೆಯಲ್ಲಿ 375344 ಗ್ರಾಹಕರಿದ್ದು, 3.59301 ಫಲಾನುಭವಿಗಳು ಗೃಹಜ್ಯೋತಿ ಯೋಜನೆ ಲಾಭ ಪಡೆಯುತ್ತಿದ್ದು 513 ಕೋಟಿ ಸಂದಾಯವಾಗಿದೆ.

ಶಕ್ತಿಯೋಜನೆಯಡಿಯಲ್ಲಿ ಜಿಲ್ಲೆಯಲ್ಲಿ ದಿನಾಂಕ: 11–06–2023 ರಿಂದ 08–05–2025 ರವರೆಗೆ ಮಹಿಳೆಯರು ಮತ್ತು ಬಾಲಕಿಯರು ಒಟ್ಟು ಸೇರಿ 12.36 ಕೋಟಿ ಜನರು ಸೌಲಭ್ಯವನ್ನು ಪಡೆದಿರುತ್ತಾರೆ. ಪ್ರತಿದಿನ ಸರಾಸರಿ 1.16 ಲಕ್ಷ ಮಹಿಳೆಯರು ಪ್ರಯಾಣಿಸುತ್ತಿದ್ದು ಇಲ್ಲಿಯವರೆಗೂ 367.99 ಕೋಟಿ ರೂ. ಸಂದಾಯವಾಗಿರುತ್ತದೆ.

ಅನ್ನಭಾಗ್ಯ ಯೋಜನೆಯಡಿ 3.57.286 ಪಡಿತರ ಚೀಟಿಗಳಿದ್ದು ಇಲ್ಲಿಯವರೆಗೆ 333.28 ಕೋಟಿ ಅನುದಾನ ಮಾರ್ಚ ವರೆಗೆ ಸಂದಾಯವಾಗಿರುತ್ತದೆ.

# ಶ್ರೀರಾಮರಂಗಾಪುರ ದಲಿತ ಕುಟುಂಬಗಳಿಗೆ ವಸತಿ ನಿವೇಶನಕ್ಕೆ ಆಗ್ರಹ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಕಂಪ್ಲಿ ತಾಲೂಕಿನ ಶ್ರೀರಾಮರಂಗಾಪುರ ಗ್ರಾಮದ 101 ದಲಿತ ಕುಟುಂಬಗಳಿಗೆ ಶೀಘ್ರ ವಸತಿ ನಿವೇಶನ ಮಂಜೂರು ಮಾಡಬೇಕೆಂದು ಆಗ್ರಹಿಸಿ ಕರ್ನಾಟಕ ಮಾದಿಗರ ರಕ್ಷಣಾ ವೇದಿಕೆ ವತಿಯಿಂದ ಜಿಲ್ಲಾಡಳಿತ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಮಂಗಳವಾರ ಮನವಿ ಸಲ್ಲಿಸಲಾಯಿತು.

2014–15ನೇ ಸಾಲಿನಲ್ಲಿ ಗ್ರಾಮದ ಭೀಮನೇನಿ ಸೋಮಪ್ಪ ಅವರ ವಶದಲ್ಲಿದ್ದ 135 ಎಕರೆ ಜಮೀನನ್ನು ಹೋರಾಟದ ಮೂಲಕ ಕಂದಾಯ ಇಲಾಖೆಯಿಂದ ಬಿಡುಗಡೆಗೊಳಿಸಲಾಗಿತ್ತು. ಆ ಸಂದರ್ಭದಲ್ಲಿ ಗ್ರಾಮದಲ್ಲಿನ ದಲಿತ ಸಮುದಾಯ ಆರ್ಥಿಕ ಬಹಿಷ್ಕಾರಕ್ಕೆ ಒಳಗಾಗಿದ್ದು, ಸರ್ಕಾರದಿಂದ ಆರ್ಥಿಕ ಭದ್ರತೆ, ನೇರ ಸಾಲ ಹಾಗೂ ವಸತಿ ನಿವೇಶನ ನೀಡುವಂತೆ ಬೇಡಿಕೆ ಇಡಲಾಗಿತ್ತು ಎಂದು ಸಂಘಟನೆಯ ಮುಖಂಡರು ತಿಳಿಸಿದ್ದಾರೆ.

ಈ ಹಿಂದೆ ಆದಿ ಜಾಂಬವ ನಿಗಮದಿಂದ 86 ಕುಟುಂಬಗಳಿಗೆ ತಲಾ ?1 ಲಕ್ಷ ನೇರ ಸಾಲ ಮಂಜೂರಾಗಿದ್ದರೂ, ವಸತಿ ನಿವೇಶನ ಮಂಜೂರಿನ ವಿಚಾರದಲ್ಲಿ ಇದುವರೆಗೆ ಯಾವುದೇ ಪ್ರಗತಿ ಕಂಡಿಲ್ಲ ಎಂದು ಆರೋಪಿಸಿದರು.

ಗ್ರಾಮದಲ್ಲಿ ಜನಸಂಖ್ಯೆ ಹೆಚ್ಚಳದಿಂದ ಹಲವಾರು ಕುಟುಂಬಗಳು ಒಂದೇ ಮನೆಯಲ್ಲಿ ವಾಸಿಸುವ ಪರಿಸ್ಥಿತಿ ನಿರ್ಮಾಣವಾಗಿದ್ದು, ಮಳೆಗಾಲದಲ್ಲಿ ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ.

ವಾಸಿಸಲು ಸೂಕ್ತ ಜಾಗದ ಕೊರತೆಯಿಂದ ಕುಟುಂಬಗಳು ಸಂಕಷ್ಟದ ಜೀವನ ನಡೆಸುತ್ತಿರುವುದಾಗಿ ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಇದೇ ವೇಳೆ ಗ್ರಾಮಸ್ಥರು ಡಾ. ಗುರುಮೂರ್ತಿ ಅವರ ಜಮೀನನ್ನು ವಸತಿ ನಿವೇಶನಕ್ಕಾಗಿ ಖರೀದಿಸಲು ಮಾತುಕತೆ ನಡೆಸಿದ್ದು, ಸುಮಾರು 3 ಎಕರೆ 94 ಸೆಂಟ್ಸ್ ಭೂಮಿಗೆ ?2.56 ಕೋಟಿ ವೆಚ್ಚವಾಗಲಿದೆ ಎಂದು ತಿಳಿಸಿದ್ದಾರೆ.

ಇಷ್ಟೊಂದು ಮೊತ್ತವನ್ನು ಬಡ ಕುಟುಂಬಗಳು ಭರಿಸಲು ಸಾಧ್ಯವಿಲ್ಲದ ಕಾರಣ ಸರ್ಕಾರವೇ ಮಧ್ಯಪ್ರವೇಶಿಸಿ ನಿವೇಶನ ಮಂಜೂರು ಮಾಡಿಸಬೇಕೆಂದು ಒತ್ತಾಯಿಸಿದರು. ಕರ್ನಾಟಕ ಮಾದಿಗರ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಕರಿಯಪ್ಪ ಗುಡಿಮನಿ ಮಾತನಾಡಿ, ಜಿಲ್ಲಾಧಿಕಾರಿಗಳು ಹಾಗೂ ಸಮಾಜ ಕಲ್ಯಾಣ ಇಲಾಖೆ ಸರ್ಕಾರಕ್ಕೆ ಶಿಫಾರಸು ಸಲ್ಲಿಸಿ ಶೀಘ್ರ ವಸತಿ ನಿವೇಶನ ಮಂಜೂರು ಮಾಡಿಸಬೇಕೆಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ರಾಮಕೃಷ್ಣ, ನೀಲಪ್ಪ ಪೇಂಟರ್, ಸೋಮಯ್ಯ, ಈರಣ್ಣ, ವೆಂಕಟಸ್ವಾಮಿ, ಕೃಷ್ಣ, ಪೆದ್ದಣ್ಣ, ಮೋಹನ್ ರಾಜ್, ನವೀನ್ ಕುಮಾರ್, ಮಲ್ಲಮ್ಮ, ಲಕ್ಷ್ಮಿ, ಸರಸ್ವತಿ, ಸರೋಜಮ್ಮ ಸೇರಿದಂತೆ ನೂರಾರು ಗ್ರಾಮಸ್ಥರು ಉಪಸ್ಥಿತರಿದ್ದರು.

# ಜಲಧಾರೆ ಕಾಮಗಾರಿ ಶೀಘ್ರ ಪೂರ್ಣಗೊಳಿಸಿ :ಸಚಿವ ಶಿವಾನಂದ ಪಾಟೀಲ ಸೂಚನೆ

• ಮಲ್ಲಮ್ಮ ನುಡಿ ವಾರ್ತೆಬಸವನಬಾಗೇವಾಡಿ



ಮೂರು ವರ್ಷವಾದರೂ ಜಲಧಾರೆ ಕಾಮಗಾರಿ ಆಮೆಗತಿಯಲ್ಲಿ ಸಾಗುತ್ತಿದೆ. ಕಾಮಗಾರಿ ಪೂರ್ಣಗೊಳಿಸಿ, ಜನರಿಗೆ ಶುದ್ದೀಕರಿಸಿದ ನೀರನ್ನು ಒದಗಿಸಬೇಕು ಎಂದು ಅಧಿಕಾರಿಗಳಿಗೆ ಸಚಿವ ಶಿವಾನಂದ ಎಸ್ ಪಾಟೀಲ ಕಟ್ಟುನಿಟ್ಟಿನ ಸೂಚನೆ ನೀಡಿದರು. ಕುಡಿಯುವ ನೀರಿನ ಸಮಸ್ಯೆ ಮತ್ತು ವಿವಿಧ ಇಲಾಖೆಗಳ ಬಗ್ಗೆ ಜರುಗುವ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಅಖಂಡ ತಾಲೂಕಿಗಳ ಎಲ್ಲ ಗ್ರಾಪಂ ಪಿಡಿಓಗಳಿಗೆ ಆಯಾ ಗ್ರಾಪಂ ವ್ಯಾಪ್ತಿಯಲ್ಲಿನ ಗ್ರಾಮಗಳಿಗೆ ಕುಡಿಯುವ ನೀರು ಪೊರೈಕೆಯಲ್ಲಿ ವ್ಯತ್ಯಯವಾಗದಂತೆ ಜವಳಿ, ಕಬ್ಬು ಅಭಿವೃದ್ಧಿ ಸಕ್ಕರೆ ಸಚಿವ ಶಿವಾನಂದ ಎಸ್ ಪಾಟೀಲ ಅವರು ಆಯಾ ತಾಪಂ ಇಓ, ಪಿಡಿಓ ಹಾಗೂ ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ಇಲಾಖಾ ಅಧಿಕಾರಿಗಳಿಗೆ ಖಡಕ್ಕಾಗಿ ಸೂಚಿಸಿದರು.

ಗೊಳಸಂಗಿಯಲ್ಲಿ 15 ದಿನಗಳಿಗೊಮ್ಮೆ, ಉಕ್ಕಲಿ ಗ್ರಾಮದಲ್ಲಿ 6 ದಿನಗಳಿಗೊಮ್ಮೆ ನೀರು ಸರಬರಾಜು ಆಗುತ್ತಿವೆ. ಈ ಕುರಿತಾಗಿ ಪಿಡಿಓ ಅವರನ್ನು ವಿಚಾರಿಸಲಾಗಿ ಉಕ್ಕಲಿಗೆ ಮನಗೂಳಿ ಹಾಗೂ ಇಂಗಳೇಶ್ವರದಿಂದ ನೀರು ಸರಬರಾಜು ಮಾಡುವಂತೆ ಸೂಚಿಸಿದರು. ಸಮೀಪದ ಟಕ್ಕಳಕಿಯಲ್ಲಿರುವ ಡಿಪ್ಲೋಮಾ ಹಾಗೂ ಐಟಿಆಯ್ ಕಾಲೇಜುಗಳಿಗೆ ನೀರು ಸರಬರಾಜು ಮಾಡುವಂತೆ ಪಿಡಿಓಗೆ ಖಡಕ್ಕಾಗಿ ಸೂಚಿಸಿದರು. ಮಸಬಿನಾಳ ಗ್ರಾಮದಲ್ಲಿ ಜಾತ್ರೆ ಇದ್ದರೂ ಸ್ವಚ್ಚತೆ ಕಾಣುತ್ತಿಲ್ಲ. ಅಲ್ಲಿರುವ ಭಾವಿಯಲ್ಲಿ ತ್ಯಾಜ್ಯ ಎಸೆಯದಂತೆ ಹಾಗೂ ನೀರು ಬಳಕೆಯಾಗುವಂತೆ ಮುಂದಾಗಿ ಎಂದು ಪಿಡಿಓಗಳಿಗೆ ಸೂಚಿಸಿದರು.. ನಿಡಗುಂದಿ ಭಾವಿಯ ನೀರು ಎಂದಿಗೂ ಖಾಲಿಯಾಗದು. ಆ ಭಾವಿಯನ್ನೂ ಕೂಡ ಉಪಯೋಗಿಸಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಕೂಡಗಿ ತಾಂಡೆ ಹಿಂದಿರುವ 101 ಎಕರೆ ಕೆರೆಯಲ್ಲಿ ಅತಿಕ್ರಮಣವಾಗಿ ಮನೆಗಳು ತಲೆ ಎತ್ತುತ್ತಿವೆ. ಈ ಕುರಿತು ಪಿಡಿಓ ಹಾಗೂ ಅಧಿಕಾರಿಗಳು ಏನು ಮಾಡುತ್ತೀದ್ದೀರಿ ಎಂದು ಗರಂ ಆದ ಸಚಿವರು ಸ್ಥಳೀಯ ಕೆರೆ ಮಾರಾಟವಾದಂತೆ ಕೂಡಗಿ ಕೆರೆಯು ಮಾರಾಟವಾಗದಂತೆ ಎಚ್ಚರ ವಹಿಸಿರಿ.

ಮನಗೂಳಿ ಪಟ್ಟಣದಲ್ಲಿ ಅನೇಕ ಲೇಔಟಗಳು ತಲೆ ಎತ್ತುತ್ತಿವೆ. ಈ ಕುರಿತು ಅನುಮತಿ ನೀಡಿದ್ದೀರಾ, ಈ ಕುರಿತು ತಮ್ಮ ಗಮನಕ್ಕೆ ಬಂದಿದೆಯಾ ಎಂದು ಮುಖ್ಯಾಧಿಕಾರಿ ನಿಖಿಲೇಶ ಪಾಟೀಲ ಅವರಿಗೆ ಪ್ರಶ್ನೆ ಹಾಕಿದರು. ಈ ಕುರಿತಾಗಿ ಮಾಹಿತಿ ನೀಡುವಂತೆ ಸಚಿವರು ಸೂಚಿಸಿದರು.

ಪಟ್ಟಣದಲ್ಲಿ ಸಮರ್ಪಕವಾಗಿ ನೀರು ಪೊರೈಕೆಯಾಗುತ್ತಿಲ್ಲ ಎಂದು ಮುಖ್ಯಾಧಿಕಾರಿ ಎಚ್. ಎಸ್ ಚಿತ್ತರಗಿ ಹಾಗೂ ಎಇ ಮಹಾದೇವ ಜಂಬಗಿ ಅವರನ್ನು ವಿಚಾರಿಸಿದಾಗ ಕೇಳಿದಾಗ ಮಳೆಗಾಳಿಗೆ ವಿದ್ಯುತ್ ಸಮಸ್ಯೆಯಿಂದ ಸರಬರಾಜಿನಲ್ಲಿ ವ್ಯತ್ಯಯವಾಗುತ್ತಿದೆ ಎಂದರು. ಆಗ ಹೆಸ್ಕಾಂ ಇಇ ಸಿದ್ದರಾಮ ಬಿರಾದಾರ ಅವರ ಗಮನಕ್ಕೆ ಬಂದಿತು.

ಸಚಿವರು ನೀರು ಸರಬರಾಜು ಹಾಗೂ ಒಳಚರಂಡಿ ಇಲಾಖೆಯ ಇಇ ಗೋವಿಂದ ಅವರಿಗೆ ಸೆಪ್ಟೆಂಬರ್ ಒಳಗಡೆ ವಲಯ 4ರ ಕಾಮಗಾರಿ ಮುಗಿಸಿಕೊಡಿ ಎಂದು ಸೂಚಿಸಿದರು.

ಹೂವಿನಹಿಪ್ಪರಗಿಯ ಪಿಕೆಪಿಎಸ್ ಜಾಗೆಯಲ್ಲಿ ಅಂಗಡಿ ಕಟ್ಟಲು ಪಿಡಿಓ ಯಾಕೇ ಪರವಾನಿಗೆ ಕೊಟ್ಟಿಲ್ಲ ಎಂದು ಅಧಿಕಾರಿಗಳೊಂದಿಗೆ ಗರಂ ಆದರು. .

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಕೆ ಆನಂದ, ಜಿಪಂ ಸಿಎಸ್ ರಿಷಿ ಆನಂದ, ಎಸಿ ಗುರುನಾಥ ದಡ್ಡೆ, ನಗರಾಭಿವೃದ್ಧಿ ಯೋಜನಾ ನಿರ್ದೇಶಕ ಬದ್ರುದ್ದೀನ ಸೌಧಾಗರ, ತಹಶೀಲ್ದಾರ್ ವಾಯ್.ಎಸ್ ಸೋಮನಕಟ್ಟಿ, ಸಂತೋಷ ಮ್ಯಾಗೇರಿ, ಇಓ ವೆಂಕಟೇಶ ವಂದಾಲ, ಸುನೀಲ ಮದ್ದಿನ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಜರಿದ್ದರು.

# ಮನೆಯಲ್ಲಿ ಎಲ್ಲರೂ ಸೇರಿ ಯೋಗ ಮಾಡಿದರೆ ಪ್ರೀತಿ ಜಾಸ್ತಿಯಾಗುತ್ತೆ





ದುಶ್ಚಟಗಳಿಗೆ ಗುಡ್ ಬೈ ಹೇಳಿ, ಯೋಗಕ್ಕೆ ಹಾಯ್ ಹೇಳಿ. ಮನೆಯಲ್ಲಿ ಎಲ್ಲರೂ ಸೇರಿ ಯೋಗ ಮಾಡಿದರೆ ನಗು, ಪ್ರೀತಿ ಜಾಸ್ತಿ ಆಗುತ್ತೆ. ಹೆಂಡತಿ ಮಕ್ಕಳ ಪ್ರೀತಿಗೆ ಮದ್ಯ ಮರೆತು ಹೋಗುತ್ತದೆ.

ಕಾಶಿನಾಥ.ಎಸ್ ಅವಟಿ, ಪ್ರಭಾರಿಗಳು, ತಾಲೂಕಾ ಪತಂಜಿ ಯೋಗ.

• ಮಲ್ಲಮ್ಮ ನುಡಿ ವಾರ್ತೆಬಸವನಬಾಗೇವಾಡಿ

ಧರ್ಮಸ್ಥಳ ಸಂಸ್ಥೆಯ ವತಿಯಿಂದ ಆಯೋಜಿಸುವ ಮದ್ಯವರ್ಜನ ಶಿಬಿರದಲ್ಲಿ 8 ಲಕ್ಷ ಜನ ಯೋಗದಿಂದಲೇ ವ್ಯಸನ ಮುಕ್ತರಾಗಿದ್ದು. ಶಿಬಿರವನ್ನು ನಮ್ಮ ಭಾಗದಲ್ಲಿ ಆಯೋಜಿಸಿ ಅನೇಕರನ್ನು ವ್ಯಸನಮುಕ್ತರನ್ನಾಗಿ ಮಾಡಲು ಹೊರಟಿರುವ ಸಂಸ್ಥೆಯ ಕಾರ್ಯ ಶ್ಲಾಘನೀಯವಾದುದು ಎಂದು ಪಟ್ಟಣದ ಯೋಗ ಗುರು ಹಾಗೂ ಅವಟಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಕಾಶಿನಾಥ ಅವಟಿ ಅಭಿಪ್ರಾಯಪಟ್ಟರು.

ತಾಲೂಕಿನ ಯರನಾಳ ಗ್ರಾಮದಲ್ಲಿ ಧರ್ಮಸ್ಥಳದ ಡಾ. ವೀರೇಂದ್ರ ಹೆಗ್ಗಡೆ ಅವರ ನೇತೃತ್ವದಲ್ಲಿ ನಡೆಯುವ ಮದ್ಯ ವರ್ಜನ ಶಿಬಿರದಲ್ಲಿ ಶಿಬಿರಾರ್ಥಿಗಳಿಗೆ ಯೋಗ ಧ್ಯಾನ ತರಬೇತಿ ಮುನ್ನ ಮಾತನಾಡಿದರು.

ಮನೆಯಲ್ಲಿ ಎಲ್ಲರೂ ಸೇರಿ ಯೋಗ ಮಾಡಿದರೆ ಪ್ರೀತಿ ಜಾಸ್ತಿ ಆಗುತ್ತೆ. ಯೋಗ ತರಬೇತಿಯಿಂದ ಪ್ರಾಣಾಯಾಮ ಧ್ಯಾನದಿಂದ ಮನಸ್ಸು ಶಾಂತವಾಗಿ ಮದ್ಯ ಗುಟ್ಕಾ ಸೇವಿಸುವ ಹಂಬಲ ಕಡಿಮೆ ಆಗುತ್ತೆ. ಬೇಡ ಅನ್ನೋ ಶಕ್ತಿ ಬರುತ್ತೆ. ಹೆಚ್ಚಿನವರು ಒತ್ತಡ ಬೇಸರಕ್ಕೆ ದುಶ್ಚಟಕ್ಕೆ ಬೀಳ್ತಾರೆ. ಪ್ರತಿದಿನ ಸೂರ್ಯ ನಮಸ್ಕಾರ ಮಾಡಿದರೆ ದೇಹ ಗಟ್ಟಿಯಾಗಿ ನಾನು ಗೆಲ್ಲಬಲ್ಲೆ ಅನ್ನೋ ಧೈರ್ಯ ಬರುತ್ತೆ. ದುಶ್ಚಟ ಬಿಡೋ ಸಂಕಲ್ಪ ಗಟ್ಟಿ ಆಗುತ್ತೆ ಎಂದು ಶಿಬಿರಾರ್ಥಿಗಳಿಗೆ ಯೋಗಿಕ್ ಜಾಗಿಂಗ್, ಸೂಕ್ಷ್ಮ ವ್ಯಾಯಾಮಗಳು, ವಕ್ರಾಸನ, ಅರ್ಧ ಮಚ್ಚೇಂದ್ರನ ಆಸನ, ಶಶಾಂಕ ಆಸನ, ಬದ್ಧ ಕೋನಾಸನ, ಬಸ್ತೀಕಾ ಪ್ರಾಣಾಯಾಮ, ಓಂಕಾರ ಉಚ್ಚಾರಣೆ ವಿವಿಧ ಆಸನಗಳನ್ನು ತಿಳಿಸಿಕೊಟ್ಟರು.

# ಎಲ್ಐಸಿ ಹಿರಿಯ ಶಾಖಾಧಿಕಾರಿಯಾಗಿ ರವಿಕಾಂತ ಚವ್ಹಾಣ ಅಧಿಕಾರ ಸ್ವೀಕಾರ

• ಮಲ್ಲಮ್ಮ ನುಡಿ ವಾರ್ತೆಬಸವನಬಾಗೇವಾಡಿ



ಪಟ್ಟಣದ ಭಾರತೀಯ ಜೀವ ವಿಮಾ ನಿಗಮದ ಶಾಖಾ ಕಚೇರಿಯಲ್ಲಿ ವೈ. ಭಾರ್ಗವ ಅವರು ವರ್ಗಾವಣೆ ಹಿನ್ನಲೆಯಲ್ಲಿ ಅವರ ಸ್ಥಾನಕ್ಕೆ ರವಿಕಾಂತ ಚವ್ಹಾಣ ಬಾದಾಮಿ ಶಾಖೆಯಿಂದ ವರ್ಗಾವಣೆಗೊಂಡು ಪಟ್ಟಣದ ಕಚೇರಿಗೆ ಹಿರಿಯ ಶಾಖಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದರು. ಶ್ರೀಯುತರು ಬಾಗಲಕೋಟೆ ಜಿಲ್ಲೆಯವರಾದ ಇವರು ಕಳೆದ 36 ವರ್ಷಗಳಿಂದ ದಾವಣಗೆರೆ, ರಾಣೇಬೆನ್ನೂರ, ಬಾಗಲಕೋಟೆ, ಬಾದಾಮಿ, ಶಹಪುರ, ಬೀಳಗಿ ಸೇರಿದಂತೆ ಅನೇಕ ಶಾಖಾ ಕಚೇರಿಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

# ರೈತರು ಇಳುವರಿಯನ್ನು ಹೆಚ್ಚಿಸಲು ಮುಂದಾಗಿರಿ



• ಮಲ್ಲಮ್ಮ ನುಡಿ ವಾರ್ತೆಬಸವನಬಾಗೇವಾಡಿ

ಮುಂಗಾರು ಹಂಗಾಮಿನ ಬಿತ್ತನೆ ಬೀಜೋಪಚಾರ ಆಂದೋಲನವು ತಾಲೂಕಿನ ಮಸಬಿನಾಳ ಗ್ರಾಮದಲ್ಲಿ ಮಂಗಳವಾರ ಜಿಲ್ಲಾ ಪಂಚಾಯತ ಹಾಗೂ ಸ್ಥಳೀಯ ಕೃಷಿ ಸಹಾಯಕ ನಿರ್ದೇಶಕರ ಕಚೇರಿ ಸಹಯೋಗದಲ್ಲಿ ಆಯೋಜಿಸಲಾಗಿತ್ತು. ಕೃಷಿ ಅಧಿಕಾರಿ ಬಿ.ಬಿ ಸಕ್ರಿ ಬೀಜೋಪಚಾರ ಮಾಡುವುದರಿಂದ ಆಗುವ ಲಾಭಗಳು ಮತ್ತು ತೊಗರಿ ತೊಗರಿ ಬೆಳೆಯಲ್ಲಿ, ಅಂತರ್ ಬೇಸಾಯ, ಕುಡಿ ಚೂಟುವುದು ಬೆಳೆಯ ಇಳುವರಿಯನ್ನು ಹೆಚ್ಚಿಸುತ್ತದೆ. ಮುಂಗಾರು ಬಿತ್ತನೆ ಮುನ್ನ ಬೀಜಕ್ಕೆ ಔಷಧ ಲೇಪಿಸಿದರೆ ಮಣ್ಣಿನಲ್ಲಿರುವ ರೋಗ–ಕೀಟಗಳಿಂದ ಬೆಳೆ ರಕ್ಷಣೆ ಆಗುತ್ತೆ. ಮೊಳಕೆ ಶೇಕಡಾ 95% ಕ್ಕಿಂತ ಹೆಚ್ಚಾಗುತ್ತೆ. ಮುಂಗಾರು ಮಳೆ ಶುರುವಾಗೋ 1 ವಾರ ಮೊದಲೇ ಬೀಜೋಪಚಾರ ಮಾಡಿಟ್ಟುಕೊಳ್ಳಿ. ಬಿತ್ತನೆ ದಿನ ಗಡಿಬಿಡಿ ಆಗಲ್ಲ ಎಂದರು. ಬಿಟಿಎಂ ಪುಷ್ಪಾ ಗುಡದಿನ್ನಿ, ಸಂಜೀವಿನಿ ಟೆಕ್ನಿಷಿಯನ್ ಬಸವರಾಜ್ ಮೂಲಿಮನಿ ಮಾತನಾಡಿದರು. ಈ ಸಂದರ್ಭದಲ್ಲಿ ಗ್ರಾಮದ ರೈತ ಬಾಂಧವರು ಭಾಗವಹಿಸಿದ್ದರು.

# ವಿದ್ಯಾರ್ಥಿಗಳು ವರ್ಷಾರಂಭದಿಂದಲೇ ಸಿದ್ಧತೆ ಮಾಡಿಕೊಂಡರೆ ಯಶಸ್ಸು ಸುಲಭ: ಕೆ.ಎಂ. ವಿಶ್ವನಾಥ ಮರತೂರ

• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್



ಹತ್ತನೇ ತರಗತಿ ವಿದ್ಯಾರ್ಥಿಗಳು ಪರೀಕ್ಷಾ ಸಮಯದಲ್ಲಿ ಒತ್ತಡಕ್ಕೆ ಒಳಗಾಗಿ ಓದುವ ಬದಲಾಗಿ, ಶೈಕ್ಷಣಿಕ ವರ್ಷದ ಆರಂಭದಿಂದಲೇ ಯೋಜಿತ ರೀತಿಯಲ್ಲಿ ಸಿದ್ಧತೆ ಮಾಡಿಕೊಂಡರೆ ಯಶಸ್ಸು ಸುಲಭವಾಗುತ್ತದೆ ಎಂದು ಖ್ಯಾತ ಶಿಕ್ಷಣ ತಜ್ಞ ಕೆ.ಎಂ. ವಿಶ್ವನಾಥ ಮರತೂರ ಸಲಹೆ ನೀಡಿದರು.

ಗುರುಮಠಕಲ್ ನಗರದ ಜ್ಞಾನಧಾರೆ ಕೋಚಿಂಗ್ ಕೇಂದ್ರದಲ್ಲಿ ಆಯೋಜಿಸಿದ್ದ ಬೇಸಿಗೆ ಶಿಬಿರದ ಅಂಗವಾಗಿ ಹತ್ತನೇ ತರಗತಿ ವಿದ್ಯಾರ್ಥಿಗಳಿಗಾಗಿ ನಡೆದ ಒಂದು ದಿನದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ಹತ್ತನೇ ತರಗತಿ ವಿದ್ಯಾರ್ಥಿಗಳಿಗಾಗಿ ಸಮಯ ಪರಿಪಾಲನೆ, ಸಮಯ ನಿರ್ವಹಣೆ, ಓದುವ ಕೌಶಲ್ಯ, ಹೆಚ್ಚು ಅಂಕ ಗಳಿಸುವ ತಂತ್ರಗಳು, ಪರೀಕ್ಷಾ ಯೋಜನೆ ಸೇರಿದಂತೆ "ಪರೀಕ್ಷೆಯನ್ನು ಹಬ್ಬದಂತೆ ಸಂಭ್ರಮಿಸಬೇಕು" ಎಂಬ ಮನೋಭಾವವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವ ಕುರಿತು ಚಟುವಟಿಕೆ ಆಧಾರಿತ ತರಬೇತಿ ನೀಡಿದರು. ಶೈಕ್ಷಣಿಕ ವರ್ಷ ಆರಂಭವಾಗಿರುವ ಹಿನ್ನೆಲೆಯಲ್ಲಿ ಆರಂಭದಿಂದಲೇ ಉತ್ತಮ ತಯಾರಿ ಮಾಡಿಕೊಂಡರೆ ಕೊನೆಯ ಹಂತದಲ್ಲಿ ಉಂಟಾಗುವ ಪರೀಕ್ಷಾ ಒತ್ತಡವನ್ನು ಸುಲಭವಾಗಿ ನಿವಾರಿಸಬಹುದು ಎಂದು ಪ್ರಾಯೋಗಿಕ ಉದಾಹರಣೆಗಳ ಮೂಲಕ ವಿವರಿಸಿದರು. ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಶಿಕ್ಷಣ ಪ್ರೇಮಿ ಹಾಗೂ ದಾನಿ ಅನಂತಪ್ಪ ಬೋಯಿನ್ ಮಾತನಾಡಿ, ವಿದ್ಯಾರ್ಥಿಗಳು ಆಸಕ್ತಿಯಿಂದ ಓದಬೇಕು. ಸರ್ಕಾರ ಹಾಗೂ ವಿವಿಧ ಸಂಸ್ಥೆಗಳು ನೀಡುತ್ತಿರುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡರೆ ಉತ್ತಮ ಫಲಿತಾಂಶ ಸಾಧಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಸಂಸ್ಥೆಯ ಪ್ರತಿನಿಧಿ ಭೀಮಾಶಂಕರ ಯದ್ದಾಪೂರ ಮಾತನಾಡಿ, ಯಾದಗಿರಿ ಜಿಲ್ಲೆ ಈಗಾಗಲೇ ಶಿಕ್ಷಣ ಫಲಿತಾಂಶದಲ್ಲಿ ಉತ್ತಮ ಸಾಧನೆಯತ್ತ ಸಾಗುತ್ತಿದೆ. ಜ್ಞಾನಧಾರೆ ವಿದ್ಯಾಕೇಂದ್ರವು ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ ಅಗತ್ಯವಾದ ಅವಕಾಶಗಳನ್ನು ಕಲ್ಪಿಸಲಿದೆ. ವಿದ್ಯಾರ್ಥಿಗಳು ಅವುಗಳ ಸದುಪಯೋಗ ಪಡೆದು ಉತ್ತಮ ಫಲಿತಾಂಶ ತರುವಂತೆ ಕರೆ ನೀಡಿದರು.

ಕಾರ್ಯಾಗಾರದಲ್ಲಿ ಸುಮಾರು 50 ವಿದ್ಯಾರ್ಥಿಗಳು ಭಾಗವಹಿಸಿ ತರಬೇತಿಯ ಲಾಭ ಪಡೆದರು. ಶಿಕ್ಷಕರಾದ ಅಶೋಕಕುಮಾರ, ಮಲ್ಲಿಕಾರ್ಜುನ, ಅರವಿಂದ, ವಿರೇಶ, ಮಹಿಬೂಬ್ ಅಲಿ, ಸಾಬಣ್ಣ ಹಾಗೂ ರೂಪ ಉಪಸ್ಥಿತರಿದ್ದರು.

# ಸಿಲಿಂಡರ್‌ಗಾಗಿ ಬಿಸಿಲಿನಲ್ಲಿ ಪರದಾಟ

## ಭಾರತ್ ಗ್ಯಾಸ್ ಏಜೆನ್ಸಿ ವಿರುದ್ಧ ಜನರ ಅಸಮಾಧಾನ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಮೇ.19:ಪಟ್ಟಣದ ಭಾರತ್ ಗ್ಯಾಸ್ ಏಜೆನ್ಸಿ ಮುಂಭಾಗದಲ್ಲಿ ಭಾನುವಾರ ಗ್ಯಾಸ್ ಸಿಲಿಂಡರ್ ಪಡೆಯಲು ಜನರು ಉದ್ದನೆಯ ಸಾಲಿನಲ್ಲಿ ಬಿರು ಬಿಸಿಲಿನಲ್ಲಿ ಪರದಾಡುತ್ತಿದ್ದ ದೃಶ್ಯ ಕಂಡು ಬಂತು.

ಹೇಗಾದರೂ ಮಾಡಿ ಗ್ಯಾಸ್ ಸಿಲಿಂಡರ್ ಪಡೆಯಬೇಕು ಎಂದು ಪಟ್ಟಣ ಸೇರಿದಂತೆ ತಾಲ್ಲೂಕಿನ ವಿವಿಧ ಹಳ್ಳಿಗಳ ಜನರು ಭಾರತ್ ಗ್ಯಾಸ್ ಏಜೆನ್ಸಿ ಬಳಿ ನಸುಕಿನ ಜಾವದಿಂದಲೇ

ಖಾಲಿ ಸಿಲಿಂಡರ್ ನೊಂದಿಗೆ ಸರತಿ ಸಾಲಿನಲ್ಲಿ ನಿಂತಿದ್ದರು.

ಆನ್ಲೈನ್ ಮುಖಾಂತರ ಗ್ಯಾಸ್ ಸಿಲಿಂಡರ್ ಬುಕ್ ಮಾಡಿದರೂ ಸಹ ಸಕಾಲಕ್ಕೆ ಸಿಲಿಂಡರ್ ಸಿಗುತ್ತಿಲ್ಲ. ಏಜೆನ್ಸಿ ಅವರು ಗ್ರಾಹಕರಿಗೆ ಉತ್ತಮ ಸೇವೆ ನೀಡುತ್ತಿಲ್ಲ ಎಂದು

ಗ್ರಾಹಕರು ದೂರಿದರು.

ಭಾರತ್ ಗ್ಯಾಸ್ ಏಜೆನ್ಸಿಯಲ್ಲಿ ಗ್ರಾಹಕರ ಸಂ–ಖ್ಯೆ ಹೆಚ್ಚಿದೆ. ಹಾಗಾಗಿ, ಇನ್ನೊಂದು ಕೇಂದ್ರ ಆರಂಭಿಸಬೇಕು ಎಂದು ಜನರು ಒತ್ತಾಯಿಸಿದರು.

ತಾಲ್ಲೂಕು ಆಡಳಿತದದವರು ಕಾಳಸಂತೆಯಲ್ಲಿ ಸಿಲಿಂಡರ್ ಮಾರಾಟ ಆಗುವುದನ್ನು ತಡೆಯಬೇಕು. ಜೊತೆಗೆ ಸಕಾಲಕ್ಕೆ ಸಾರ್ವಜನಿಕರಿಗೆ ಗ್ಯಾಸ್ ಲಭಿಸುವಂತೆ ನೋಡಿಕೊಳ್ಳಬೇಕು ಎಂದು ಸಾರ್ವಜನಿಕರು ಆಗ್ರಹಿಸಿದರು.

# ಪರಂಪರೆಯ ಉಳಿವಿಗೆ ಹಸ್ತಪ್ರತಿಗಳ ಡಿಜಿಟಲೀಕರಣ ಅಗತ್ಯ : ಕವಿತಾ ಎಸ್. ಮನ್ನಿಕೇರಿ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ(ಹೊಸಪೇಟೆ)



ಹಸ್ತಪ್ರತಿಗಳಿರುವ ಮನೆಗಳಿಗೆ ತೆರಳಿ, ಕುಟುಂಬದವರ ಮನವೊಲಿಸಿ ಅವುಗಳನ್ನು ಸಂಗ್ರಹಿಸುವ ಕಾರ್ಯ ಅತ್ಯಂತ ಸವಾಲಿನದ್ದಾಗಿದೆ. ಇಂತಹ ಅಮೂಲ್ಯ ಪರಂಪರೆಯನ್ನು ಉಳಿಸಿ ಮುಂದಿನ ಪೀಳಿಗೆಗೆ ತಲುಪಿಸುವ ಕಾರ್ಯದಲ್ಲಿ ಎಲ್ಲರೂ ಕೈಜೋಡಿಸಬೇಕಾಗಿದೆ ಎಂದು ಜಿಲ್ಲಾಧಿಕಾರಿಗಳಾದ ಶ್ರೀಮತಿ ಕವಿತಾ ಎಸ್. ಮನ್ನಿಕೇರಿ (ಭಾ.ಆ.ಸೇ) ಅವರು ಹೇಳಿದರು. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಹಸ್ತಪ್ರತಿಶಾಸ್ತ್ರ ವಿಭಾಗ ಹಾಗೂ, ಸಂಸ್ಕೃತಿ ಇಲಾಖೆ, ನವದೆಹಲಿ, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ, ವಿಜಯನಗರ ಜಿಲ್ಲೆ ಇವರ ಸಂಯುಕ್ತಾಶ್ರಯದಲ್ಲಿ "ಜ್ಞಾನ ಭಾರತಂ ಮಿಷನ್" ಅಡಿಯಲ್ಲಿ "ಕರ್ನಾಟಕದ ಪ್ರಾಚೀನ ಹಸ್ತಪ್ರತಿಗಳ ಸಮೀಕ್ಷೆ ಹಾಗೂ ಡಿಜಿಟಲೀಕರಣ ವಿಜಯನಗರ ಜಿಲ್ಲೆ" ಕಾರ್ಯಕ್ರಮದ ಉದ್ಘಾಟನಾ ಸಮಾರಂಭವನ್ನು ಕನ್ನಡ ವಿಶ್ವವಿದ್ಯಾಲಯದ ಪಂಪ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮವನ್ನು ವಿಜಯನಗರ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಶ್ರೀಮತಿ ಕವಿತಾ ಎಸ್. ಮನ್ನಿಕೇರಿ (ಭಾ.ಆ.ಸೇ) ಅವರು ಉದ್ಘಾಟಿಸಿ ಮಾತನಾಡುತ್ತಾ; ಭಾರತ ಸರ್ಕಾರವು "ಜ್ಞಾನ ಭಾರತಂ ಮಿಷನ್" ಅಡಿಯಲ್ಲಿ "ಕರ್ನಾಟಕದ ಪ್ರಾಚೀನ ಹಸ್ತಪ್ರತಿಗಳ ಸಮೀಕ್ಷೆ ಹಾಗೂ ಡಿಜಿಟಲೀಕರಣ" ಕಾರ್ಯವನ್ನು ಕೈಗೆತ್ತಿಕೊಂಡಿದೆ. ಹಸ್ತಪ್ರತಿಗಳನ್ನು ಸಂಗ್ರಹಿಸುವುದು ಅಷ್ಟು ಸುಲಭದ ಕೆಲಸವಲ್ಲ. ಕನ್ನಡ ವಿಶ್ವವಿದ್ಯಾಲಯವು ಇಂಥ ಸಾಧನೆಯನ್ನು ಮಾಡಿದೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ಅನೇಕರು ತಮ್ಮ ಕುಟುಂಬ ಮತ್ತು ವೈಯಕ್ತಿಕ ಬದುಕಿನ ಅನೇಕ ಸಂದರ್ಭಗಳನ್ನು ತ್ಯಜಿಸಿ ಈ ಅಮೂಲ್ಯ ಹಸ್ತಪ್ರತಿಗಳನ್ನು ಸಂಗ್ರಹಿಸಿ, ಸಂರಕ್ಷಿಸುವ ಕೆಲಸವನ್ನು ಈಗಾಗಲೇ ಮಾಡಿದ್ದಾರೆ. ಈ ಕಾರ್ಯದಲ್ಲಿ ತೊಡಗಿಸಿಕೊಂಡು ಶ್ರಮಿಸಿದ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸಿದರು. ಕನ್ನಡ ವಿಶ್ವವಿದ್ಯಾಲಯವು ಹಸ್ತಪ್ರತಿಗಳ ಡಿಜಿಟಲೀಕರಣಕ್ಕೆ ಸಂಬಂಧಿಸಿದಂತೆ ಕಾರ್ಯವನ್ನು ಆರಂಭಿಸಿದ್ದು, ಭಾರತದಲ್ಲೇ ಮೊಟ್ಟಮೊದಲ ಸಮಗ್ರ ಡಿಜಿಟಲೀಕರಣ ಕಾರ್ಯವು ವಿಜಯನಗರ ಜಿಲ್ಲೆಯ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ನಡೆಯುತ್ತದೆ ಎನ್ನುವ ಆಶಯವಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ. ಡಿ.ವಿ. ಪರಮಶಿವಮೂರ್ತಿ ಅವರು ವಹಿಸಿ ಮಾತನಾಡುತ್ತಾ; ಹಿಂದೆ ಹಸ್ತಪ್ರತಿಗಳನ್ನು ಓದುವುದು ಅಷ್ಟು ಸುಲಭವಾಗಿರಲಿಲ್ಲ. ಆದರೆ ಇಂದು ಬೆಳೆದಿರುವ ತಂತ್ರಜ್ಞಾನದಿಂದ ಅವುಗಳನ್ನು ಸುಲಭವಾಗಿ ಓದಿ ಅಧ್ಯಯನ ಮಾಡುವ ಅವಕಾಶ ದೊರಕಿದೆ ಎಂದು ಹೇಳಿದರು. ಕನ್ನಡ ಸೇರಿದಂತೆ ವಿವಿಧ ಲಿಪಿಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತ ಬಂದಿವೆ. ಈ ಕಾರಣದಿಂದ ಹಳೆಯ ಲಿಪಿಯಲ್ಲಿರುವ ಕಡತಗಳು, ಶಾಸನಗಳು, ಹಸ್ತಪ್ರತಿಗಳು ಸೇರಿದಂತೆ ಅನೇಕ ದಾಖಲೆಗಳಲ್ಲಿರುವ ಮಾಹಿತಿಯನ್ನು ಆಧುನಿಕ ತಲೆಮಾರಿಗೆ ಸುಲಭವಾಗಿ ತಲುಪಿಸಲು ಡಿಜಿಟಲೀಕರಣ ಪ್ರಕ್ರಿಯೆ ಆರಂಭಗೊಂಡಿದೆ ಎಂದು ತಿಳಿಸಿದರು. ಹಳೆಯ ಲಿಪಿಗಳನ್ನು ಓದುವ ಪರಂಪರೆ ಹಿಂದಿನ ಕಾಲದಿಂದಲೂ ಇತ್ತು. ಜನಬಳಕೆಯ ಭಾಷೆಯಲ್ಲಿಯೇ ಶಾಸನಗಳನ್ನು ಹಾಕಿಸಿದ್ದು ಅಶೋಕನ ಕಾಲದಲ್ಲಿ, ಅವನ ಆಡಳಿತಕ್ಕೆ ಸಂಬಂಧಿಸಿದ ಶಾಸನಗಳು ಕರ್ನಾಟಕದಲ್ಲಿ ದೊರಕುತ್ತವೆ ಎಂದು ಹೇಳಿದರು. ಹಳೆಯ ಲಿಪಿಯಲ್ಲಿ ನಮಗೆ ಗೊತ್ತಿಲ್ಲದೆ ಇರುವ ವಿಷಯವಿದೆ ಎನ್ನುವ ನಂಬಿಕೆ ನಮ್ಮಲ್ಲಿದೆ, ಅವುಗಳನ್ನು ಓದಿ ಅಧ್ಯಯನ ಮಾಡಿದಾಗ ಮಾತ್ರ ಅದರೊಳಗಿನ ಜ್ಞಾನ ಮತ್ತು ಮಾಹಿತಿಯ ಅರಿವು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಹಿಂದಿನವರ ಜ್ಞಾನ ಮತ್ತು ಪರಂಪರೆಯನ್ನು ಮುಂದಿನ ಪೀಳಿಗೆಗೆ ತಲುಪಿಸುವಲ್ಲಿ ಜ್ಞಾನ ಭಾರತಂ ಮಿಷನ್ ಯೋಜನೆ ಮಹತ್ವದ ಪಾತ್ರ ವಹಿಸಲಿದೆ ಎಂದ ಅವರು, ಕನ್ನಡ ವಿಶ್ವವಿದ್ಯಾಲಯದಲ್ಲಿ 5,000ಕ್ಕಿಂತ ಹೆಚ್ಚು ಅಮೂಲ್ಯ ಹಸ್ತಪ್ರತಿಗಳು ಸಂಗ್ರಹವಾಗಿವೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕನ್ನಡ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಭಾಗವಹಿಸಿದ್ದರು. ವಿಜಯನಗರ ಜಿಲ್ಲೆಯ ಪುರಾತತ್ತ ?? ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ನಿರ್ದೇಶಕರಾದ ಡಾ. ಆರ್. ಶೇಜೇಶ್ವರ್ ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಹಸ್ತಪ್ರತಿಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ವೀರೇಶ ಬಡಿಗೇರ ಅವರು ಸ್ವಾಗತಿಸಿದರು. ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರಾದ ಶ್ರೀ ಡಿ. ನಾಗರಾಜ್ ವಂದನಾರ್ಪಣೆ ಸಲ್ಲಿಸಿದರು. ವಿವಿಧ ವಿಭಾಗಗಳ ಡೀನರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು, ಆಡಳಿತ ಅಧಿಕಾರಿಗಳು ಮತ್ತು ಸಂಶೋಧನಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಕಚೇರಿಗಳ ಸಮಯದಲ್ಲಿ ಮರುಬದಲಾವಣೆ: ಜಿ.ಪಂ ಸಿಇಒ ಲವೀಶ್ ಒರಡಿಯಾ

ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಮೇ :19: ಆಡಳಿತಾತ್ಮಕ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಯಾದಗಿರಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ವಿವಿಧ ಕಚೇರಿಗಳ ಸಮಯವನ್ನು ಮೇ 19ರಿಂದ ಅನ್ವಯವಾಗುವಂತೆ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5– 30 ರವರೆಗೆ ಮರುಬದಲಾವಣೆ ಮಾಡಿ ಜಿಲ್ಲಾ ಪಂಚಾಯತ್ ಸಿಇಒ ಲವೀಶ್ ಒಂದಡಿಯಾ ಅವರು ಆದೇಶ ಹೊರಡಿಸಿದ್ದಾರೆ.

ಕರ್ನಾಟಕ ಸರ್ಕಾರದ ನಿರ್ದೇಶನದಂತೆ, ಕಲಬುರಗಿ ವಿಭಾಗದಲ್ಲಿ ಬಿಸಿಲಿನ ತಾಪಮಾನ ಹೆಚ್ಚಾಗಿರುವ ಕಾರಣ ಏಪ್ರಿಲ್ ಮತ್ತು ಮೇ ಮಾಹೆಯಲ್ಲಿ ಕಚೇರಿ ಕೆಲಸದ ಸಮಯವನ್ನು ಬೆಳಿಗ್ಗೆ 8.00 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಬದಲಾವಣೆ ಮಾಡಿ ಈ ಹಿಂದೆ ಆದೇಶಿಸಲಾಗಿತ್ತು.

ಆದರೆ, ಇದರಿಂದ ಉಂಟಾಗುತ್ತಿರುವ ಆಡಳಿತಾತ್ಮಕ ಸಮಸ್ಯೆಗಳನ್ನು ಪರಿಗಣಿಸಿ ಸಾರ್ವಜನಿಕ ಹಿತದೃಷ್ಟಿಯಿಂದ ಕಚೇರಿ ಸಮಯವನ್ನು ಮರುಬದಲಾವಣೆ ಮಾಡಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

ಸಮಯ ಬದಲಾವಣೆಗೆ *ಪ್ರಮುಖ ಕಾರಣಗಳು : ಬೆಳಗಿನ ಅವಧಿಯಲ್ಲಿ ಸಿಬ್ಬಂದಿಗಳ ವಿಳಂಬವಾಗಿ ಬರುತ್ತಿರುವುದು ಹಾಗೂ ಕಡತಗಳ ವಿಲೇವಾರಿಯಲ್ಲಿ ವಿಳಂಬವಾಗುತ್ತಿರುವುದು. ರಾಜ್ಯ ಮಟ್ಟದಿಂದ ಉನ್ನತಾಧಿಕಾರಿಗಳು ಆಯೋಜಿಸುವ ಮಹತ್ವದ ಸಭೆಗಳಿಗೆ ಹಾಗೂ ರಾಜ್ಯ

ಮಟ್ಟದ ಕಚೇರಿಗಳಿಗೆ ಅಗತ್ಯ ಮಾಹಿತಿ ಸಮಯಕ್ಕೆ ಸರಿಯಾಗಿ ಒದಗಿಸಲು ತೊಂದರೆಯಾಗುತ್ತಿರುವುದು.

ಮುಂಬರುವ ದಿನಾಂಕ 29,30.05.2026 ರಂದು ಮಾನ್ಯ ಉಪಲೋಕಾಯುಕ್ತರು ಯಾದಗಿರಿ ಜಿಲ್ಲೆಗೆ ಭೇಟಿ ನೀಡುತ್ತಿದ್ದು, ಈ ಸಭೆಗೆ ಅಗತ್ಯ ಪೂರ್ವ ಸಿದ್ಧತಾ ಕ್ರಮಗಳನ್ನು ಕೈಗೊಳ್ಳಬೇಕಿರುವುದು.

ಬೇಸಿಗೆ ಅವಧಿ ಇರುವುದರಿಂದ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಕುಡಿಯುವ ನೀರಿನ ಪೂರೈಕೆಗೆ ತುರ್ತು ಕ್ರಮಗಳನ್ನು ಕೈಗೊಳ್ಳುವ ಅವಶ್ಯಕತೆ ಇರುವುದು.

RDWSD, PRED, KRIDL, TP, ಹಾಗೂ ಉಃ ಕಚೇರಿಗಳಿಂದ ಜಿಲ್ಲಾ ಪಂಚಾಯತಿಗೆ ಅಗತ್ಯವಿರುವ ಮಾಹಿತಿ ಸಲ್ಲಿಕೆಯಲ್ಲಿ ವಿಳಂಬವಾಗುತ್ತಿರುವುದನ್ನು ಆಡಳಿತ ಗಮನಿಸಿರುವುದು.

ಹೊಸ ಕಚೇರಿ ಸಮಯ ಮತ್ತು ಅನ್ವಯಿಸುವ ಇಲಾಖೆಗಳು: ಮೇಲಿನ ಎಲ್ಲಾ ಅಂಶಗಳನ್ನು ಸಾರ್ವಜನಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಪರಿಗಣಿಸಿ, ಖಆಘಖಅ, ಖಿಇಆ, ಖಆಖಆಐ, ಖಿಕ, ಹಾಗೂ ಉಃ ಕಚೇರಿಗಳಿಗೆ ಅನ್ವಯಿಸುವಂತೆ ಮಾತ್ರ ಪ್ರಸ್ತುತ ಇರುವ ಕಚೇರಿ ಸಮಯವನ್ನು ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ಕ್ಕೆ ಬದಲಾವಣೆ ಮಾಡಲಾಗಿದೆ. ಸದರಿ ಕಚೇರಿಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ದಿನಾಂಕ 19.05.2026 ರಿಂದ ಕಡ್ಡಾಯವಾಗಿ ಈ ಬದಲಾದ ಸಮಯಕ್ಕೆ ಕಚೇರಿ ಕರ್ತವ್ಯಕ್ಕೆ ಹಾಜರಾಗಿ ಕಾರ್ಯನಿರ್ವಹಿಸಲು ಅವರು ಸೂಚಿಸಿದ್ದಾರೆ.

## ಬಹಿರಂಗ ಹರಾಜಿಗೆ ಸೂಚನೆ

- ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಮೇ 19 : ಜಿಲ್ಲೆಯ ಶಹಾಪೂರ ನ್ಯಾಯಾಲಯದಲ್ಲಿ ವಾಹನಗಳು ಹಾಗೂ ಇತರೇ ವಸ್ತುಗಳು ಬಹಿರಂಗ ಹರಾಜಿಗಾಗಿ ಯಾವ ಸ್ಥಿತಿಯಲ್ಲಿರುತ್ತವೆಯೋ, ಹಾಗೆಯೇ ಹರಾಜು ಮಾಡುವಂತೆ, ವಿವಿಧ ಕ್ರಿಮಿನಲ್ ಪ್ರಕರಣ ಸಂಖ್ಯೆಗಳಾದ ಸಿ.ಸಿ ನಂ. 110/2020, ಸಿಸಿ ನಂ.71/2021, ಸಿಸಿ ನಂ.557/2022, ಸಿಸಿ ನಂ.13/22 ಹಾಗೂ ಸಿಸಿ ನಂ.553/2025 ಇವುಗಳಲ್ಲಿ ಈ ನ್ಯಾಯಾಲಯದಿಂದ ಹರಾಜಿಗಾಗಿ ಶಹಾಪೂರ ನ್ಯಾಯಾಲಯ ಜೆ.ಎಂ.ಎಫ್.ಸಿ ಮತ್ತು ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಅವರು ಆದೇಶವನ್ನು ಹೊರಡಿಸಿದ್ದಾರೆ.

ಈ ಪ್ರಕರಣಗಳು ತೀರ್ಪುಗೊಂಡು ಮುಕ್ತಾಯಗೊಂಡಿದ್ದು, ಹರಾಜು 2026ರ ಜೂನ್ 4 ರಂದು ಬೆಳಿಗ್ಗೆ 10.30 ಗಂ–ಟೆಗೆ ಶಹಾಪೂರ ಜೆ.ಎಂ.ಎಫ್.ಸಿ ಮತ್ತು ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯ ಆವರಣದಲ್ಲಿ ಬಹಿರಂಗ ಹರಾಜು ಕರೆಯಲಾಗಿದ್ದು, ಆಸಕ್ತಿವುಳ್ಳ ವ್ಯಕ್ತಿಗಳು ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ತಿಳಿಸಿದೆ. ಹರಾಜಿನಲ್ಲಿ ಪಡೆದ ವಾಹನಗಳನ್ನು ಈ ನ್ಯಾಯಾಲಯಕ್ಕೆ ಮರಳಿ ಪಡೆಯುವದಿಲ್ಲ ಹಾಗೂ ಹರಾಜಿನಲ್ಲಿ ಪಡೆದ ವಾಹನಗಳು ಮರುನೋಂದಣಿಯಾಗುವುದಿಲ್ಲ ಹರಾಜುಗೊಳ್ಳುವ ವಾಹನಗಳ ಸಂಖ್ಯೆಗಳನ್ನು ನಮೂದಿಸಿದೆ.

ಈ ನ್ಯಾಯಾಲಯದ ಪತ್ರ ದಿನಾಂಕ 17–02–2026ರ ಅನುಸಾರವಾಗಿ ಮೋಟಾರು ವಾಹನ ನಿರೀಕ್ಷಕರು, ಯಾದಗಿರಿ ಇವರಿಗೆ ಸೂಚಿಸಿದೆ ವಾಹನಗಳ ಮೌಲ್ಯ ನಿರ್ಧರಣೆ ಕುರಿತು ಪತ್ರ ಬರೆಯಲಾಗಿ, ಈ ವಾಹನ ನೀರಿಕ್ಷಕರು ಯಾದಗಿರಿ ಇವರು ತಮ್ಮ ಪತ್ರ ದಿನಾಂಕ 26–02–2026 ರಂದು ವಾಹನಗಳ ಪರಿಶೀಲನೆ ಮಾಡಿ ಮೌಲ್ಯ ನಿರ್ಧರಿಸಿ ಈ ವಾಹನಗಳು ರಸ್ತೆ ಮೇಲೆ ಚಲಿಸದೇ ಇರುವ ಸ್ಥಿತಿಯಲ್ಲಿರುತ್ತವೆ, ಮತ್ತು ವಾಹನಗಳು ವಾಯು ಮಾಲಿನ್ಯ ನಿಯಂತ್ರಣದ ನಿಬಂಧನೆಗೊಳಪಟ್ಟಿರದೇ ಇರುವದರಿಂದ ಪ್ರಸ್ತುತ ಮಾರುಕಟ್ಟೆಯ ಬೆಲೆಗೆ ಹೋಲಿಸಲಾಗಿ ತೂಕದ ಆಧಾರದ ಅಂದಾಜು ಬೆಲೆ 2500 ರೂ.ಗಳ (ಎರಡು ಸಾವಿರದ ಐದು ನೂರು ರೂಪಾಯಿಗಳು ಮಾತ್ರ) ಎಂದು ನಿಗದಿಪಡಿಸಲಾಗಿದ್ದು, ಅದರಂತೆ ವಾಹನಗಳ ಚಾಸಿಸ್ ಮತ್ತು ಇಂಜಿನ ಸಂಖ್ಯೆಗಳನ್ನು ವಿರುಪಗೊಳಿಸಿ ವಾಹನಗಳನ್ನು ಗುಜರಿ ತೂಕದ ಆಧಾರದ ಮೇಲೆ ಬಹಿರಂಗ ವಿಲೇವಾರಿ ಮಾಡಲು ತಮ್ಮ ವರದಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಆದ್ದರಿಂದ ಇಚ್ಛೆವುಳ್ಳವರು ಬಹಿರಂಗ ಹರಾಜು ದಿನಾಂಕ 04–06–2026 ರಂದು ಬೆಳಿಗ್ಗೆ 10.30 ಗಂಟೆಗೆ ಹಿರಿಯ ಶ್ರೇಣಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಶಹಾಪೂರ ಈ ನ್ಯಾಯಾಲಯಕ್ಕೆ ಹಾಜರಾಗಿ ಬಹಿರಂಗ ಹರಾಜಿನಲ್ಲಿ ಪಾಲುಗೊಳ್ಳಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬೃಹತ್ ತ್ಯಾಜ್ಯ ಉತ್ಪಾದಕರು ಬಿಡಬ್ಲ್ಯೂ ಜಿಎಸ್ ಕಡ್ಡಾಯವಾಗಿ 4 ವಿಧದ ತ್ಯಾಜ್ಯ ವಿಂಗಡಣೆಗೆ ಸೂಚನೆ

- ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಮೇ 19 : ಶಹಾಪೂರ ನಗರಸಭೆ ವ್ಯಾಪ್ತಿಯಲ್ಲಿ ಎಲ್ಲಾ ಘನ ತ್ಯಾಜ್ಯ ನಿರ್ವಹಣಾ ಎಸ್‌ಡಬ್ಲ್ಯೂ ಎಮ್ ನಿಯಮಗಳು–2006ರ ಅನುಸಾರವಾಗಿ ಎಲ್ಲಾ ನಾಗರಿಕರು, ವಾಣಿಜ್ಯ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಅಪಾರ್ಟ್ ಮೆಂಟ್‌ಗಳು, ಕೈಗಾರಿಕೆಗಳು, ಹೋಟೆಲ್‌ಗಳು, ಉಪಹಾರ ಗೃಹಗಳು, ಮಾರುಕಟ್ಟೆಗಳು ಹಾಗೂ ಬೃಹತ್ ತ್ಯಾಜ್ಯ ಉತ್ಪಾದಕರು ಬಿಡಬ್ಲ್ಯೂ ಜಿಎಸ್ ಕಡ್ಡಾಯವಾಗಿ 4 ವಿಧದ ತ್ಯಾಜ್ಯ ವಿಂಗಡಣೆಯನ್ನು ಮೂಲದಲ್ಲಿಯೇ ಜಾರಿಗೆ ತರಬೇಕೆಂದು ಸಾರ್ವಜನಿಕರಿಗೆ ಗಮನಕ್ಕೆ ತಿಳಿಸಿದೆ ಎಂದು ಶಹಾಪೂರ ನಗರಸಭೆ ಪೌರಾಯುಕ್ತರು ಜೀವನಕುಮಾರ ಅವರು ತಿಳಿಸಿದ್ದಾರೆ.

ಎಲ್ಲಾ ತ್ಯಾಜ್ಯ ಉತ್ಪಾದಕರು ಕೆಳಕಂಡ ನಾಲ್ಕು ವಿಭಾಗಗಳಲ್ಲಿ ತ್ಯಾಜ್ಯವನ್ನು ಪ್ರತ್ಯೇಕಿಸಬೇಕು, ಹಸಿ, ತ್ಯಾಜ್ಯ, ಆಹಾರ ತ್ಯಾಜ್ಯ ತರಕಾರಿ ತ್ಯಾಜ್ಯ ಜೈವಿಕವಾಗಿ ಕರಗುವ ತ್ಯಾಜ್ಯ. ಒಣ ತ್ಯಾಜ್ಯ ಪ್ಲಾಸ್ಟಿಕ್, ಕಾಗದ, ಲೋಹ, ಗಾಜು ಹಾಗೂ ಮರುಬಳಕೆ ಯೋಗ್ಯ ವಸ್ತುಗಳು. ವಿಶೇಷ ಕಾಳಜಿ ತ್ಯಾಜ್ಯ, ಸ್ಯಾ ನಿಟರಿ ತ್ಯಾಜ್ಯ, ಡೈಪರ್‌ಗಳು, ಬ್ಯಾಟರಿ, ಔಷಧಿ ಅವಶೇಷಗಳು, ಬಣ್ಣದ ಡಬ್ಬಿಗಳು, ಇ–ತ್ಯಾಜ್ಯ ಇತ್ಯಾದಿ. ಸ್ಯಾನಿಟರಿ ತ್ಯಾಜ್ಯ ಮರುಬಳಕೆ ಆಗದ ಹಾಗೂ ಜೈವಿಕವಾಗಿ ಕರಗದ ತ್ಯಾಜ್ಯ ನಾಗರಿಕರು ವಿಂಗಡಿಸಲಾದ ತ್ಯಾಜ್ಯವನ್ನು ಪ್ರತ್ಯೇಕವಾಗಿ ಅಧಿಕೃತ ತ್ಯಾಜ್ಯ ಸಂಗ್ರಹಕಾರರು, ಪೌರಾಕಾರ್ಮಿಕರಿಗೆ ಹಸ್ತಾಂತರಿಸಬೇಕು, ತ್ಯಾಜ್ಯ ಮಿಶ್ರಣ ಮಾಡುವುದು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಇದಲ್ಲದೆ, ಎಲ್ಲಾ ಬೃಹತ್ ತ್ಯಾಜ್ಯ ಉತ್ಪಾದಕರು ಬಿಡಬ್ಲ್ಯೂ ??ಜಿಎಸ್ ಅಪಾರ್ಟ್ ಮೆಂಟ್‌ಗಳು, ವಸತಿ ಸಮುಚ್ಚಯಗಳು, ಹೋಟೆಲ್‌ಗಳು ಮತ್ತು ಉಪಹಾರ ಗೃಹಗಳು, ಕಲ್ಯಾಣ ಮಂಟಪಗಳು, ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ವಾಣಿಜ್ಯ ಸಂಕೀರ್ಣಗಳು, ಮಾರುಕಟ್ಟೆಗಳು, ಮಂಡಿಗಳು, ಕೈಗಾರಿಕೆಗಳು ಮತ್ತು ಕಚೇರಿಗಳು ಈ ಕೆಳಗಿನ ಮಾನದಂಡಗಳನ್ನು ಹೊಂದಿದಲ್ಲಿ.

20,000 ಚ.ಮೀ.ಗಿಂತ ಹೆಚ್ಚಿನ ನಿರ್ಮಿತ ಪ್ರದೇಶ ಹೊಂದಿದಲ್ಲಿ ಅಥವಾ ದಿನಕ್ಕೆ 40 ಕೆಎಲ್‌ಡಿ ಗಿಂತ ಹೆಚ್ಚಿನ ನೀರಿನ ಬಳಕೆ, ಅಥವಾ 100 ಕೆ.ಜಿ.ಗಿಂತ ಹೆಚ್ಚು ತ್ಯಾಜ್ಯ ಉತ್ಪಾದನೆ ಇದ್ದಲ್ಲಿ. ತಮ್ಮ ಸಂಸ್ಥೆಯನ್ನು ನಗರ ಸ್ಥಳೀಯ ಸಂಸ್ಥೆಯಲ್ಲಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳಬೇಕು, ಹಾಗೂ ಎಸ್‌ಡಬ್ಲ್ಯೂ ಎಮ್ ನಿಯಮಗಳು–2026ರ ಪ್ರಕಾರ ತ್ಯಾಜ್ಯದ ವೈಜ್ಞಾನಿಕ ವಿಲೇವಾರಿ ಮತ್ತು ನಿರ್ವಹಣೆಯನ್ನು ಅನುಸರಿಸಬೇಕು. ಘನ ತ್ಯಾಜ್ಯ ನಿರ್ವಹಣಾ ಎಸ್‌ಡಬ್ಲ್ಯೂ ಎಮ್ ನಿಯಮಗಳು–2026ರ ಉಲ್ಲಂಘನೆ ಮಾಡಿದಲ್ಲಿ, ಸರ್ಕಾರದ ನಿಯಮಗಳು ಮತ್ತು ಪೌರಸಭೆ, ಉಪ ನಿಯಮಗಳು ಪ್ರಕಾರ ದಂಡ ಹಾಗೂ ಕಾನೂನು ಕ್ರಮ ಕೈಗೊಳ್ಳಲಾಗುವುದು. ನಗರದ ಸ್ವಚ್ಛತೆ ಪರಿಸರ ಸಂರಕ್ಷಣೆ ಹಾಗೂ ಶಾಶ್ವತ ಘನ ತ್ಯಾಜ್ಯ ನಿರ್ವಹಣೆಗೆ ಎಲ್ಲಾ ನಾಗರಿಕರು ಹಾಗೂ ಸಂಸ್ಥೆಗಳು ಸಹಕರಿಸುವಂತೆ ವಿನಂತಿಸಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆಧುನಿಕ ಯುಗದಲ್ಲಿ ಆರ್ಥಿಕ ಸ್ವಾವಲಂಬನೆಗೆ ಸಹಕಾರವೇ ಮೂಲ ಮಂತ್ರ: ಶರಣಯ್ಯ ಸ್ವಾಮಿ

- ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



:ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ. ಬೆಂಗಳೂರು, ಯಾದಗಿರಿ ಜಿಲ್ಲಾ ಸಹಕಾರ ಒಕ್ಕೂಟ ನಿ. ಯಾದಗಿರಿ ಹಾಗೂ ಯಾದಗಿರಿ ಸಹಕಾರ ಇಲಾಖೆ ಹಾಗೂ ಶ್ರೀ ಜಗದ್ಗುರು ರೇಣುಕಾಚಾರ್ಯ ಪತ್ತಿನ ಸಹಕಾರ ಸಂಘ ನಿ, ಸುರಪುರ ಇವರುಗಳ ಸಂಯುಕ್ತಾಶ್ರಯದಲ್ಲಿ ಆಡಳಿತ ಮಂಡಳಿ ನಿರ್ದೇಶಕರಿಗಾಗಿ ಕ್ಲಸ್ಟರ್ ತರಬೇತಿ ಕಾರ್ಯಕ್ರಮ ವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಗದ್ಗುರು ರೇಣುಕಾಚಾರ್ಯ ಪತ್ತಿನ ಸಹಕಾರ ಸಂಘದ ಅಧ್ಯಕ್ಷರು ಶರಣಯ್ಯಸ್ವಾಮಿ ನೀಲಗಿರಿಮಠ, ಪತ್ತಿನ ಸಹಕಾರ ಸಂಘಗಳು ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳ ಸಾರ್ವಜನಿಕರ ಆರ್ಥಿಕ ಬಲವರ್ಧನೆಗೆ ಪ್ರೇರಕ ಶಕ್ತಿಯಾಗಿದ್ದು, ದೇಶದ ಆರ್ಥಿಕತೆಗೆ ಭದ್ರ ಬುನಾದಿ ಹಾಕಿವೆ. ಆಧುನಿಕ ಯುಗದಲ್ಲಿ ಆರ್ಥಿಕ ಸ್ವಾವಲಂಬನೆ ಸಾಧಿಸಲು ಸಹಕಾರ ತತ್ವವೇ ಮೂಲ ಮಂತ್ರವಾಗಿದೆ ಎಂದು ಅಭಿಪ್ರಾಯಪಟ್ಟರು.

?ಹಿರಿಯ ಸಹಕಾರಿ ಕರಣಯ್ಯ ಸ್ವಾಮಿ ನೀಲಗಿರಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ, ತಮ್ಮ ಸುದೀರ್ಘ ಅನುಭವಗಳನ್ನು ಹಂಚಿಕೊಂಡರು. ತರಬೇತಿಯಲ್ಲಿ ಆಡಳಿತ ಮಂಡಳಿ ನಿರ್ದೇಶಕರ ಜವಾಬ್ದಾರಿಗಳು, ಹಕ್ಕುಗಳು, ಕರ್ತವ್ಯಗಳು ಹಾಗೂ ಇಲಾಖೆಯಿಂದ ಸಿಗುವ ವಿವಿಧ ಯೋಜನೆಗಳ ಕುರಿತು ವಿಸ್ತಾರವಾಗಿ ಚರ್ಚಿಸಲಾಗಿದೆ. ಇಲ್ಲಿ ಗಳಿಸಿದ ಜ್ಞಾನವನ್ನು ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ದೈನಂದಿನ ಕಾರ್ಯಚಟುವಟಿಕೆಗಳಲ್ಲಿ ಅಳವಡಿಸಿಕೊಂಡು, ಸಂಸ್ಥೆಯನ್ನು ಪ್ರಗತಿಯತ್ತ ಮುನ್ನಡೆಸಬೇಕು ಎಂದು ಅವರು ಕರೆ ನೀಡಿದರು. ?ಮುಖ್ಯ ಉಪನ್ಯಾಸಕರಾಗಿ ಆಗಮಿಸಿದ್ದ ಸುರಪುರದ ಸಹಕಾರ ಸಂಘಗಳ ಅಭಿವೃದ್ಧಿ ಅಧಿಕಾರಿ ಶ್ರೀ ರವಿಕುಮಾರ್ ಅವರು, ಕ್ಲಸ್ಟರ್ ತರಬೇತಿಯ ಉದ್ದೇಶ ಹಾಗೂ ಮಹಾಮಂಡಳದ ವಿವಿಧ ಕಾರ್ಯಚಟುವಟಿಕೆಗಳ ಕುರಿತು ಸುದೀರ್ಘವಾಗಿ ಮಾಹಿತಿ ನೀಡಿದರು. ?ಜಿಲ್ಲಾ ಸಹಕಾರ ಶಿಕ್ಷಕಿ ಶ್ರೀಮತಿ ಸುಜಾತ ಮಠ ಕಾರ್ಯಕ್ರಮ ನಿರೂಪಿಸಿ, ಸ್ವಾಗತಿಸಿದರು. ಒಕ್ಕೂಟದ ವ್ಯವಸ್ಥಾಪಕ ಈರಪ್ಪಣ್ಣ ವಂದನಾರ್ಪಣೆ ಮಾಡಿದರು. ವೇದಿಕೆಯ ಮೇಲೆ ಸಂಘದ ಉಪಾಧ್ಯಕ್ಷ ಶಿವಕುಮಾರ್ ಪಂಚಾಂಗ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸಂಘದ ಆಡಳಿತ ಮಂಡಳಿ ನಿರ್ದೇಶಕರು, ಸದಸ್ಯರು, ಶಿವರುದ್ರ ಹಾಗೂ ಸಿಬ್ಬಂದಿ ವರ್ಗದ ಶ್ರೀಮತಿ ಶಿವಲೀಲಾ, ಸಿದ್ದಯ್ಯ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು..

## ಅಕ್ಷರ ಫೌಂಡೇಶನ್ ವತಿಯಿಂದ ನಡೆದ ಉಚಿತ ಬೇಸಿಗೆ ಶಿಬಿರದ ಸಮಾರೋಪ



- ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಅಕ್ಷರ ಫೌಂಡೇಶನ್ ಅಲ್ಲಿಪೂರ ಕ್ಲಸ್ಟರ್ ಸಂಯೋಜಕರಾದ ಶ್ರೀ ಮಂಜುನಾಥ ಸರ್ ರವರು ನಡೆಸಿದ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ವಿವಿಧ ಗಣ್ಯರು ಭಾಗವಹಿಸಿ ತಮ್ಮ ಅಭಿಪ್ರಾಯ ತಿಳಿಸಿದರು ಅಕ್ಷರ ಫೌಂಡೇಶನ್ ವತಿಯಿಂದ ಹಮ್ಮಿಕೊಳ್ಳುತ್ತಿರುವ ಉಚಿತ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಗುರುಗಳಾದ ಚಂದ್ರಕಲಾ ಮಾಸನ್ ಮೇಡಂ ರವರು ಶಿಬಿರದ ಕುರಿತು ಅತ್ಯಂತ ಸಂತೋಷ ವ್ಯಕ್ತಪಡಿಸಿದರು. ಮಕ್ಕಳಲ್ಲಿ ಕಲಿಕೆಯ ಆಸಕ್ತಿ, ಶಿಸ್ತು, ಆತ್ಮವಿಶ್ವಾಸ ಹಾಗೂ ಸೃಜನಾತ್ಮಕತೆ ಹೆಚ್ಚಲು ಈ ಬೇಸಿಗೆ ಶಿಬಿರವು ಬಹಳ ಸಹಕಾರಿಯಾಗಿದೆ ಎಂದು ತಿಳಿಸಿದರು.

ಶಿಬಿರದ ಅವಧಿಯಲ್ಲಿ ಮಕ್ಕಳಿಗೆ ಆಟ–ಪಾಠಗಳ ಮೂಲಕ ಹೊಸ ವಿಷಯಗಳನ್ನು ಕಲಿಸುವ ಪ್ರಯತ್ನ ಶ್ಲಾಘನೀಯವಾಗಿದೆ ಎಂದೂ ಹೇಳಿದರು. ಗ್ರಾಮೀಣ ಭಾಗದ ಮಕ್ಕಳಿಗೆ ಇಂತಹ ಶಿಬಿರಗಳು ಬಹಳ ಉಪಯುಕ್ತವಾಗಿದ್ದು, ಮಕ್ಕಳ ಪ್ರತಿಭೆಯನ್ನು ಹೊರತರುವಲ್ಲಿ ಮಹತ್ವದ ಪಾತ್ರವಹಿಸುತ್ತವೆ ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಎಸ್ ಡಿ ಎಂ ಸಿ ಅಧ್ಯಕ್ಷರಾದ ಶ್ರೀ ಕಾಶಪ್ಪ, ಶೈಕ್ಷಣಿಕ ಸ್ವಯಂ ಸೇವಕರಾದ ಶ್ರೀ ಹಣಮಂತ ಭಾಗ್ಯ ಮಲ್ಲಿಕಾರ್ಜುನ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

## ಮೇ 27 ರವರೆಗೆ ಅರ್ಜಿ ಸಲ್ಲಿಕೆ ಕೊನೆಯ ದಿನಾಂಕ ವಿಸ್ತರಣೆ

- ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಮೇ.19–ಸೇಡಂ ನಗರಸಭೆಯಿಂದ 2025–26ನೇ ಸಾಲಿನ ಶೇ.7.25ರ ಮತ್ತು ಶೇ.5ರ ಯೋಜನೆಯಡಿ ಲಘು ಮೋಟಾರ ವಾಹನ ತರಬೇತಿ ಮತ್ತು ವಿಶೇಷಚೇತನರು ಬ್ಯಾಂಕ್ ಮೂಲಕ ಸ್ವಯಂ–ಉದ್ಯೋಗಕ್ಕಾಗಿ ಸರ್ಕಾರದ ವಿವಿಧ ಯೋಜನೆಗಳಲ್ಲಿ ಸಾಲ ಪಡೆದವರಿಗೆ ಸಹಾಯಧನ ನೀಡಲು ಹಾಗೂ ವಿಶೇಷಚೇತನರಿಗೆ ಏಕ ಕಂತಿನ ಜೀವ ವಿಮೆ ಕಲ್ಪಿಸಲು ಅರ್ಜಿ ಸಲ್ಲಿಕೆ ಕೊನೆಯ ದಿನಾಂಕವನ್ನು 2026ರ ಮೇ 27 ರವರೆಗೆ ವಿಸ್ತರಿಸಲಾಗಿದೆ.

ನಿಗದಿತ ಗುರಿಯಂತೆ ಸಾರ್ವಜನಿಕರಿಂದ ಅರ್ಜಿಗಳನ್ನು ಸ್ವೀಕೃತವಾಗದೇ ಇರುವುದರಿಂದ ಅರ್ಜಿ ಸಲ್ಲಿಕೆ ಕೊನೆಯ ದಿನಾಂಕವನ್ನು ಮೇಲ್ಕಂಡಂತೆ ವಿಸ್ತರಿಸಲಾಗಿದ್ದು, ಷರತ್ತುಗಳು ಮತ್ತು ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಸೇಡಂ ನಗರಸಭೆಯ ವಿಷಯ ನಿರ್ವಾಹಕರನ್ನು ಸಂಪರ್ಕಿಸಬೇಕೆಂದು ಸೇಡಂ ನಗರಸಭೆಯ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ, ಬಿಜೆಪಿ ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ್ ಟೀಕೆ ಸರ್ಕಾರಕ್ಕೆ ಮೂರು, ವೈಫಲ್ಯಗಳು ನೂರಾರು





- ಮಲ್ಲಮ್ಮ ನುಡಿ ವಾರ್ತೆ ಬೀದರ

ಮೇ 19: ರಾಜ್ಯ ಕಾಂಗ್ರೆಸ್ ಸರ್ಕಾರ ಮೇ 20 ರಂದು ಮೂರು ವರ್ಷ ಪೂರೈಸುತ್ತಿದೆ. ಈ ಅವಧಿಯಲ್ಲಿ ರಾಜ್ಯದ ಆರ್ಥಿಕತೆಯ ದಿವಾಳಿ ಎದ್ದಿದೆ. ಅಭಿವೃದ್ಧಿ ಹಳ್ಳ ಹಿಡಿದಿದೆ. ಆಡಳಿತ ವ್ಯವಸ್ಥೆ ಕುಸಿದಿದೆ. ಖಾಲಿ ಖಜಾನೆ ಭರ್ತಿಗೆ ಬೆಲೆಯೇರಿಕೆ, ತೆರಿಗೆ ಹೆಚ್ಚಳದ ಭಾರ ಹಾಕಿ, ಬಡ ಹಾಗೂ ಮಧ್ಯಮ ವರ್ಗದ ಜನರ ಬದುಕು ದುರ್ಬರ ಮಾಡಿದೆ. ಇಂಥದ್ದರಲ್ಲಿ ಸರ್ಕಾರ ಸಾರ್ಥಕ, ಸಾಧನಾ ಸಮಾವೇಶ ನಡೆಸುತ್ತಿರುವುದು ನಾಚಿಕೆಗೇಡಿನ ಸಂಗತಿ ಎಂದು ಬಿಜೆಪಿ ರಾಜ್ಯ ಕಾರ್ಯದರ್ಶಿಯಾಗಿರುವ ದಕ್ಷಿಣ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ, ಬಿಜೆಪಿ ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ್ ಕಿಡಿಕಾರಿದ್ದಾರೆ. ರಾಜ್ಯದ ಇತಿಹಾಸದಲ್ಲಿ ಮೊದಲ ಬಾರಿಗೆ ಇಂತಹ ಕೆಟ್ಟ, ಭ್ರಷ್ಟ, ಜನ ವಿರೋಧಿ, ರೈತ ವಿರೋಧಿ ಹಾಗೂ ಬಡವರ ವಿರೋಧಿ ಸರ್ಕಾರ ನೋಡಲಾಗುತ್ತಿದೆ. ಆಡಳಿತದ ಎಲ್ಲ ರಂಗಗಳಲ್ಲೂ ಈ ಸರ್ಕಾರ ವಿಫಲವಾಗಿದೆ. ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ರಾಜ್ಯದ ಜನರ ವಿಶೇಷವಾಗಿ ಬಡವರ, ಹಿಂದುಳಿದವರ, ರೈತರ, ಮಧ್ಯಮ ವರ್ಗದವರ ಬದುಕನ್ನೇ ಈ ಸರ್ಕಾರ ಭಾರ ಮಾಡಿದೆ. ಮೂರು ವರ್ಷದಲ್ಲಿ 300ಕ್ಕೂ ಹೆಚ್ಚು ವೈಫಲ್ಯಗಳ ದೊಡ್ಡ ಪಟ್ಟಿಯೇ ಇದೆ. ಈ ಸರ್ಕಾರಕ್ಕೆ ಸಾಧನೆ ಸಮಾವೇಶ ಮಾಡುವ ನೈತಿಕತೆಯೇ ಇಲ್ಲ ಎಂದು ಜಂಟಿ ಪ್ರಕಟಣೆಯಲ್ಲಿ ಹೇಳಿದ್ದಾರೆ. ಪಂಚ ಗ್ಯಾರಂಟಿ ಯೋಜನೆಗೆ ಹಣ ಹೊಂದಿಸಲು ಸರ್ಕಾರ ಸತತ ಹೆಣಗಾಡುತ್ತಿದೆ. ಖಜಾನೆ ಬರಿದಾದ ಕಾರಣ ಸರ್ಕಾರ ಆರ್ಥಿಕ ದಿವಾಳಿ ಹಂತಕ್ಕೆ ಬಂದು ನಿಂತಿದೆ. ರಾಜ್ಯದ ಒಟ್ಟು ಸಾಲ 7.64 ಲಕ್ಷ ಕೋಟಿಗೇರಿದೆ. ಕಳೆದ ಒಂದೇ ವರ್ಷದಲ್ಲಿ 1.16 ಲಕ್ಷ ಕೋಟಿ ಸಾಲ ಮಾಡಲಾಗಿದೆ.

ಅಭಿವೃದ್ಧಿ ಕೆಲಸ ಅಕ್ಷರಶಃ ಸ್ಥಗಿತವಾಗಿವೆ. ಹಳೆ ಯೋಜನೆಗಳು ಹಳಿ ತಪ್ಪಿದರೆ, ಹೊಸ ಯೋಜನೆಗಳಿಗೆ ಬರೀ ಕಲ್ಲು ಹಾಕಿ, ಶಂಕುಸ್ಥಾಪನೆ ಮಾಡಿ ಕೈ ತೊಳೆದುಕೊಳ್ಳಲಾಗುತ್ತಿದೆ.

ಸರ್ಕಾರಿ ನೌಕರರಿಗೂ ಮಾಸಿಕ ವೇತನ ಸರಿಯಾಗಿ ಕೊಡಲು ಆಗುತ್ತಿಲ್ಲ. ಕೆಲ ಇಲಾಖೆಯವರು ವೇತನಕ್ಕಾಗಿ ಎರಡ್ಮೂರು ತಿಂಗಳು ಅಲೆಯುವ ಪರಿಸ್ಥಿತಿ ಬಂದಿದೆ. ನೀರಾವರಿ ಯೋಜನೆಗಳಿಗೆ ಹಣವಿಲ್ಲದೆ ಸೊರಗುತ್ತಿವೆ. ಹಣ ಹೊಂದಿಸಲು ಸರ್ಕಾರ ಬೆಲೆ ಏರಿಕೆ ಮೊರೆಯಿಟ್ಟಿದೆ. ಈ ಸರ್ಕಾರ ಬಂದ ಮೇಲೆ ಕೇವಲ ಬೆಲೆ ಏರಿಕೆ, ಬೆಲೆ ಏರಿಕೆ, ಬೆಲೆ ಏರಿಕೆಯೇ ನಡೆದಿದೆ. ದಿನ ಬೆಳಗಾದರೆ ಬೆಲೆಯೇರಿಕೆಯ ಬಿಸಿ ಎಂಬ ಸುದ್ದಿ ನೋಡುವಂತಾಗಿದೆ. ಈ ಸರ್ಕಾರದ ಬೆಲೆ ಏರಿಕೆಯಿಂದ ಜನರು ಬೇಸತ್ತಿದ್ದಾರೆ ಎಂದು ದೂರಿದ್ದಾರೆ. ಶಕ್ತಿ ಯೋಜನೆ ರಾಜ್ಯದ ಸಾರಿಗೆ ಸಂಸ್ಥೆಗಳಿಗೆ ದೊಡ್ಡ ಪೆಟ್ಟು ಕೊಟ್ಟಿದೆ. ಒಂದು ಟೈರ್ ಬದಲಿಸಬೇಕಾದರೆ ವಾರಗಟ್ಟಲೇ ಕಾಯುವ ಸ್ಥಿತಿ ಬಂದಿದೆ. 8–10 ಲಕ್ಷ ಕಿಮೀ ಓಡಿ, ಗುಜರಿಗೆ ಸೇರಬೇಕಾದ ಸಾವಿರಾರು ಬಸ್ ಗಳು ಹಾಗೆಯೇ ಓಡಿಸುತ್ತಿದ್ದು, ಜನರು ಜೀವ ಕೈಯಲ್ಲಿ ಹಿಡಿದು ಪ್ರಯಾಣಿಸುವ ಸ್ಥಿತಿ ಎದುರಾಗಿದೆ. ಗೃಹಜ್ಯೋತಿ ಯೋಜನೆ ಎಲ್ಲ ವಿದ್ಯುತ್ ಸಂಸ್ಥೆಗಳನ್ನೇ ಕತ್ತಲಲ್ಲಿ ಮುಳುಗಿಸಿದೆ. ಗೃಹಲಕ್ಷ್ಮೀ ಯೋಜನೆ ಫಲಾನುಭವಿಗಳಿಗೆ ಹಣ ಬರುತ್ತಿಲ್ಲ. ಕಾಂಗ್ರೆಸ್ ಸಚಿವ, ಶಾಸಕರೇ ಗ್ಯಾರಂಟಿ ಬಗ್ಗೆ ತಗಾದೆ ಎತ್ತಿ ಈ ಯೋಜನೆ ಬಂದ್ ಮಾಡಿದರೆ ಬೆಸ್ಟ್ ಎಂದು ಹೇಳುತ್ತಿದ್ದಾರೆ ಎಂದು ಟೀಕಿಸಿದ್ದಾರೆ.

### ಬೀದರ್ ಅಭಿವೃದ್ಧಿಗೂ ಹಿಡಿದ ಗ್ರಹಣ

ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಬೀದರ್ ಜಿಲ್ಲೆಯಲ್ಲಿ ಸಹ ಅಭಿವೃದ್ಧಿ ಕೆಲಸಗಳಿಗೆ ಅಕ್ಷರಶಃ ಗರ ಬಡಿದಂತಾಗಿದೆ. ಆಡಳಿತ ವ್ಯವಸ್ಥೆ ಸಂಪೂರ್ಣ ಕುಸಿದಿದೆ. ಪೊಲೀಸ್ ವ್ಯವಸ್ಥೆ ಸಹ ಹಳಿ ತಪ್ಪಿದ್ದು, ಕಾನೂನು ಮತ್ತು ಸುವ್ಯವಸ್ಥೆ ಹಾಳಾಗಿದೆ. ಬಹುತೇಕ ಕಚೇರಿಗಳಲ್ಲಿ ಅವ್ಯವಸ್ಥೆಯಿದೆ. ಜನರು ತಮ್ಮ ಕೆಲಸಕ್ಕಾಗಿ ಅಲೆದಾಡುತ್ತಿದ್ದಾರೆ. ಭ್ರಷ್ಟಾಚಾರ ನಡೆಯುತ್ತಿದೆ ಎಂದು ಜನರ ದೂರು ಸಾಮಾನ್ಯವಾಗಿವೆ. ಆದರೆ ಜಿಲ್ಲೆಯ ಇಬ್ಬರು ಮಂತ್ರಿಗಳು ನಿರಾಳವಾಗಿದ್ದಾರೆ. ಕೇವಲ ಭರವಸೆ, ಹೇಳಿಕೆ ನೀಡುವುದು ಪ್ರಚಾರ ಪಡೆಯುವುದು ಮಾತ್ರ ಇವರ ಕೆಲಸವಾಗಿದೆ ಎಂದು ದೂರಿದ್ದಾರೆ. ಕಳೆದ ವರ್ಷ ಮುಖ್ಯಮಂತ್ರಿ

ಸಿದ್ದರಾಮಯ್ಯ ಅವರು ಇಲ್ಲಿ ಬಂದು 2025 ಕೋಟಿ ರೂ. ಕಾಮಗಾರಿ ಉದ್ಘಾಟನೆ, ಚಾಲನೆ ನೀಡಿದ್ದರು. ಇದೆಲ್ಲ ಬರೀ ಪ್ರಚಾರ ಗಿಟ್ಟಿಸುವ ಗಿಮಿಕ್ ಎಂಬುದು ಸ್ಪಷ್ಟವಾಗಿದೆ. ಸಿಎಂ ಚಾಲನೆ ನೀಡಿದ್ದ ಜಿಲ್ಲಾ ಸಂಕೀರ್ಣ ಕಚೇರಿ ಕೆಲಸ ಇನ್ನೂ ಅಡಿಪಾಯ ಬಿಟ್ಟು ಮೇಲಕ್ಕೇ ಎದ್ದಿಲ್ಲ. ಬಸವಕಲ್ಯಾಣ ಅನುಭವ ಮಂಟಪ ಕಾಮಗಾರಿ ಆಮೆಗತಿಯಿಂದ ನಡೆದಿದೆ. ಈ ವರ್ಷ ಉದ್ಘಾಟನೆ ಖಚಿತ ಎಂದು ಹಿಂದೆ ಹೇಳಲಾಗಿತ್ತು. ಈಗ ಜಿಲ್ಲಾ ಉಸ್ತುವಾರಿ ಸಚಿವರು ಮುಂದಿನ ವರ್ಷದ ಮಾ??9 ಒಳಗೆ ಲೋಕಾರ್ಪಣೆ ಎಂದು ಹೇಳುತ್ತಿದ್ದಾರೆ. ಸರ್ಕಾರ ಸಮರ್ಪಕ ಹಣ ಬಿಡುಗಡೆ ಮಾಡದಿರುವುದೇ ಕಾಮಗಾರಿ ವಿಳಂಬಕ್ಕೆ ಕಾರಣವಾಗಿರೆ. ಬೀದರ್ ಸುಂದರೀಕರಣ ಕೆಲಸ ನಡೆಯುತ್ತಿಲ್ಲ. ಪ್ರವಾಸೋದ್ಯಮ ಅಭಿವೃದ್ಧಿ ಆಗುತ್ತಿಲ್ಲ. ಬೀದರ್ ಉತ್ಸವ, ಬಸವ ಉತ್ಸವಕ್ಕೆ ಗತಿಯಿಲ್ಲ. ನಗರದಲ್ಲಿ ಸಾರ್ವಜನಿಕರಿಗೆ ಒಳ್ಳೆಯ ಉದ್ಯಾನ ಇಲ್ಲ. ಇದ್ದ ಒಂದೆರಡು ಉದ್ಯಾನಗಳು ಸಹ ನಿರ್ವಹಣೆ ಇಲ್ಲದೇ ಹಾಳಾಗಿವೆ. ಒಂದು ವರ್ಷದ ಹಿಂದೆ ಸಿಎಂ ಉದ್ಘಾಟಿಸಿದ

ಬ್ರಿಮ್ಸ್ ಕ್ಯಾಥ್ ಲ್ಯಾಬ್ ಆರಂಭವೇ ಆಗಿಲ್ಲ. ವರ್ಷದಿಂದ ಇದಕ್ಕೆ ಬೀಗ ಬಿದ್ದಿದ್ದು, ಕೋಟ್ಯಾಂತರ ರೂ. ಮೌಲ್ಯದ ಯಂತ್ರೋಪಕರಣ ಹಾಳಾಗುತ್ತಿವೆ. ಬಡ ಹೃದಯ ರೋಗಿಗಳ ಬಗ್ಗೆ ಈ ಸರ್ಕಾರಕ್ಕೆ, ಜಿಲ್ಲೆ ಸಚಿವರಿಗೆ ಕಾಳಜಿಯೇ ಇಲ್ಲ ಎಂಬುದಕ್ಕೆ ಇದು ತಾಜಾ ನಿದರ್ಶನವಾಗಿದೆ ಎಂದು ಆರೋಪಿಸಿದ್ದಾರೆ.

ಸರ್ಕಾರ ಬಂದ ಮೇಲೆ ಅಕ್ರಮ, ಭ್ರಷ್ಟಾಚಾರ ಹೆಚ್ಚಾಗಿದ್ದು ಇಡೀ ವ್ಯವಸ್ಥೆಯೇ ಹಾಳಾಗಿದೆ. ಮುಡಾ ಹಗರಣ ಸ್ವತಃ ಮುಖ್ಯಮಂತ್ರಿಗೆ ಕಟಕಟೆಯಲ್ಲಿ ನಿಲ್ಲಿಸಿದೆ. ವಾಲ್ಮೀಕಿ ಹಗರಣ ಈ ಸರ್ಕಾರದ ಭ್ರಷ್ಟ ಮುಖದ ಅನಾವರಣ ಮಾಡಿದೆ. ಸಚಿವರೇ ಜೈಲಿಗೆ ಹೋಗಿ ಬಂದಿದ್ದಾರೆ. ಅಬಕಾರಿ ಹಗರಣ, ವರ್ಗಾವಣೆ ಅಕ್ರಮ, ಬಿಡಿಎ ಸೈಟ್ ಹಂಚಿಕೆ, ಔಷಧ ಖರೀದಿ, ಕಾರ್ಮಿಕ ಕಿಟ್, ಕೆಪಿಎಸ್ಸಿ ನೇಮಕ, ವೈದ್ಯಕೀಯ ಉಪಕರಣ ಖರೀದಿ ಹೀಗೆ ಹತ್ತಾರು ಅಕ್ರಮಗಳು ಬೆಳಕಿಗೆ ಬಂದಿವೆ. ನಮ್ಮದು ಪಾರದರ್ಶಕ ಸರ್ಕಾರ ಎಂದು ಸರ್ಕಾರದಲ್ಲಿದ್ದವರು ಹೇಳುತ್ತಿದ್ದಾರೆ. ಆದರೆ ಅಕ್ರಮ, ಭ್ರಷ್ಟಾಚಾರವೇ ಇವರ ಪಾರದರ್ಶಕತೆಯಾಗಿದೆ ಎಂದು ಹೇಳಿದ್ದಾರೆ.

ಈ ಸರ್ಕಾರ ಬಂದ ಮೇಲೆ ಸಮಾಜದಲ್ಲಿ ಜಾತಿ, ಜಾತಿ ನಡುವೆ ಜಗಳ ಹಚ್ಚಿ ಇಡೀ ರಾಜ್ಯದಲ್ಲಿ ಅಶಾಂತಿ ವಾತಾವರಣ ನಿರ್ಮಿಸುವ ಕೆಲಸ ಮಾಡಲಾಗುತ್ತಿದೆ. ತುಷ್ಟೀಕರಣ ರಾಜಕಾರಣ ಮಾಡಿ, ಒಂದು ಸಮಾಜಕ್ಕೆ ಎತ್ತಿ ಕಟ್ಟಿ ಎಲ್ಲೆಡೆ ದಬ್ಬಾಳಿಕೆ, ದೌರ್ಜನ್ಯ ನಡೆಯುವಂತಹ ಕೆಲಸ ಮಾಡುತ್ತಿದೆ. ಕಾನೂನು ಮತ್ತು ಸುವ್ಯವಸ್ಥೆ ಹಾಳಾಗಿದ್ದು, ಸಮಾಜಘಾತುಕ ಶಕ್ತಿಗಳಿಗೆ ಪೊಲೀಸರ ಭಯವೇ ಇಲ್ಲದಂತಾಗಿದೆ. ಹೀಗಾಗಿ ಎಲ್ಲೆಡೆ ಕಿಡಿಗೇಡಿಗಳು ???ಕ್ಟಿವ್ ಆಗಿದ್ದಾರೆ. ಸರ್ಕಾರದ ಹಿಂದುತ್ವ ವಿರೋಧಿ ನೀತಿಯಿಂದಾಗಿ ಹಿಂದುಪರ ಹೋರಾಟಗಾರರು ಭಯದಲ್ಲಿ ಕಾಲ ಕಳೆಯುವ ಪರಿಸ್ಥಿತಿ ಬಂದಿದೆ. ಗೋ ಹತ್ಯೆ ನಿಷೇಧ ಕಾಯ್ದೆ ಪಾಲಿಸದೆ ಗೋವುಗಳ ಮಾರಣ ಹೋಮಕ್ಕೆ ಅವಕಾಶ ನೀಡಲಾಗಿದೆ. ಸರ್ಕಾರದ ಪಾಪದ ಕೊಡ ತುಂಬಿದ್ದು, ಜನತೆ ಪಾಠ ಕಲಿಸುವ ದಿನ ಹತ್ತಿರವಾಗಿವೆ ಎಂದು ಹೇಳಿದ್ದಾರೆ.

## ಚುನಾವಣಾ ಗುರುತಿನ ಚೀಟಿ ಬದಲಾವಣೆಗೆ ಆಗ್ರಹ

- ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ನಗರದ ವಾರ್ಡ ನಂ2 ರ ವ್ಯಾಪ್ತಿಯಲ್ಲಿ ಬರುವ ಕಪನೂರ ಸಿದ್ಧರೂಢ ಕಾಲೋನಿಯ ನಿವಾಸಿಗಳ ಗುರುತಿನ ಚೀಟಿ ಬದಲಾವಣೆ ಮಾಡಿ ಕೊಡಬೇಕೆಂದು ಕನ್ನಡ ಭೂಮಿ ಜಾಗೃತಿ ಸಮಿತಿಯ ಉತ್ತರ ಕರ್ನಾಟಕ ವಕ್ತಾರರಾದ ಆನಂದ ತೆಗನೂರ ನೇತೃತ್ವದಲ್ಲಿ ಕಲಬುರಗಿ ಮಹಾನಗರ ಪಾಲಿಕೆಯ ಆಯುಕ್ತರಿಗೆ ಮನವಿ ಪತ್ರ ಸಲ್ಲಿಸಿದ್ದರು.

ಸದರಿ ಪ್ರದೇಶದಲ್ಲಿ ವಾಸವಾಗಿರುವ ಸಾರ್ವಜನಿಕರು ಅತ್ತ ದರಿ ಇತ್ತ ಪುಲಿ ಎಂಬಂತೆ ವಾಸ ಮಾಡುತ್ತಿದ್ದು, ಅವರ ಆಸ್ತಿಗೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳು ಈಗ ಸದ್ಯ ತಾಜಸುಲ್ತಾನಪೂರ ಗ್ರಾಮ ಪಂಚಾಯತ ವ್ಯಾಪ್ತಿಗೆ ಒಳಪಟ್ಟಿವೆ. ಆದರೆ ಚುನಾವಣೆ ಗುರುತಿನ ಚೀಟಿಗಳು ಬದಲಾವಣೆ ಆಗಿರುವುದಿಲ್ಲ, ಹೀಗಾಗಿ ಸದರಿ ಪ್ರದೇಶಲ್ಲಿ ವಾಸ ಮಾಡುತ್ತಿರುವ ಎಲ್ಲಾ ನಾಗರೀಕರ



ಚುನಾವಣೆ ಗುರುತಿನ ಚೀಟಿಯ ಕ್ಷೇತ್ರ ಕಲಬುರಗಿ ಉತ್ತರ ದಿಂದ ಕಲಬುರಗಿ ದಕ್ಷಿಣ ಕ್ಷೇತ್ರ ವ್ಯಾಪ್ತಿಗೆ ಬದಲಾವಣೆ ಮಾಡಿಕೊಡಬೇಕು ಎಂದರು. ಏಕೆಂದರೆ ನಮ್ಮ ಮುಂದಿನ ಅಭಿವೃದ್ಧಿ ಕಾರ್ಯ–ಕ್ಕೆ ಸಹಕಾರವಾಗುತ್ತದೆ. ಸದರಿ ಚುನಾವಣಾ ಗುರುತಿನ ಚೀಟಿಗಳ ಕ್ಷೇತ್ರ ಬದಲಾವಣೆ ಮಾಡಿಕೊಡಬೇಕು. ಒಂದು ವೇಳೆ ಈ ಕಾರ್ಯ ಅತೀ ಶೀಘ್ರದಲ್ಲಿ ಮಾಡದಿದ್ದರೆ ನಮ್ಮ ಸಂಘಟನೆ ವತಿಯಿಂದ ಸಮಸ್ತ ಬಡಾವಣೆಯ ನಾಗರೀಕರೊಂದಿಗೆ ತಮ್ಮ ಮಹಾನಗರ ಪಾಲಿಕೆಗೆ ಮುತ್ತಿಗೆ ಹಾಕಿ ಉಗ್ರ ರೂಪದ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಅವರು ಮನವಿ ಪತ್ರದಲ್ಲಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಶರಣು ಮೇತ್ರೆ, ಶಿವಶರಣ ಪೂಜಾರಿಕೋಟನೂರ, ಸಂತೋಷಗುತ್ತೇದಾರ, ಹಣಮಂತ ಜಮಾದಾರ ಸೇರಿದಂತೆ ಇನ್ನಿತರರು ಇದ್ದರು.

# 12 ನಕಲಿ ಜಾತಿ ಪ್ರಮಾಣಪತ್ರ ರದ್ದು, ಉದ್ಯೋಗ ಮುಟ್ಟುಗೋಲು: ಡಾ.ಎಲ್.ಮೂರ್ತಿ ಮಾಹಿತಿ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ(ಹೊಸಪೇಟೆ)

ಮೇ.19:ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಹಿತರಕ್ಷಣೆ ಹಾಗೂ ಅವರ ಸಮಸ್ಯೆಗಳ ಶೀಘ್ರ ಇತ್ಯರ್ಥ-ಕ್ಕೆ ಆಯೋಗ ಬದ್ಧವಾಗಿದ್ದು, ಅರ್ಹರಲ್ಲದವರು ನಕಲಿ ಜಾತಿ ಪ್ರಮಾಣಪತ್ರ ಪಡೆದು ಉದ್ಯೋಗ ಗಿಟ್ಟಿಸಿಕೊಂಡಿರುವುದರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗಿದೆ. ಈಗಾಗಲೇ ಜಿಲ್ಲೆಯಲ್ಲಿ ಇಂತಹ 12 ನಕಲಿ ಪ್ರಮಾಣಪತ್ರಗಳನ್ನು ರದ್ದುಪಡಿಸಿ, ಅವರ ಉದ್ಯೋಗವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗದ ಅಧ್ಯಕ್ಷರಾದ ಡಾ: ಎಲ್.ಮೂರ್ತಿ ತಿಳಿಸಿದರು.ಮಂಗಳವಾರ ವಿಜಯನಗರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಸಮುದಾಯದ ಮುಖಂಡರು, ಸಾರ್ವಜನಿಕರು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಮಹತ್ವದ ಕುಂದುಕೊರತೆ ಮತ್ತು ಪ್ರಗತಿ ಪರಿಶೀಲನಾ ಸಭೆ ನಡೆಸಿದ ಬಳಿಕ ಹಮ್ಮಿಕೊಳ್ಳಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಆಯೋಗದ ಅಧ್ಯಕ್ಷನಾಗಿ ಕಳೆದ ಆರೂವರೆ ತಿಂಗಳಲ್ಲಿ ರಾಜ್ಯದ 15 ಜಿಲ್ಲೆಗಳಲ್ಲಿ ಯಶಸ್ವಿಯಾಗಿ ಪ್ರವಾಸ ಕೈಗೊಂಡಿರುವ ಆಯೋಗಕ್ಕೆ ಇದು 16ನೇ ಜಿಲ್ಲೆಯಾಗಿದೆ ಎಂದು ತಿಳಿಸಿದರು.



ವೇತನ ನೀಡದಿದ್ದರೆ ಕ್ರಮ, ಪೌರಕಾರ್ಮಿಕರ ರಕ್ಷಣೆಗೆ ಆದೇಶ:

ಜಿಲ್ಲೆಯ ಕೆಲವು ಪುರಸಭೆಗಳಲ್ಲಿ ಪೌರಕಾರ್ಮಿಕರಿಗೆ 11 ರಿಂದ 15 ತಿಂಗಳಾದರೂ ವೇತನ ಪಾವತಿಯಾಗದಿರುವುದು ಅತ್ಯಂತ ಗಂಭೀರ ವಿಚಾರವಾಗಿದೆ. ಸಾರ್ವಜನಿಕರ ಆರೋಗ್ಯ ಕಾಯುವ ಇವರ ಜೀವನದೊಂದಿಗೆ ಆಟವಾಡಬಾರದು. ಹೊರಗುತ್ತಿಗೆ ಪೌರಕಾರ್ಮಿಕರಿಗೂ ಕನಿಷ್ಠ 15,000 ದಿಂದ 16,000 ರೂ. ವೇತನವನ್ನು ಯಾವುದೇ ವಿಳಂಬವಿಲ್ಲದೆ ಚಾಚೂ ತಪ್ಪದೆ ಪಾವತಿಸಬೇಕು. ಹಾಗೂ ಪುರಸಭೆಗಳ ತೆರಿಗೆ ನಿಧಿಯಲ್ಲಿ ಇವರ ಮಕ್ಕಳಿಗೆ ವಿಶೇಷ ಸೌಲಭ್ಯಗಳನ್ನು ರೂಪಿಸಬೇಕು ಎಂದು ಜಿಲ್ಲಾ ಅಧಿಕಾರಿಗಳಿಗೆ ಆದೇಶಿಸಲಾಗಿದೆ.

ಕಂದಾಯ ಇಲಾಖೆಯ ಅಲೆದಾಟಕ್ಕೆ ಬ್ರೇಕ್:ಕಂದಾಯ ಇಲಾಖೆಯಲ್ಲಿ ಪಾಣಿ ತಿದ್ದುಪಡಿ, ಖಾತೆ ಬದಲಾವಣೆ ಹಾಗೂ ಆಕಾರಬಂದ್ ಸರ್ವೆಗೆ ಸಂಬಂಧಿಸಿದಂತೆ ಗಂಭೀರ ಸಮಸ್ಯೆಗಳಿರುವುದು ಗಮನಕ್ಕೆ ಬಂದಿದೆ. ದೂರದ ಊರುಗಳಿಂದ ಬರುವ ಜನರನ್ನು ಅಲೆದಾಡಿಸದಂತೆ ತಾಲೂಕು ಮತ್ತು ಜಿಲ್ಲಾ ದಂಡಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದ್ದು, ಅಧಿಕಾರಿಗಳು ಕಡ್ಡಾಯವಾಗಿ ಎಸ್‌ಸಿ, ಎಸ್‌ಟಿ ಮುಖಂಡರೊಂದಿಗೆ ಸಂಪರ್ಕದಲ್ಲಿದ್ದು ನಿಯಮಿತವಾಗಿ ಸಭೆ ನಡೆಸಬೇಕು ಎಂದು ತಿಳಿಸಿದರು.

ಖಾಸಗಿ ಕಂಪನಿಗಳ ಉದ್ಯೋಗ ಮತ್ತು ಸಿಎಸ್‌ಆರ್ ನಿಧಿ ಬಳಕೆ:

ಜಿಲ್ಲೆಯಲ್ಲಿ ಬೃಹತ್ ಕಂಪನಿಗಳು ಜಮೀನು ಸ್ವಾಧೀನಪಡಿಸಿಕೊಂಡಿದ್ದು, ಇದರಲ್ಲಿ ಪರಿಶಿಷ್ಟ ಸಮುದಾಯಗಳ ಭೂಮಿಯೂ ಸೇರಿದೆ. ಭೂಮಿ ಕಳೆದುಕೊಂಡ ಹಾಗೂ ಜಮೀನು ರಹಿತ ಸಮುದಾಯದ ವಿದ್ಯಾವಂತ ಯುವಕ-ಯುವತಿಯರಿಗೆ ಆಯಾ ಕಂಪನಿಗಳಲ್ಲೇ ಉದ್ಯೋಗಾವಕಾಶ ಕಲ್ಪಿಸಲು ಮತ್ತು ಕಂಪನಿಗಳ ಸಿಎಸ್‌ಆರ್ (ಅಖಖ) ನಿಧಿಯ ಹಣವನ್ನು ಈ ಸಮುದಾಯಗಳ ಅಭಿವೃದ್ಧಿಗೆ ಬಳಸಲು ಸರ್ಕಾರ ಮಟ್ಟದಲ್ಲಿ ನಿರ್ದೇಶನ ನೀಡಲಾಗುವುದು ಎಂದರು.

ಸ್ಲಂ ನಿವಾಸಿಗಳಿಗೆ ನಿವೇಶನ ಭಾಗ್ಯ:

ಹರಪನಹಳ್ಳಿ, ಕೂಡ್ಲಿಗಿ ಸೇರಿದಂತೆ ಜಿಲ್ಲೆಯ ಎಲ್ಲಾ ಆರು ತಾಲೂಕುಗಳಲ್ಲಿರುವ ಸ್ಲಂಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿದೆ. ಮಳೆ ನೀರು ನುಗ್ಗಿ ಜನರು ತೊಂದರೆ ಅನುಭವಿಸುತ್ತಿರುವ ಬಗ್ಗೆ ಮಹಿಳೆಯರು ಅಳಲು ತೋಡಿಕೊಂಡಿದ್ದಾರೆ. ಈ ಭಾಗಗಳಲ್ಲಿ ಸೂಕ್ತ ಜಮೀನನ್ನು ಗುರುತಿಸಿ, ವಿಶೇಷ ಪ್ಯಾಕೇಜ್ ಮೂಲಕ ನಿವೇಶನ ಕಲ್ಪಿಸಿಕೊಡುವಂತೆ ಜಿಲ್ಲಾಡಳಿತಕ್ಕೆ ಸೂಚಿಸಲಾಗಿದೆ.

ವಸತಿ ಶಾಲೆಗಳ ಸುಧಾರಣೆ ಹಾಗೂ ಆರೋಗ್ಯ ತಪಾಸಣೆ:

ಕಿತ್ತೂರು ರಾಣಿ ಚನ್ನಮ್ಮ ಹಾಗೂ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಮತ್ತು ಮೆಟ್ರಿಕ್ ಪೂರ್ವ ಮತ್ತು ನಂತರದ ವಿದ್ಯಾರ್ಥಿನಿಲಯಗಳಲ್ಲಿ ಮೂಲಭೂತ ಸೌಕರ್ಯ, ಸ್ವಚ್ಛತೆ ಮತ್ತು ಗುಣಮಟ್ಟದ ಶಿಕ್ಷಣ ಕಡ್ಡಾಯವಾಗಿದೆ. 1 ರಿಂದ 12 ನೇ ತರಗತಿಯವರೆಗಿನ ಮಕ್ಕಳ ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಕೂಲಿ ಕಾರ್ಮಿಕರ ಮಕ್ಕಳಲ್ಲಿ ಕಂಡುಬರುತ್ತಿರುವ ರಕ್ತಹೀನತೆ ಮತ್ತು ಶಿಶು ಮರಣ ಪ್ರಮಾಣ ತಡೆಗಟ್ಟಲು ಆರೋಗ್ಯ ಇಲಾಖೆ ನಿಯಮಿತ ತಪಾಸಣೆ ನಡೆಸಿ, ಪೌಷ್ಟಿಕ ಆಹಾರ ಒದಗಿಸಬೇಕು ಎಂದು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಎಸ್‌ಸಿಪಿ, ಟಿಎಸ್‌ಪಿ ನಿಧಿ ಬಳಕೆಯಲ್ಲಿ ಪಾರದರ್ಶಕತೆಗೆ ನಾಮಫಲಕ ಕಡ್ಡಾಯ:

ಸರ್ಕಾರದ 31 ಇಲಾಖೆಗಳಿಗೆ ಒದಗಿಸಲಾಗುವ ಎಸ್‌ಸಿಪಿ, ಟಿಎಸ್‌ಪಿ ನಿಧಿಯ ಬಳಕೆಯಲ್ಲಿ ಪಾರದರ್ಶಕತೆ ಇರಬೇಕು. ಕೆಲವು ಕಡೆ ಕಾಮಗಾರಿಗಳ 'ಮಿಕ್ಸಿಂಗ್' ಆಗುತ್ತಿರುವ ದೂರುಗಳು ಬಂದಿರುವುದರಿಂದ, ಇದನ್ನು ತಡೆಗಟ್ಟಲು ಯಾವ ವರ್ಷದಲ್ಲಿ, ಯಾವ ಇಲಾಖೆಯಿಂದ, ಎಷ್ಟು ನಿಧಿಯಲ್ಲಿ ಕಾಮಗಾರಿ ನಡೆದಿದೆ ಎಂಬುದನ್ನು ಸಾರ್ವಜನಿಕರಿಗೆ ತೋರಿಸಲು ಕಡ್ಡಾಯವಾಗಿ ನಾಮಫಲಕಗಳನ್ನು ಅಳವಡಿಸಬೇಕು ಎಂದು ಆದೇಶಿಸಲಾಗಿದೆ.

ಅರಣ್ಯ ಭೂಮಿಯಲ್ಲಿ ವಾಸಿಸುವವರ ಒಕ್ಕಲೆಬ್ಬಿಸುವುದು ಸಲ್ಲ:

ದೀರ್ಘ ಕಾಲದಿಂದಲೂ ಅರಣ್ಯ ಭೂಮಿಯಲ್ಲಿ ಸಾಗುವಳಿ ಮಾಡುತ್ತಿರುವ ಅಲೆಮಾರಿ ಮತ್ತು ಪರಿಶಿಷ್ಟ ಸಮುದಾಯಗಳ ಯಾವುದೇ ಕುಟುಂಬಗಳನ್ನು ಎಸ್‌ಐಟಿ ವರದಿ ಬರುವವರೆಗೂ ಒಕ್ಕಲೆಬ್ಬಿಸಬಾರದು ಎಂದು ಸರ್ಕಾರದ ಕಾರ್ಯದರ್ಶಿಗಳು ಹಾಗೂ ಕನ್ಸರ್ವೇಟರ್ ಆಫ್ ಫಾರೆಸ್ಟ್ ಅವರಿಗೆ ಸ್ಪಷ್ಟ ನಿರ್ದೇಶನ ನೀಡಲಾಗಿದೆ. ಒಂದು ವೇಳೆ ಒಕ್ಕಲೆಬ್ಬಿಸಿದರೆ ಅವರಿಗೆ ಪರ್ಯಾಯವಾಗಿ ಮೂಲಭೂತ ಸೌಕರ್ಯ ಹಾಗೂ ಕಾರ್ಪಸ್ ಫಂಡ್ ಒದಗಿಸಬೇಕು ಎಂದು ತಿಳಿಸಿದರು.

ಗ್ರಾಮೀಣ ಭಾಗದ ಸ್ಮಶಾನ ಭೂಮಿ ಕೊರತೆ ನೀಗಿಸುವಿಕೆ:

ಜಾತಿ ವ್ಯವಸ್ಥೆಯಿಂದಾಗಿ ಅಸ್ಪೃಶ್ಯತೆ ಎದುರಿಸುತ್ತಿರುವ ಸಮುದಾಯಗಳಿಗೆ ಶವಸಂಸ್ಕಾರದ ವೇಳೆ ಅಡ್ಡಿಪಡಿಸಿ ಅಟ್ರಾ ಸಿಟಿ ಪ್ರಕರಣಗಳು ದಾಖಲಾಗುತ್ತಿರುವುದು ಆಯೋಗದ ಗಮನಕ್ಕೆ ಬಂದಿದೆ. ಇದಕ್ಕೋಸ್ಕರ ಪ್ರತಿ ಕಂದಾಯ ಗ್ರಾಮಗಳನ್ನು ಗುರುತಿಸಿ, ಅಗತ್ಯವಿರುವ ಕಡೆ ಸ್ಮಶಾನ ಭೂಮಿ ಒದಗಿಸಿ, ದಾರಿ ಕಲ್ಪಿಸಿಕೊಡಲಾಗುವುದು. ಎಸ್‌ಸಿಪಿ, ಟಿಎಸ್‌ಪಿ ನಿಧಿಯ ಅಡಿಯಲ್ಲಿ ಸ್ಮಶಾನಗಳ ತಡೆಗೋಡೆ ಹಾಗೂ ಸ್ವಚ್ಛತೆ ಕಾಯ್ದುಕೊಳ್ಳಲು ಕಂದಾಯ ಇಲಾಖೆ ಮತ್ತು ಜಿಲ್ಲಾಡಳಿತಕ್ಕೆ ಆದೇಶಿಸಲಾಗಿದೆ.

ದೂರು ಸಲ್ಲಿಸಲು ಇನ್ಮುಂದೆ ಆನ್‌ಲೈನ್ ಹೆಲ್ಪ್ ಡೆಸ್ಕ್:

ಆಯೋಗಕ್ಕೆ ದೂರು ಸಲ್ಲಿಸಲು ಸಾರ್ವಜನಿಕರು ಅಲೆಯುವುದ ತಪ್ಪಿಸಲು ಮುಂದಿನ ದಿನಗಳಲ್ಲಿ ಸಂಪೂರ್ಣ ಆನ್‌ಲೈನ್ ವ್ಯವಸ್ಥೆ ತರಲಾಗುತ್ತಿದೆ. ಗ್ರಾಮೀಣ ಭಾಗದ ಜನರಿಗೆ ನೆರವಾಗಲು ಪ್ರತಿ ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಹೆಲ್ಪ್ ಡೆಸ್ಕ್ ಸ್ಥಾಪಿಸಿ, ಅಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ವ್ಯವಸ್ಥೆ ಮಾಡಲಾಗುವುದು. ಆ ಬಳಿಕ ನೋಟಿಸ್ ಜಾರಿ ಮಾಡಿ, ಅಗತ್ಯಬಿದ್ದರೆ ದೂರವಾಣಿ ಮೂಲಕ ಕರೆಸಿ ಸಮಸ್ಯೆ ಇತ್ಯರ್ಥಪಡಿಸಲಾಗುವುದು ಎಂದರು.

ಆಯೋಗಕ್ಕೆ ಸಲ್ಲಿಕೆಯಾಗಿರುವ ಸುಮಾರು 4,100 ಪ್ರಕರಣಗಳ ಪೈಕಿ ಕಳೆದ ಆರೂವರೆ ತಿಂಗಳಲ್ಲಿ 800 ಕ್ಕೂ ಹೆಚ್ಚು ಪ್ರಕರಣಗಳನ್ನು ಕೋರ್ಟ್ ಮುಖಾಂತರ ಪರಿಶೀಲಿಸಿ, 500 ರಿಂದ 600 ಪ್ರಕರಣಗಳನ್ನು ಯಶಸ್ವಿಯಾಗಿ ಇತ್ಯರ್ಥಪಡಿಸಲಾಗಿದೆ ಎಂದು ಆಯೋಗದ ಅಧ್ಯಕ್ಷರು ಸುದ್ದಿಗೋಷ್ಠಿಯಲ್ಲಿ ತಿಳಿಸಿ ಕುಂದುಕೊರತೆ ಸಭೆಯಲ್ಲಿ 60 ಕ್ಕಿಂತ ಹೆಚ್ಚು ಅರ್ಜಿ ಸಲ್ಲಿಕೆಯಾಗಿದೆ ಎಂದರು.

ಈ ವೇಳೆ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಾಹ್ನವಿ. ಎಸ್, ಜಿಲ್ಲಾ ಪಂಚಾಯತ್ ಸಿಇಒ ನೊಂಗ್ಜಾಯ್ ಮಹ್ಮದ್ ಅಲಿ ಅಕ್ರಂ ಷಾ, ಅನುಸೂಚಿತ ಜಾತಿ ಮತ್ತು ಬುಡಕಟ್ಟು ಆಯೋಗದ ಕಾರ್ಯದರ್ಶಿ ಡಾ.ಹೆಚ್.ಎಸ್. ಶಿವರಾಮ್, ಸದಸ್ಯರಾದ ಗೀತಾ ಥಾವಂಶಿ, ಎನ್.ದಿವಾಕರ್, ಸುನೀಲ್ ಎಂ. ಉಕ್ಕಲಿ, ಹೂಡಾ ಅಧ್ಯಕ್ಷ ಹೆಚ್.ಎನ್.ಎಫ್ ಇಮಾಮ್ ನಿಯಾಜಿ ಸೇರಿದಂತೆ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಇದ್ದರು.

# ನರೇಗಾ ಕಾಮಗಾರಿಯಲ್ಲಿ ಎಲ್ಲಾ ಕೂಲಿಕಾರರು ಕೆಲಸಕ್ಕೆ ಹಾಜರಾಗಿ: ಅಗಳಕೇರಾ ಪಿಡಿಒ ಬಸವರಾಜ ಬಳಿಗಾರ



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಮಹಾತ್ಮಾ ಗಾಂಧಿ ನರೇಗಾ ಯೋಜನೆಯಡಿ ಎಲ್ಲಾ ಕೂಲಿಕಾರರು ಫಾರಂ ನಂ.6 ಸಲ್ಲಿಸುವ ಮೂಲಕ ಕೂಲಿ ಕೆಲಸಕ್ಕೆ ಹಾಜರಾಗುವಂತೆ ಅಗಳಕೇರಾ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿ ಬಸವರಾಜ ಬಳಿಗಾರ ಅವರು ಕರೆ ನೀಡಿದರು.

ಅಗಳಕೇರಾ ಗ್ರಾಮ ಪಂಚಾಯತಿಯ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಮಹಾತ್ಮ ಗಾಂಧಿ ನರೇಗಾ ಯೋಜನೆಯ ಐಇಸಿ ಕಾರ್ಯಕ್ರಮದಡಿ ರೋಜಗಾರ್ ದಿವಸ್ ಕಾರ್ಯಕ್ರಮದಲ್ಲಿ ಕೂಲಿಕಾರರನ್ನು ಉದ್ದೇಶಿಸಿ ಅವರು ಮಾತನಾಡಿದರು.

ಪ್ರತಿ ಮಾನವ ದಿನಕ್ಕೆ 370/- ಕೂಲಿ ನಿಗದಿಪಡಿಸಿದ್ದು ಸಂಪೂರ್ಣವಾಗಿ ಕೂಲಿ ಕೆಲಸ ನಿರ್ವಹಿಸಿ ಪೂರ್ತಿ ಹಣ ಪಡೆದುಕೊಳ್ಳಬೇಕು. 18 ವರ್ಷ ಮೇಲ್ಪಟ್ಟ ಕುಟುಂಬದ ಸದಸ್ಯರು ಜಾಬಕಾರ್ಡ ಬಳಕೆ ಮಾಡಿಕೊಂಡು ಕೂಲಿ ಕೆಲಸ ಪಡೆಯಲು ಕಡ್ಡಾಯವಾಗಿ ನಮೂನೆ-6 ಸಲ್ಲಿಸಬೇಕೆಂದರು. ಮೇ ಮತ್ತು ಜೂನ್ ವರೆಗೆ 60 ದಿನಗಳ ಕೂಲಿ ಕೆಲಸ ಪಡೆಯಬೇಕು. ಕೂಲಿ ಹಣದಿಂದ ಮಕ್ಕಳ ಶಾಲಾ, ಕಾಲೇಜು ಶುಲ್ಕ ಭರಿಸಲು, ಮಕ್ಕಳ ಸ್ಪರ್ಧಾತ್ಮಕ ಪರೀಕ್ಷೆಗೆ ಶುಲ್ಕ ಹಾಗೂ ಕುಟುಂಬ ನಿರ್ವಹಣೆಗೆ ಅನುಕೂಲವಾಗುತ್ತದೆ. ಜಾಬಕಾರ್ಡನಲ್ಲಿರುವ ಕುಟುಂಬದ ಎಲ್ಲ ಸದಸ್ಯರು ಇ-ಕೆವೈಸಿ ಹೊಂದಿದ ನಂತರವೇ ಎನ್‌ಎಂಆರ್ ಪ್ರಕಾರ ಕೂಲಿಕಾರರು ಕೂಲಿ ಕೆಲಸಕ್ಕೆ ಹಾಜರಾಗಬೇಕು. 1 & 2ನೇ ಹಾಜರಾತಿ ಕಡ್ಡಾಯವಾಗಿರುತ್ತದೆ ಎಂದರು.

ತಾಲೂಕ ಐಇಸಿ ಸಂಯೋಜಕ ದೇವರಾಜ ಪತ್ತಾರ ಅವರು ಮಾತನಾಡಿ, ಪ್ರತಿ ಜಾಬಕಾರ್ಡಗೆ 100 ಮಾನವ ದಿನಗಳ ಕೂಲಿ ಕೆಲಸ ನೀಡಲಾಗುತ್ತಿದ್ದು ಸದುಪಯೋಗ ಪಡೆಯಬೇಕು. ಗ್ರಾಮೀಣ ಭಾಗದ ಕೂಲಿಕಾರರು ಕೂಲಿ ಅರಸಿ ಗುಳೆ ಹೋಗುವದನ್ನು ನಿಯಂತ್ರಿಸಿ ಸ್ಥಳೀಯವಾಗಿ ಉದ್ಯೋಗ ಒದಗಿಸಿ ಅವರಿಗೆ ಕೂಲಿ ಹಣ ಪಾವತಿಸಿ ಸ್ವಾವಂಬಿ ಜೀವನ ನಡೆಸಲು ಯೋಜನೆಯ ಸದುದ್ದೇಶವಾಗಿದೆ. ಎಲ್ಲಾ ಕೂಲಿಕಾರರು ಸಾಮಾಜಿಕ ಭದ್ರತೆ ವಿಮೆಗಳಾದ ಪಿಎಂಜೆಜೆಬಿವೈ, ಪಿ.ಎಂ.ಎಸ್.ಬಿ.ವೈ.ಗಳಲ್ಲಿ ನೊಂದಣಿ ಮಾಡಿಕೊಳ್ಳುವಂತೆ ಕರೆ ನೀಡಿದರು. ಇದೇ ಸಂದರ್ಭದಲ್ಲಿ ಕಾಯಕ ಬಂಧುಗಳ ಮೂಲಕ ಒಟ್ಟು 121 ಕೂಲಿಕಾರರ ಫಾರಂ ನಂ.6 ಸ್ವೀಕರಿಸಲಾಯಿತು. ಗ್ರಾಮ ಪಂಚಾಯತಿ ಕಾರ್ಯದರ್ಶಿ ಅಕ್ಷಯಕುಮಾರ, ಡಿಇಒ ಸುಮನ್, ಬೇರ್‌ಫೂಟ್ ಟೆಕ್ನಿಷಿಯನ್ ಮೈಲಾರಪ್ಪ, ಕಾಯಕ ಬಂಧುಗಳಾದ ಇಸ್ಮಾಯಿಲ್, ಮಹಾಂತೇ ಕಟ್ಟಿಮನಿ, ಲತಾ ರಾಜಶೇಖರ, ಹನಮಂತಪ್ಪ, ಗವಿಸಿದ್ದಪ್ಪ, ಬಸವರಾಜ, ಬೀರಪ್ಪ, ಮಂಜುನಾಥ, ಕೂಲಿಕಾರರು ಉಪಸ್ಥಿತರಿದ್ದರು.

# "ಜನ್ ಭಾಗೀದಾರಿ-ಸಬ್ಸೆ ದೋರ, ಸಬ್ಸೆ ಪೆಹ್ಲೆ" ಎಂಬ ವಿಶೇಷ ಐಇಸಿ ಅಭಿಯಾನಕ್ಕೆ ಚಾಲನೆ



• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಮೇ.19-ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯದ ವತಿಯಿಂದ ಜಿಲ್ಲೆಯಲ್ಲಿ ಮೇ 18 ರಿಂದ 25ರವರೆಗೆ ಜನ್ ಭಾಗೀದಾರಿ-ಸಬ್ಸೆ ದೋರ, ಸಬ್ಸೆ ಪೆಹ್ಲೆ ಎಂಬ ಆಂ-ಎಉಗಂ (ಧರ್ತಿ ಅಭಾ ಜನ ಜಾಗೃತಿ ಗ್ರಾಮ ಉತ್ಕೃರ್ಷ ಅಭಿಯಾನ) ಯೋಜನೆಯಡಿ ವಿಶೇಷ ಐಇಸಿ ಅಭಿಯಾನ ಹಮ್ಮಿಕೊಳ್ಳಲಾಗಿದೆ.

ಈ ಅಭಿಯಾನದ ಉದ್ಘಾಟನಾ ಸಮಾರಂಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಪ್ರಿತಿ ಚಂದ್ರಶೇಖರ ಅವರು ಮಾತನಾಡಿ, ಬುಡಕಟ್ಟು ಪರಿಶಿಷ್ಟ ಪಂಗಡದ ಜನರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಯೋಜನೆಗಳ ಪ್ರಯೋಜನ ತಲುಪಿಸುವುದು ಮತ್ತು ಅದಕ್ಕೆ ಬೇಕಾಗುವ ಅಗತ್ಯ ದಾಖಲೆಗಳನ್ನು ಒದಗಿಸುವುದು ಅಭಿಯಾನದ ಉದ್ದೇಶವಾಗಿದೆ. ಗ್ರಾ್ರ ವ್ಂ ಮಟ್ಟದಲ್ಲಿ ಜಾಗೃತಿ, ಜನರ ಕುಂದು ಕೊರತೆ ಆಲಿಕೆ ಮತ್ತು ಆರೋಗ್ಯ ತಪಾಸಣಾ ಶಿಬಿರವನ್ನು ಸಂಬಂಧಿಸಿದ ಇಲಾಖೆಗಳ ಸಮನ್ವಯದೊಂದಿಗೆ ಆಯೋಜಿಸಲಾಗಿದ್ದು,

ಜಿಲ್ಲೆಯ ಪರಿಶಿಷ್ಟ ಪಂಗಡದ ಸಮುದಾಯದ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಇದರ ಸದುಪಯೊಗಪಡೆದು ಕೊಳ್ಳಬೇಕೆಂದು ಅವರು ತಿಳಿಸಿದರು.

# ಇಂದಿನಿಂದ ಗೃಹಲಕ್ಷ್ಮೀ 30ನೇ ಕಂತಿನ 2 ಸಾವಿರ ರೂ. ಫಲಾನುಭವಿಗಳಿಗೆ ಜಮಾ: ರೆಡ್ಡಿ ಶ್ರೀನಿವಾಸ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ





ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮೀ ಯೋಜನೆಯ 30ನೇ ಕಂತಿನ ಹಣ ವರ್ಗಾವಣೆ ಮಾಡಲಾಗಿದ್ದು, ಮೇ 20 ರಿಂದ ಜಿಲ್ಲೆಯ ಫಲಾನುಭವಿಗಳ ಖಾತೆಗೆ ಡಿಬಿಟಿ ಮೂಲಕ ನೇರವಾಗಿ ಹಣ ಜಮಾ ಆಗಲಿದೆ ಎಂದು ಕೊಪ್ಪಳ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀ ನಿವಾಸ ಅವರು ಹೇಳಿದರು.

2026ರ ಏಪ್ರಿಲ್ ಮಾಹೆಯಲ್ಲಿ ಕೊಪ್ಪಳ ಜಿಲ್ಲೆಯ 3,09,274 ಮಹಿಳಾ ಫಲಾನುಭವಿಗಳಿಗೆ ಸುಮಾರು ರೂ. 61 ಕೋಟಿ, 85 ಲಕ್ಷದ 48 ಸಾವಿರ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ. ರಾಜ್ಯ ಸರ್ಕಾರವು ಗೃಹಲಕ್ಷ್ಮೀ ಯೋಜನೆಯನ್ನು ಜಾರಿಗೆಗೊಳಿಸದ ನಂತರ ಇಲ್ಲಿಯವರೆಗೆ ಕೊಪ್ಪಳ ಜಿಲ್ಲೆಯ ಅರ್ಹ ಮಹಿಳಾ ಫಲಾನುಭವಿಗಳಿಗೆ ಒಟ್ಟು 30 ಕಂತುಗಳಲ್ಲಿ ರೂ. 1860 ಕೋಟಿಗಳನ್ನು ನೇರವಾಗಿ ಆಯಾ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಪಾವತಿಸಲಾಗಿದೆ. ಈ ಯೋಜನೆಯಡಿ ಒಬ್ಬ ಮಹಿಳಾ ಫಲಾನುಭವಿಗಳಿಗೆ ಇಲ್ಲಿಯವರೆಗೆ ರೂ. 60,000 ಗಳ ಸಹಾಯಧನ ಸಿಕ್ಕಿದಂತಾಗಿದೆ. ಇದರಿಂದ ಮಹಿಳೆಯರ ಆರ್ಥಿಕ ಸ್ವಾವಲಂಭನೆ ಹೆಚ್ಚಾಗಿದೆ. ಮಹಿಳೆಯರಿಗೆ ಕುಟುಂಬದ ನಿರ್ವಹಣೆ, ಮನೆಯ ದೈನಂತಿನ ಖರ್ಚುಗಳಿಗೆ ಸಹಾಯ, ವಿಶೇಷವಾಗಿ ಮಕ್ಕಳ ಶಿಕ್ಷಣಕ್ಕೆ ಗೃಹಲಕ್ಷ್ಮೀ ಯೋಜನೆಯ ಸಹಾಯಧನವು ಅತ್ಯಂತ ಸಹಕಾರಿಯಾಗಿದೆ ಮತ್ತು ಗ್ರಾಮೀಣ ಭಾಗದ ಬಡ ಕುಟುಂಬಗಳ ಜೀವನಮಟ್ಟ ಸುಧಾರಣೆಗೂ ತುಂಬಾ ಅನುಕೂಲವಾಗಿದೆ. ಯಾವುದೇ ಮಧ್ಯವರ್ತಿಗಳ ಹಾವಳಿ ಇಲ್ಲದೇ ಫಲಾನುಭವಿಗಳಿಗೆ ನೇರವಾಗಿ ಸಹಾಯಧನ ದೊರೆಯುವ ಮಹತ್ವದ ಯೋಜನೆ ಇದಾಗಿದೆ ಎಂದರು. ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ ಅವರ ನೇತೃತ್ವದ ನಮ್ಮ ರಾಜ್ಯ ಸರ್ಕಾರವು ನುಡಿದಂತೆ ನಡೆಯುತ್ತಿದೆ. ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್. ತಂಗಡಗಿ ಅವರು ನಿರ್ದೇಶನದಂತೆ ಮತ್ತು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರು, ಉಪಾಧ್ಯಕ್ಷರ ಹಾಗೂ ಜಿಲ್ಲೆಯ ಸಂಸದರು ಮತ್ತು ಶಾಸಕರ ಮಾರ್ಗದರ್ಶನದಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಪಂಚ ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ತಿಳಿಸಿದರು.

ತಾಂತ್ರಿಕ ಸಮಸ್ಯೆಗಳಿಂದಾಗಿ ಜಿಲ್ಲೆಯ 1302 ಫಲಾನುಭವಿಗಳ ಸಹಾಯಧನವು ಫಲಾನುಭವಿಗಳಿಗೆ ಜಮಾ ಆಗದೆ ಸರ್ಕಾರಕ್ಕೆ ವಾಪಸ್ ಆಗಿರುತ್ತದೆ. ಈ ಬಗ್ಗೆ ಸಮಸ್ಯೆಯನ್ನು ಸರಿಪಡಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದ್ದು, ಅಂಗನವಾಡಿ ಕಾರ್ಯಕರ್ತೆಯರ ಮೂಲಕ ಫಲಾನುಭವಿಗಳ ಸಮಸ್ಯೆಯನ್ನು ಸರಿಪಡಿಸುವಂತೆ ತಿಳಿಸಲಾಗಿದೆ. ಫಲಾನುಭವಿಗಳು ಸಹ ತಮ್ಮ ಬ್ಯಾಂಕ್ ಖಾತೆಯ ಇ-ಕೆವೈಸಿ, ಆಧಾರ್ ಲಿಂಕ್, ಬ್ಯಾಂಕ್ ಸೀಡಿಂಗ್ ಮತ್ತು ಇತರೆ ಸಮಸ್ಯೆಗಳನ್ನು ಸರಿಪಡಿಸಿಕೊಂಡು ಗೃಹಲಕ್ಷ್ಮೀ ಯೋಜನೆಯ ಸಹಾಯಧನ ಪಡೆದುಕೊಳ್ಳಬೇಕು ಎಂದರು.

ಈ ಬಾರಿಯ ಗೃಹಲಕ್ಷ್ಮೀ ಯೋಜನೆಯ ಸಹಾಯಧನ ಮೊತ್ತವನ್ನು ಖಜಾನೆ ಇಲಾಖೆಯ ಎನ್.ಟಿ.ಟಿ.ಎ.ಐ ವರ್ಗಾವಣೆ ಮೂಲಕ ಪಾವತಿಸಲಾಗಿದ್ದು, ಮೇ 19 ರಿಂದ ಗೃಹಲಕ್ಷ್ಮೀ ಯೋಜನೆಯ ಕೊಪ್ಪಳ ಜಿಲ್ಲೆಯ ಎಲ್ಲಾ ಮಹಿಳಾ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಒಂದೇ ಬಾರಿಗೆ ಸಹಾಯಧನ ಜಮಾ ಆಗಲಿದೆ. ಫಲಾನುಭವಿಗಳು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು. ಜಿಲ್ಲೆಯ ಗೃಹಲಕ್ಷ್ಮೀ ಯೋಜನೆಯ ಫಲಾನುಭವಿಗಳ ಪರವಾಗಿ ರಾಜ್ಯ ಸರ್ಕಾರಕ್ಕೆ ಈ ಮೂಲಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ ಎಂದು ಕೊಪ್ಪಳ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀ ನಿವಾಸ ಅವರು ಹೇಳಿದರು.

# ಕಲಬುರಗಿಗೆ ಅಂಬೇಡ್ಕರರನ್ನು ತಂದವರು: ಬಿ.ಶ್ಯಾಮಸುಂದರ್

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ



ಮೇ.19: 'ಕಲಬುರಗಿಯಲ್ಲಿ ಡಾ.ಬಾಬಾ ಸಾಹೇಬ ಅಂಬೇಡ್ಕರ್ ಅವರ ಅರಿವನ್ನು ಬಿತ್ತಿದವರು ಬಿ.ಶ್ಯಾಮಸುಂದರ್ ಅವರು. ಅವರು ಮೂಲತಃ ಔರಂಗಾಬಾದ್‌ನವರು ನಂತರ ಹೈದರಾಬಾದಲ್ಲಿ ನೆಲೆಸಿ ನಿಜಾಮ ಸಂಸ್ಥಾನದಲ್ಲಿ ಉನ್ನತ ಅಧಿಕಾರಿಯಾಗಿದ್ದವರು. ಅವರು ಭೀಮಸೇನೆಯನ್ನು ಕಟ್ಟಿ ಕಲಬುರಗಿ ಭಾಗದಲ್ಲಿ ಅಂಬೇಡ್ಕರ್ ವಿಚಾರಗಳನ್ನು ಪರಿಚಯಿಸಿದರು.ನಾವು ಅವರ ಭಾಷಣಗಳನ್ನು ಕೇಳುತ್ತಾ ಡಾ.ಅಂಬೇಡ್ಕರ್ ಬಗೆಗೆ ತಿಳಿದುಕೊಂಡೆವು. ಆದರೆ ನೀವುಗಳು ಡಾ.ಅಂಬೇಡ್ಕರ್ ಕಾಲೇಜಿನ ಮೂಲಕ ಬಾಬಾ ಸಾಹೇಬರ ಬಗ್ಗೆ ತಿಳಿದುಕೊಳ್ಳಬೇಕು' ಎಂದು ಕರ್ನಾಟಕ ಪೀಪಲ್ಸ್ ಎಜುಕೇಷನ್ ಸೊಸೈಟಿಯ ಪ್ರಧಾನ ಕಾರ್ಯದರ್ಶಿಗಳಾದ ಶಾಂತಪ್ಪ ಸೂರನ್ ಅವರು ಮಾತನಾಡಿದರು.ನಗರದ ಕರ್ನಾಟಕ ಪೀಪಲ್ಸ್ ಎಜುಕೇಷನ್ ಸೊಸೈಟಿಯ ಡಾ.ಅಂಬೇಡ್ಕರ್ ಕಲಾ ವಾಣಿಜ್ಯ ವಿಜ್ಞಾನ ಪದವಿ ಮಹಾವಿದ್ಯಾಲಯ ಮತ್ತು ಸ್ನಾತಕೋತ್ತರ ಕೇಂದ್ರದಲ್ಲಿ ಡಾ.ಅಂಬೇಡ್ಕರ್ ವಿಚಾರ ವೇದಿಕೆಯ ಸಮಾರೋಪ ಸಮಾರಂಭದ ಸಾಂಸ್ಕೃತಿಕ ಸ್ಪರ್ಧೆಗಳ ಉದ್ಘಾಟನಾ ಸಮಾರಂಭ ಜರುಗಿತು. ಅಭಿಯಂತರರಾದ ಮಲ್ಲಿಕಾರ್ಜುನ ಬಳತೆ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿದ್ದ ಕೆ.ಪಿ.ಇ ಸಂಸ್ಥೆಯ ಆಡಳಿತಾಧಿಕಾರಿಗಳಾದ ಡಾ. ಚಂದ್ರಶೇಖರ ಶೀಲವಂತ ಅವರು 'ಇಂದು ಜಗತ್ತಿನಾದ್ಯಾಂತ ಡಾ.ಬಾಬಾ ಸಾಹೇಬ ಅಂಬೇಡ್ಕರ್ ಅವರ ಬಗ್ಗೆ ಅಧ್ಯಯನಗಳು ನಡೆಯುತ್ತಿದೆ. ಜಗತ್ತಿನ ನೂರಕ್ಕಿಂತ ಹೆಚ್ಚು ದೇಶಗಳು ಅಂಬೇಡ್ಕರ್ ಅವರ ಜನ್ಮದಿನವನ್ನು ಆಚರಿಸುತ್ತಿವೆ. ಅಂದರೆ ಅಂಬೇಡ್ಕರ್ ಅವರ ವ್ಯಕ್ತಿತ್ವ ಎಷ್ಟು ಉದಾತ್ತವಾಗಿತ್ತು ಎನ್ನುವುದನ್ನು ಇಂದಿನ ವಿದ್ಯಾರ್ಥಿಗಳು ಯೋಚಿಸಬೇಕು, ಇಂದಿನ ವಿದ್ಯಾರ್ಥಿಗಳಿಗೆ ಬಾಬಾ ಸಾಹೇಬ ಅಂಬೇಡ್ಕರರೇ ಪ್ರೇರಣೆಯಾಗಬೇಕು' ಎಂದರು. ಕಾಲೇಜಿನ ಚರಿತ್ರೆ ವಿಭಾಗದ ಪ್ರಾಧ್ಯಾಪಕರು ಮತ್ತು ಡಾ.ಅಂಬೇಡ್ಕರ್ ವಿಚಾರ ವೇದಿಕೆಯ ಸಂಚಾಲಕರಾದ ಡಾ.ಗಾಂಧೀಜಿ ಮೊಳಕೆರ್ ಅವರು ಪ್ರಾಸ್ತಾವಿಕವಾಗಿ ಡಾ.ಅಂಬೇಡ್ಕರ್ ವಿಚಾರ ವೇದಿಕೆಯ ಚಟುವಟಿಕೆಗಳನ್ನು ವಿವರಿಸುತ್ತಾ ಎಲ್ಲರನ್ನು ಸ್ವಾಗತಿಸಿದರು. ಕನ್ನಡ ವಿಭಾಗದ ಡಾ.ವಸಂತ ವಿ. ನಾಶಿ ಅವರು ನಿರೂಪಿಸಿದರು. ಐಕ್ಯುಎಸಿ ನಿರ್ದೇಶಕರಾದ ಡಾ.ಸಿದ್ದಾರ್ಥ ಮದನಕರ್, ಕಾಲೇಜಿನ ಪ್ರಾಂಶುಪಾಲರಾದ ಡಾ.ಸಿದ್ದಪ್ಪ ಎಸ್.ಕಾಂತ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಾಂಸ್ಕೃತಿಕ ಸ್ಪರ್ಧೆಗಳ ಉದ್ಘಾಟನೆಯ ನಂತರ ಕಲಬುರಗಿ ಜಿಲ್ಲೆ ಮತ್ತು ಹೊರ ಜಿಲ್ಲೆಗಳಿಂದ ಬಂದ 15 ಕಾಲೇಜುಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಷಣ, ಚರ್ಚೆ, ಪ್ರಬಂಧ, ಅಂಬೇಡ್ಕರ್ ಪರ ಗೀತೆಗಳ ಸ್ಪರ್ಧೆಗಳಲ್ಲಿ ಭಾಗವಹಿಸಿದರು.ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರುಗಳಾದ ಡಾ.ನಿರ್ಮಲಾ ಸಿರಗಾಪುರ, ಡಾ. ಅರುಣ್ ಜೋಳದಕೂಡ್ಲಿಗಿ ಡಾ.ಶಿವಕುಮಾರ್, ಡಾ.ದತ್ತೂರಾಯ, ಡಾ.ಹರ್ಷವರ್ಧನ್, ಡಾ.ಕರಿಬಸಪ್ಪ, ಡಾ.ಅರುಣ್ ಕುಮಾರ್, ಡಾ.ಶಿಲ್ಪ, ಶ್ರೀಮತಿ ಕೌಶಲ್ಯಾ, ಗ್ರಂಥಪಾಲಕರಾದ ಡಾ. ರಮೇಶ ಜಾಬನೂರು, ಗ್ರಂಥ ಸಹಾಯಕರಾದ ಶೃತಿ, ದೊಡ್ಡ ಲಕ್ಷ್ಮಿ ?? ಮಂಜುಳಾ ಉಪಸ್ಥಿತರಿದ್ದರು. ಡಾ.ಸುದರ್ಶನ ಮದನಕರ್ ವಂದಿಸಿದರು.

## ಬೇಸಿಗೆಯ ಕಡುಬಿಸಿಲಿನಲ್ಲಿ ನಿರಂತರ ವಿದ್ಯುತ್ ಕಡಿತ; ಆಕ್ರೋಶ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಪ್ರಸ್ತುತ ದಿನಗಳಲ್ಲಿ ಯಾದಗಿರಿ ಮತಕ್ಷೇತ್ರದಲ್ಲಿ ಪದೇ ಪದೇ ಕರೆಂಟ್ ಕಟ್‌ಗೆ, ಜನ ಬೇಸತ್ತಿದ್ದಾರೆ ಯಾದಗಿರಿ ಜಿಲ್ಲೆಯಲ್ಲಿ 42% ಬಿಸಿಲಿನ ಸೆಕೆಯಿಂದ ಜನ ಹೈರಾಣಾಗಿದ್ದರೆ, ಮತ್ತೊಂದೆಡೆ ದಿನದಲ್ಲಿ ನಗರ ಮತ್ತು ಗ್ರಾಮೀಣ ಭಾಗದಲ್ಲಿ ಹತ್ತಾರು ಬಾರಿ ಯಾವುದೇ ಮುನ್ಸೂಚನೆ ಇಲ್ಲದೆ ವಿದ್ಯುತ್ ಕಡಿತಗೊಳಿಸುತ್ತಿರುವುದು ಯಾದಗಿರಿ ಮತಕ್ಷೇತ್ರದ ಸಾರ್ವಜನಿಕರ ತೀವ್ರ ಕೆರಳಿಕೆಗೆ ಕಾರಣವಾಗಿದೆ. ತಿಂಗಳ ಕೊನೆಗೆ ಕರೆಂಟ್ ಬಿಲ್ ಮಾತ್ರ ಸರಿಯಾದ ಸಮಯಕ್ಕೆ ಬರುತ್ತದೆ, ಆದರೆ ಬಳಸಲು ಕ-ರೆಂಟ್ ಮಾತ್ರ ಇರುವುದಿಲ್ಲ. ಎಂದು ಬಿಜೆಪಿ ಯುವಮೋರ್ಚಾ ಜಿಲ್ಲಾಧ್ಯಕ್ಷ ಶ್ರೀಧರ ಸಾಹುಕಾರ ಅವರು ವಿದ್ಯುತ್ ಇಲಾಖೆ ಮತ್ತು ಯಾದಗಿರಿ ಶಾಸಕರಿಗೆ ತೀವ್ರ ಆಕ್ರೋಶ ಹೊರಹಾಕಿದ್ದಾರೆ. ?ವಿದ್ಯುತ್ ಅಭಾವದಿಂದಾಗಿ ಸಾರ್ವಜನಿಕ ಜೀವನ, ಉದ್ಯಮ ಹಾಗೂ ಕೃಷಿ ವಲಯ ಸಂಪೂರ್ಣವಾಗಿ ಕಂಗೆಟ್ಟಿದ್ದು, ವಿಪರೀತ ಸೆಕೆಯಿಂದಾಗಿ ಫ್ಯಾನ್, ಕೂಲರ್ ಅಥವಾ ಎಸಿ ಬಳಸಲು ಸಾಧ್ಯವಾಗುತ್ತಿಲ್ಲ. ಇದ-ರಿಂದಾಗಿ ವೃದ್ಧರು, ಅನಾರೋಗ್ಯ ಪೀಡಿತರು ಮತ್ತು ಸಣ್ಣ ಮಕ್ಕಳು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ನಗರ ಭಾಗಗಳಲ್ಲಿ ರಾತ್ರಿ ವೇಳೆಯೂ ಪದೇ ಪದೇ ಕರೆಂಟ್ ಕಟ್ ಆಗುತ್ತಿರುವುದರಿಂದ ಜನರು ಸರಿಯಾಗಿ ನಿದ್ದೆ ಮಾಡಲು ಸಾಧ್ಯವಾಗದೆ ರಾತ್ರಿಯಿಡೀ ಕತ್ತಲಲ್ಲಿ ಕಳೆಯುವಂತಾಗಿದೆ.?ನಿರಂತರ ವಿದ್ಯುತ್ ಕೈಕೊಡುತ್ತಿರುವುದರಿಂದ ಸಣ್ಣ ಪುಟ್ಟ ಉದ್ಯಮಗಳಾದ ಮಹಿಳಾ ಸ್ವಸಹಾಯ ಉದ್ಯಮಿಗಳಿಗೆ, ಹಿಟ್ಟಿನ ಗಿರಣಿ, ಟೈಲರಿಂಗ್ ಶಾಪ್, ವೆಲ್ಡಿಂಗ್ ಶಾಪ್ ಮತ್ತು ಜೆರಾಕ್ಸ್ ಅಂಗಡಿಗಳ ಮಾಲೀಕರು, ಕೆಲಸವಿಲ್ಲದೆ ಕೈಕಟ್ಟಿ ಕುಳಿತುಕೊಳ್ಳುವಂತಾಗಿದ್ದು, ದಿನದ ಆದಾಯ ಕಳೆದುಕೊಂಡು ಜೀವನ ನಡೆಸಲು ಪರದಾಡುತ್ತಿದ್ದಾರೆ.?ಗ್ರಾಮೀಣ ಭಾಗಗಳಲ್ಲಿ ಕೃಷಿ ಪಂಪ್‌ಸೆಟ್‌ಗಳಿಗೆ ನಿಯಮದಂತೆ ಸಮರ್ಪಕವಾಗಿ ನೀಡಬೇಕಾದ 7 ಗಂಟೆಗಳ 'ತ್ರೀ-ಫೇಸ್' ವಿದ್ಯುತ್ ಸಿಗುತ್ತಿಲ್ಲ. ಇದರಿಂದಾಗಿ ತೋಟ ಹಾಗೂ ಕೈಗೆ ಬಂದ ಬೆಳೆಗಳಿಗೆ ನೀರು ಹಾಯಿಸಲು ಸಾಧ್ಯವಾಗದೆ, ಕಡುಬಿಸಿಲಿಗೆ ಬೆಳೆಗಳು ಕಣ್ಣೆದುರೇ ಒಣಗುತ್ತಿರುವುದನ್ನು ಕಂಡು ಅನ್ನದಾತರು ಕಣ್ಣೀರು ಹಾಕುತ್ತಿದ್ದಾರೆ. ಕೂಡಲೇ ಸಂಬಂಧಪಟ್ಟ ವಿದ್ಯುತ್ ಇಲಾಖೆಯ ಉನ್ನತ ಅಧಿಕಾರಿಗಳು ಹಾಗೂ ಯಾದಗಿರಿ ಮರಕ್ಷೇತ್ರದ ಶಾಸಕರು ಈ ಗಂಭೀರ ಸಮಸ್ಯೆಯ ಕಡೆಗೆ ಗಮನ ಹರಿಸಬೇಕು. ಅಘೋಷಿತ ವಿದ್ಯುತ್ ಕಡಿತವನ್ನು ತಕ್ಷಣವೇ ನಿಲ್ಲಿಸಿ, ನಿರಂತರ ಮತ್ತು ಗುಣಮಟ್ಟದ ವಿದ್ಯುತ್ ಪೂರೈಕೆ ಮಾಡಬೇಕು. ಇಲ್ಲದಿದ್ದರೆ ಮುಂಬರುವ ದಿನಗಳಲ್ಲಿ ಸಾರ್ವಜನಿಕರು ಹಾಗೂ ರೈತ ಸಂಘಟನೆಗಳೊಂದಿಗೆ ಸೇರಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು" ಎಂದು ಬಿಜೆಪಿ ಯುವಮೋರ್ಚಾ ಜಿಲ್ಲಾಧ್ಯಕ್ಷ ಶ್ರೀಧರ ಸಾಹುಕಾರ ಎಚ್ಚರಿಸಿದ್ದಾರೆ.

## ಅನಂತ ಕದಂ ಅವರಿಗೆ ಮಹಾರಾಷ್ಟ್ರ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪ್ರದಾನ

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ



ಗಡಿ ಪ್ರದೇಶಗಳಲ್ಲಿ ಮರಾಠಿ ಭಾಷೆಯ ಬೆಳವಣಿಗೆ, ಪ್ರಚಾರ ಹಾಗೂ ವಿವಿಧ ಸಾಮಾಜಿಕ ಮತ್ತು ಸಾಂಘಿಕ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವುದನ್ನು ಪರಿಗಣಿಸಿ, ತಾಲೂಕಿನ ಹೊಳಸಮುದ್ರ ಗ್ರಾಮದ ಹಿರಿಯರಾದ ಅನಂತ ಕದಂ ಅವರಿಗೆ ಪ್ರತಿಷ್ಠಿತ 'ಮಹಾರಾಷ್ಟ್ರ ಲಲಿತಕಲಾ ಅಕಾಡೆಮಿ-2026'ನೇ ಸಾಲಿನ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಬೆಳಗಾವಿಯಲ್ಲಿ ಜರುಗಿದ ರಾಜರಾಮಬಾಪು ಪಾಟೀಲ ಮಹಾರಾಷ್ಟ್ರ ಲಲಿತಕಲಾ ಅಕಾಡೆಮಿಯ ಪ್ರತಿಷ್ಠಿತ 4ನೇ ಆವೃತ್ತಿಯ ಉತ್ಸವದಲ್ಲಿ ಈ ಪ್ರಶಸ್ತಿ ಪ್ರದಾನ ಸಮಾರಂಭ ಯಶಸ್ವಿಯಾಗಿ ನೆರವೇರಿತು. ರಾಜಸ್ಥಾನ ಕೇಂದ್ರೀಯ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಡಾ. ಮಾಣಿಕರಾವ ಸಾಳುಂಕೆ, ಡಾ. ಅಶೋಕ ಚೌಸಳರ್ ಹಾಗೂ ಖ್ಯಾತ ವಿದ್ವಾಂಸ ಡಾ. ಸದಾನಂದ ಮೋರೆ ನೇತೃತ್ವದ ಉನ್ನತ ಮಟ್ಟದ ಆಯ್ಕೆ ಸಮಿತಿಯ ಸಮ್ಮುಖದಲ್ಲಿ ಅನಂತ ಕದಂ ಅವರಿಗೆ 'ಲೋಕನೇತೆ ರಾಜರಾಮ ಬಾಪು ಪಾಟೀಲ' ಹೆಸರಿನ 2026ನೇ ಸಾಲಿನ ರಾಷ್ಟ್ರೀಯ ಲಲಿತಕಲಾ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಯಿತು. ಈ ಕಾರ್ಯಕ್ರಮದಲ್ಲಿ ಡಾ. ವಿವೇಕಾನಂದ ಗೋಪಾಲ, ರಣಧೀರ ಸಿಂಗ್, ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಮೀನಾಕ್ಷಿ ಸುನೀಲಕುಮಾರ ಲವಾಟೆ, ಕೊಲ್ಹಾಪುರದ ಶಿವಾಜಿ ಸೇರಿದಂತೆ ಪ್ರಮುಖ ರಾಜಕೀಯ ಹಾಗೂ ಸಾಂಸ್ಕೃತಿಕ ವಲಯದ ಗಣ್ಯರು ಉಪಸ್ಥಿತರಿದ್ದು ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಿದರು.?ಅನಂತ ಕದಂ ಅವರ ಈ ಸಾಧನೆಗೆ ಕಮಲನಗರ ಹಾಗೂ ಹೊಳಸಮುದ್ರ ಗ್ರಾಮದ ಪ್ರಮುಖರು ಮತ್ತು ಸಾರ್ವಜನಿಕರು ಹರ್ಷ ವ್ಯಕ್ತಪಡಿಸಿ, ಶುಭ ಕೋರಿದ್ದಾರೆ.

## ಕೋರಮಂಗಲ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ದೇವರಾಜ್ .ಸಿ ಅವಿರೋಧ ಆಯ್ಕೆ

• ಮಲ್ಲಮ್ಮ ನುಡಿ ವಾರ್ತೆ ದೇವನಹಳ್ಳಿ




ತಾಲೂಕಿನ ವಿಜಯಪುರ ಹೋಬಳಿಯ ಕೋರಮಂಗಲ ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನಕ್ಕೆ ಚನ್ನೇಗೌಡ ರವರು ರಾಜೀನಾಮೆ ನೀಡಿದ್ದರಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ದೇವರಾಜ್. ಸಿ ಒಬ್ಬರೇ ನಾಮಪತ್ರ ಸಲ್ಲಿಸಿರುವುದರಿಂದ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಸುನಿಲ್ ತಿಳಿಸಿದರು.

ಈ ವೇಳೆಯಲ್ಲಿ ನೂತನ ಅಧ್ಯಕ್ಷರಾದ ದಂಡಿಗಾನಹಳ್ಳಿ ದೇವರಾಜ್ .ಸಿ ಮಾತನಾಡಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆ ಮಾಡಿದ ಎಲ್ಲ ಸದಸ್ಯರಿಗೂ ಅಭಿನಂದನೆಗಳನ್ನು ತಿಳಿಸಿ ಎಲ್ಲರ ಸಹಕಾರ ಸಹಮತದೊಂದಿಗೆ ಗ್ರಾಮ ಪಂಚಾಯಿತಿಯ ಪ್ರತಿ ಹಳ್ಳಿಯಲ್ಲೂ ಮೂಲಭೂತ ಸೌಕರ್ಯಗಳು ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸಲಾಗುವುದು, ಬಹು ಮುಖ್ಯವಾಗಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಿ ಸಮರ್ಪಕ ವ್ಯವಸ್ಥೆಯನ್ನು ಕಲ್ಪಿಸಲಾಗುವುದು ಎಂದು ಹೇಳಿದರು.

ನೂತನ ಅಧ್ಯಕ್ಷರಾಗಿ ಆಯ್ಕೆಯಾದ ದೇವರಾಜ್. ಸಿ ರವರನ್ನು ತಾಲೂಕಿನ ಹಲವು ಮುಖಂಡರು ಮತ್ತು ಗ್ರಾಮಸ್ಥರು ಅಭಿನಂದಿಸಿದರು.

ಇದೇ ಸಂದರ್ಭದಲ್ಲಿ ವೆಂಕಟಗಿರಿ ಕೋಟೆ ಗ್ರಾಮ ಪಂಚಾಯಿತಿಯ ಮಾಜಿ ಅಧ್ಯಕ್ಷ ಅಮರನಾಥ್, ಕೋರಮಂಗಲ ಗ್ರಾ.ಪಂ. ಉಪಾಧ್ಯಕ್ಷೆ ಕನಕ ರತ್ನಮ್ಮ, ಸದಸ್ಯರುಗಳಾದ ಚೆನ್ನೇಗೌಡ, ಧನಂಜಯ್, ಪುಷ್ಪ, ಹರೀಶ್ ಕುಮಾರ್, ಗಾಯಿತ್ರಿ, ಮಂಜುಳಾ, ಕಿರಣ್, ಭಾಗ್ಯಲಕ್ಷ್ಮಿ, ಪಿಡಿಒ ಮುಖಂಡರುಗಳು ಮತ್ತು ಗ್ರಾಮಸ್ಥರು ಭಾಗಿಯಾಗಿದ್ದರು.

## 15 ಸೌಹಾರ್ದ ಸಹಕಾರಿಗಳ ನೋಂದಣಿ ರದ್ದು: ಆಕ್ಷೇಪಣೆ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಮೇ.19-ಕಲಬುರಗಿ ಉಪವಿಭಾಗದಲ್ಲಿ ದಿನಾಂಕ: 31-03-2026 ರಂತೆ ಸೌಹಾರ್ದ ಸಹಕಾರಿಗಳ ಯಾದಿ ಪ್ರಕಾರ ಒಟ್ಟು 15 ಸಹಕಾರಿಗಳು ಕಾರ್ಯನಿರತವಾಗಿರದೇ ಎರಡು ವರ್ಷಕ್ಕೂ ಮೇಲ್ಪಟ್ಟು ಕಾರ್ಯಸ್ಥಗಿತಗೊಂಡಿರುವ ಪ್ರಯುಕ್ತ ಈ ಸಹಕಾರಿಗಳ ನೋಂದಣಿ ರದ್ದುಪಡಿಸಲಾಗುತ್ತಿದೆ. ಈ ಕುರಿತು ಏನಾದರು ಆಕ್ಷೇಪಣೆಗಳು ಇದ್ದಲ್ಲಿ ಈ ಪತ್ರಿಕಾ ಪ್ರಕಟಣೆ ಹೊರಡಿಸಿದ 15 ದಿನದೊಳಗಾಗಿ ಸೂಕ್ತ ದಾಖಲೆಗಳೊಂದಿಗೆ ಆಕ್ಷೇಪಣೆಗಳನ್ನು ಸಲ್ಲಿಸಬೇಕೆಂದು ಕಲಬುರಗಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಹಾಗೂ ಸಮಾಪನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದು ವೇಳೆ ನಿಗದಿತ ಅವಧಿಯೊಳಗಾಗಿ ಆಕ್ಷೇಪಣೆಗಳು ಸ್ವೀಕೃತವಾಗದೇ ಇದ್ದಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿಗಳ ಅಧಿನಿಯಮ 1997ರ ನಿಯಮ 49(1)ರ ಅಡಿಯಲ್ಲಿ ನೋಂದಣಿ ರದ್ದತಿಗಾಗಿ ಕ್ರಮವಿಡಲಾಗುತ್ತದೆ. ಈ ಸಹಕಾರಿಗಳನ್ನು ನೋಂದಣಿ ರದ್ದು ಮಾಡಲು ಕಲಬುರಗಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಇವರು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯನ್ನು ಸಮಾಪನಾಧಿಕಾರಿಯನ್ನಾಗಿ ನೇಮಿಸಿರುತ್ತಾರೆ.

ಸೌಹಾರ್ದ ಸಹಕಾರಿಗಳ ವಿವರ ಇಂತಿದೆ: ಸುರಕ್ಷಾ ಸೌಹಾರ್ದ ಪತ್ತಿನ ಸಹಕಾರಿ ನಿ. ಅಫಜಲಪುರ, ಶ್ರೀ ಜನರಕ್ಷಾ ಪತ್ತಿನ ಸೌಹಾರ್ದ ಸಹಕಾರಿ ನಿ. ಕಲಬುರಗಿ, ಶಿವಶಕ್ತಿ ಪತ್ತಿನ ಸೌಹಾರ್ದ ಸಹಕಾರಿ ನಿ. ಕಮಲಾಪುರ, ಶ್ರೀ ಶರಣ ಮಣಿಕಂಠ ಸೌಹಾರ್ದ ಸಹಕಾರಿ ನಿ. ಕಲಬುರಗಿ, ಶ್ರೀ ಶಾರದಾಂಬೆ ಸೌಹಾರ್ದ ಪತ್ತಿನ ಸಹಕಾರಿ ನಿ.ಕಲಬುರಗಿ, ಕಾಯಕ ಸೌಹಾರ್ದ ಪತ್ತಿನ ಸಹಕಾರಿ ನಿ. ಆಳಂದ, ಶ್ರೀ ಶರಣಸಾಯಿ ಸೌಹಾರ್ದ ಪತ್ತಿನ ಸಹಕಾರಿ ನಿ. ಕಲಬುರಗಿ, ನಿಸರ್ಗ ಸೌಹಾರ್ದ ಪತ್ತಿನ ಸಹಕಾರಿ ನಿ. ಕಲಬುರಗಿ, ಕರುನಾಡು ಕಲ್ಯಾಣ ಸೌಹಾರ್ದ ಪತ್ತಿನ ಸಹಕಾರಿ ನಿ. ಕಲಬುರಗಿ, ಶ್ರೀ ಶರಣ ಸೂಗೂರೇಶ್ವರ ಸೌಹಾರ್ದ ಪತ್ತಿನ ನಿ. ಕಲಬುರಗಿ, ತೃಪ್ತಿ ಮಹಿಳಾ ಸೌಹಾರ್ದ ಪತ್ತಿನ ಸಹಕಾರಿ ನಿ. ಕಲಬುರಗಿ, ಶ್ರೀ ಲಕುಮಿಕರ್ ಸೌಹಾರ್ದ ಪತ್ತಿನ ಸಹಕಾರಿ ನಿ. ಜೇವರ್ಗಿ, ಜೀವನ ಸಮೃದ್ಧಿ ಸೌಹಾರ್ದ ಪತ್ತಿನ ಸಹಕಾರಿ ನಿ. ಜೇವರ್ಗಿ, ಶ್ರೀ ವಿರಾಟ ವಿಶ್ವಕರ್ಮ ಸೌಹಾರ್ದ ಪತ್ತಿನ ಸಹಕಾರಿ ನಿ. ಕಲಬುರಗಿ ಹಾಗೂ ಶ್ರೀ ಅಭಿನವ ಸಿದ್ಧಲಿಂಗ ಸೌಹಾರ್ದ ಪತ್ತಿನ ಸಹಕಾರಿ ನಿ. ಕಲಬುರಗಿ.

## ಪರವಾನಗಿ ಭೂಮಾಪಕರ ಪ್ರತಿಭಟನೆಯ ಕಾವು ರಾಜ್ಯದ ರೈತರ ಪರದಾಟ

• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ಪರವಾನಗಿ ಭೂಮಾಪಕರ ಪ್ರತಿಭಟನೆಯ ಕಾವು ರಾಜ್ಯದ ರೈತರ ಪರದಾಟ ಸಮಸ್ಯೆ ಬಗೆ ಹರಿಸದೆ ಕಣ್ಮುಚ್ಚಿ ಕುಳಿತ ಸರ್ಕಾರ ಎಂದು ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷರಾದ ಹೊಸೂರು ಕುಮಾರ್ ತಿಳಿಸಿದ್ದಾರೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿ

ಕಳೆದ ಮೂರು ತಿಂಗಳಿನಿಂದ ಸತತವಾಗಿ ಪರವಾನಗಿ ಭೂಮಾಪಕರು ಪ್ರತಿಭಟನೆಯಲ್ಲಿ ತೊಡಗಿದ್ದು ಅರ್ಜಿ ಸಲ್ಲಿಸಿರುವ ರೈತರು ತೀವ್ರ ಸಂಕಷ್ಟವನ್ನು ಎದುರಿಸುತ್ತಿದ್ದಾರೆ. ಕರ್ನಾಟಕದಲ್ಲಿ ಭೂದಾಖಲೆಗಳ 3 ಲಕ್ಷ ಬಾಕಿ ಪ್ರಕರಣಗಳನ್ನು ಇತ್ಯರ್ಥಗೊಳಿಸಲು 1999ರಲ್ಲಿ ಸರ್ಕಾರವೇ "ಪರವಾನಗಿ ಭೂಮಾಪಕ" (LS) ವ್ಯವಸ್ಥೆಯನ್ನು ರೂಪಿಸಿತು. ಎರಡೂವರೆ ದಶಕಗಳ ನಂತರ, ರಾಜ್ಯದ 6000 ಕ್ಕೂ ಹೆಚ್ಚು ಮಾಪಕರು ಗಳು 11ಇ ನಕ್ಷೆ, ತತ್ಕಾಲ್ ಪೋಡಿ, ಭೂಪರಿವರ್ತನೆ, ಸ್ವಾಮಿತ್ವ ಯೋಜನೆ, ಇ-ಸ್ವತ್ತು ಸೇರಿದಂತೆ 19 ಬಗೆಯ ಕೆಲಸಗಳನ್ನು - ಸರ್ಕಾರಿ ಭೂಮಾಪಕರು (GS) ಮಾಡುವ ಅದೇ ಕೆಲಸವನ್ನು - ನಿಭಾಯಿಸುತ್ತಿದ್ದಾರೆ.

ಆದರೆ ಸಂಭಾವನೆ? ಕಡತಕ್ಕೆ ?1200, ಸ್ಕೆಚ್‌ಗೆ ?360- ತಿಂಗಳಿಗೆ ?10000 -20000/- ಕೈಗೆ ಬಂದರೆ ಅದೇ ಹೆಚ್ಚು. DA, HRA, ಪಿಎಫ್, ಪಿಂಚಣಿ, ಆರೋಗ್ಯ ವಿಮೆ, ರಜೆ - ಯಾವುದೂ ಇಲ್ಲ. ಅದೇ ಕೆಲಸಕ್ಕೆ ಉಖಗೆ ?60000/- + ವೇತನ ಸಿಗುತ್ತಿದೆ.

ಸಮಾನ ಕೆಲಸಕ್ಕೆ ಸಮಾನ ವೇತನ ಎಂಬ ಸುಪ್ರೀಂ ಕೋರ್ಟ್ ತತ್ವ (ಜಗ್ಜಿತ್ ಸಿಂಗ್ ತೀರ್ಪು, 2016) ಇಲ್ಲಿ ಎಲ್ಲಿ ಹೋಯಿತು?

ಹೈಕೋರ್ಟ್ ಎರಡು ಬಾರಿ - 2013ರಲ್ಲಿ (WP51923/2012) ಮತ್ತು 2023ರಲ್ಲಿ (WP18763/2022) - ಸರ್ಕಾರಕ್ಕೆ ಲ್ಸ್ ಗಳ ಬೇಡಿಕೆ ಪರಿಗಣಿಸಲು ಸ್ಪಷ್ಟ ಆದೇಶ ನೀಡಿದೆ. 12 ವರ್ಷ ಕಳೆದರೂ ಎರಡೂ ಆದೇಶಗಳು ಕಾಗದದಲ್ಲಿಯೇ ಉಳಿದಿವೆ. ಇನ್ನೊಂದೆಡೆ, ತೆಲಂಗಾಣ ಸರ್ಕಾರ ನಮ್ಮ ಮಾದರಿಯನ್ನು ಅನುಕರಿಸಿ 2025ರಲ್ಲಿ 5000 ಪರವಾನಗಿ ಬಹುಮಾಪಕರುಗಳನ್ನು ಸವಲತ್ತುಗಳ ಸಹಿತ ನೇಮಕ ಮಾಡಿಕೊಂಡಿದೆ.



2026ರ ರ ಗಿಖಃ ಸುತ್ತೋಲೆಯಲ್ಲಿ ಸರ್ಕಾರವೇ ಪರವಾನಗಿ ಭೂಮಾಪಕರ ಒಂದು "ಹುದ್ದೆ" ಎಂದು ಒಪ್ಪಿಕೊಂಡು 698 ಹೊಸ ಹುದ್ದೆಗಳನ್ನು ಸೃಷ್ಟಿಸುತ್ತಿದೆ.

ಹಾಗಾದರೆ ಸರ್ಕಾರ ಮಾಡಬೇಕಿರುವುದು ಇಷ್ಟೇ: KLR Rules 1966ರ ನಿಯಮ 46ಕ್ಕೆ ತಿದ್ದುಪಡಿ ತಂದು ಪರವಾನಗಿ ಭೂಮಾಪಕರುಗಳಿಗೆ ಶಾಶ್ವತ ಸ್ಥಾನಮಾನ, ಸ್ಥಿರ ವೇತನ ಶ್ರೇಣಿ ಮತ್ತು ಮೂಲ ಸವಲತ್ತುಗಳನ್ನು ಒದಗಿಸುವುದು. ಇದಕ್ಕೆ ಬೇಕಿರುವ ವಾರ್ಷಿಕ ?288 ಕೋಟಿ - ಪರವಾನಗಿ ಭೂಮಾಪಕರಿಂದ ಸರ್ಕಾರಕ್ಕೆ ಬರುತ್ತಿರುವ ?1000 + ಕೋಟಿ ಆದಾಯದ ಶೇ.5 ಮಾತ್ರ.

ಇದು ದಯೆಯ ಪ್ರಶ್ನೆಯಲ್ಲ; ನ್ಯಾಯದ ಪ್ರಶ್ನೆಯಾಗಿದೆ ಎಂದರು

ಕಂದಾಯ ಇಲಾಖೆಯಲ್ಲಿ ಸಂಪೂರ್ಣ ಭೂಮಿಯ ದಾಖಲೆಗಳನ್ನು ಕಂಪ್ಯೂಟರಿಕರಣಗೊಳಿಸಿ ಡಿಜಿಟರಿಕರಣ ಮಾಡುತ್ತಿರುವ ಕಂದಾಯ ಸಚಿವರಾದ ಕೃಷ್ಣಬೈರೇಗೌಡರವರು ಅಂದಿನ ಸಿದ್ದರಾಮಯ್ಯರವರ ಸರ್ಕಾರದಲ್ಲಿ ವಿ ಶ್ರೀನಿವಾಸ್ ಪ್ರಸಾದ್ ರವರು ಕಂದಾಯ ಸಚಿವರಾಗಿದ್ದಾಗ ಇದೇ ಕ್ರಮವನ್ನು ಅಂದೆ ತೆಗೆದುಕೊಂಡು ಒಂದು ಸರ್ವೆ ನಂಬರನ್ನು ಪೂರ್ಣಗೊಳಿಸುವುದಾಗಿ ತೀರ್ಮಾನ ತೆಗೆದುಕೊಂಡು ಐದು ವರ್ಷ ಕಳೆದರೂ ತಾಲೂಕಿನಲ್ಲಿ ಒಂದು ನಂಬರನ್ನು ಪೂರ್ಣಗೊಳಿಸಲಾಗದ ಸರ್ಕಾರ ಉರುಳಿ ಹೋದ ನಂತರ

ಮತ್ತೊಮ್ಮೆ ಸಿದ್ದರಾಮಯ್ಯ ಸರ್ಕಾರದಲ್ಲಿ ಕಂದಾಯ ಸಚಿವರಾದ ಕೃಷ್ಣಬೈರೇಗೌಡರವರು ಪೂರ್ಣಗೊಳಿಸುತ್ತೇವೆಂದು ಕ್ರಮಕ್ಕೆ ಮುಂದಾಗಿ ಮೂರು ವರ್ಷಗಳು ಪೂರೈಸುತ್ತಾ ಬಂದರೂ ಉಳಿದಿರುವ ದುರಸ್ತು ಕಾರ್ಯ ಹೇಗೆ ಸಾಧ್ಯವಾಗುತ್ತದೆ. ಇದರ ಬಗ್ಗೆ ಕಂದಾಯ ಇಲಾಖೆಯವರು ರೈತರ ಬಗ್ಗೆ ಬಹಳ ಕಾಳಜಿ ಉಳ್ಳಂತಹ ಕಂದಾಯ ಸಚಿವರಾದ ಕೃಷ್ಣಬೈರೇಗೌಡರವರು ಪರವಾನಗಿ ಭೂಮಾಪನ ನೌಕರರು ಕಳೆದ ಮೂರು ತಿಂಗಳುಗಳಿಂದ ಕೆಲಸಕ್ಕೆ ಗೈರು ಹಾಜರಿಯಾಗಿರುವ ಬಗ್ಗೆ ಯಾವುದೇ ಗಮನಹರಿಸದೆ ನಿರಂತರವಾಗಿ ಗ್ರಾಮೀಣ ಪ್ರದೇಶದ ಭೂಮಾಲೀಕರು ಯಾವುದೇ ದುರಸ್ತು ಕಾರ್ಯ ಕೈಗೊಳ್ಳದಿರುವ ಕಾರಣ ಕಚೇರಿಗಳಿಂದ ಕಚೇರಿಗೆ ಅಲೆದಾಡುತ್ತಿದ್ದಾರೆ. ಆದ್ದರಿಂದ ಆದಷ್ಟು ಶೀಘ್ರವಾಗಿ ಪರವಾನಗಿ ಭೂಮಾಪಕರ ಸಮಸ್ಯೆಯನ್ನು ಬಗೆಹರಿಸದಿದ್ದಲ್ಲಿ ಇದರಿಂದಾಗಿ ರೈತರಿಗೆ ಆಗುತ್ತಿರುವ ತೊಂದರೆಯ ಬಗ್ಗೆ ರೈತ ಸಂಘಟನೆಗಳು ಮುಂದಿನ ಹೋರಾಟವನ್ನು ರೂಪಿಸಬೇಕಾಗುತ್ತದೆ ಎಂದರು.

## ಏಣಕುರ್ ಗ್ರಾ.ಪಂ.ನಲ್ಲಿ ಅವ್ಯವಹಾರ ಅಧಿಕಾರಿಗಳ ನಿರ್ಲಕ್ಷ್ಯ ಆರೋಪ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ




ಮೇ 19: ತಾಲೂಕಿನ ಏಣಕುರ್ ಗ್ರಾಮ ಪಂಚಾ ಯತಿಯಲ್ಲಿ ಅವ್ಯವಹಾರ ನಡೆದಿದ್ದ, ಈ ಬಗ್ಗೆ ದೂರು ನೀಡಿದು ಕೂಡ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿದ್ದಾರೆ ಎಂದು ಸಾಮಾಜಿಕ ಕಾರ್ಯಕರ್ತ ಭೀಮರೆಡ್ಡಿ ಸಿಂಧನಕೇರಾ ಅವರು ಪ್ರಕಟಣೆ ಮೂಲಕ ಆರೋಪಿಸಿ ದ್ದಾರೆ. ಏಣ-ಕುರ್ ಗ್ರಾಮ ಪಂಚಾಯತಿಯಲ್ಲಿ 2023-24 ಮತ್ತು 2024-25ನೇ ಸಾಲಿನ 15ನೇ ಹಣಕಾಸು ಯೋಜನೆ ಅಡಿಯಲ್ಲಿ ಕುಡಿಯುವ ನೀರು, ಸಿಟಿಲೈಟ್, ಚರಂಡಿ, ಬೋರ್‌ವೆಲ್ ರಿಪೇರಿ ಇತ್ಯಾದಿ ಕಾಮಗಾರಿಗಳ ಹಣವನ್ನು ತುಕಾರಾಮ ಅವರನ್ನು ಟೆಂಡರ್ ಮಾಡಿ ಜಮೆ ಮಾಡಿರುತ್ತಾರೆ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಆನಂದ್ ಇವರು ಅವ್ಯವಹಾರ ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ.ಈ ಅವ್ಯವ ಹಾರದ ಬಗ್ಗೆ 2026ರ ಫೆ17ರಂದು ಜಿಲ್ಲಾ ಪಂಚಾಯತ್ ಗೆ 36 ಪುಟಗಳ ಭ್ರಷ್ಟಾಚಾರದ ದಾಖಲೆಗಳು ಸಲ್ಲಿಸಲಾಗಿತ್ತು ಆ ನಂತರದಲ್ಲಿ ಜಿಲ್ಲಾ ಪಂಚಾಯತ್ ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು 2026ರ ಮಾ.3ರಂದು ಈ ವಿಷಯದ ಬಗ್ಗೆ ಕೂಲಂಕುಶವಾಗಿ ಪರಿಶೀಲಿಸಿ ಒಂದು ವಾರದೊಳಗೆ ವರದಿ ಸಲ್ಲಿಸಬೇಕು ಎಂದು ಸೂಚಿಸಿದ್ದರು. ಆದರೆ, ಭಾಲ್ಕಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಣಾಧಿಕಾರಿ ಸೂರ್ಯಕಾಂತ್ ಬಿರಾದಾರ್ ಅವರು ನಿರ್ಲಕ್ಷ್ಯ ತೋರುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.



ಈ ಅವ್ಯವಹಾರದಲ್ಲಿ ಭಾಲ್ಕಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಣಾಧಿಕಾರಿ ಸೂರ್ಯಕಾಂತ್ ಬಿರಾದಾರ್ ಅವರ ಕೈವಾಡ ಇದೆ ಎಂಬ ಅನುಮಾನವ್ಯಕ್ತವಾಗಿದೆ ಆದ್ದರಿಂದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ರಾಜ್ಯದ ಬೇರೆ ಜಿಲ್ಲೆಯ ಅಧಿಕಾರಿಗಳಿಂದ ತನಿಖೆಗೆ ಆದೇಶ ಮಾಡಬೇಕು. ಒಂದು ವೇಳೆ ಹೀಗೆ ಮಾಡದಿದ್ದರೆ ಲೋಕಾಯುಕ್ತ ಕೋರ್ಟ್ ಮೊರೆ ಹೋಗಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಭೀಮರೆಡ್ಡಿ ಸಿಂಧನಕೇರಾ
ಸಾಮಾಜಿಕ ಕಾರ್ಯಕರ್ತರು ಹುಮನಾಬಾದ

## ಸಂಭ್ರಮದಿಂದ ನಡೆದ ಹೊನ್ನೆಬೈಲ ಬಂಡಿಹಬ್ಬ



• ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ

ತಾಲೂಕಿನ ಹೊನ್ನೆಬೈಲ್ ಗ್ರಾಮದೇವರ ಬಂಡಿಹಬ್ಬವು ಮಂಗಳವಾರ ಸಂಭ್ರಮ ಸಡಗರದಿಂದ ನಡೆಯಿತು. ಶ್ರೀ ಬೊಮ್ಮಯ್ಯ ದೇವ, ಶ್ರೀ ಮಾಣಿಬೀರ, ಕುಸ್ಲದೇವರ ಕಳಸವು ಕಳಸ ದೇವಸ್ಥಾನದಲ್ಲಿ ಸಿದ್ಧಗೊಂಡು ನಂತರ ದೇವಸ್ಥಾನಕ್ಕೆ ತೆರಳಿತು. ಈ ಸಂದರ್ಭದಲ್ಲಿ ಹೊನ್ನೆಬೈಲ್ ಟೆಂಪಲ್ ಟ್ರಸ್ಟ್ ಅಧ್ಯಕ್ಷ ಹನುಮಂತ ಬೊಮ್ಮು ಗೌಡ, ಅರ್ಚಕರು, ಗುನುಗರು, ಹಕ್ಕುದಾರರು, ಭಕ್ತರು ಪಾಲ್ಗೊಂಡಿದ್ದರು. ನಂತರ ಶ್ರೀ ದೇವರಿಗೆ ಭಕ್ತರು ಹರಕೆ ತೀರಿಸಿದರು.

## ಕುಟುಂಬವೇ ಭಾರತದ ಪ್ರಾಣ - ಕುಟುಂಬದಿಂದಲೇ ರಾಷ್ಟ್ರ ನಿರ್ಮಾಣ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಮೇ 19: ಹಿಂದೂಗಳ ಸಂಘಟನೆಯೇ ಹಿಂದೂತ್ವದ ಶಾಶ್ವತ ಧರ್ಮ ಆದರೆ ಕಾಲಬದಲಾವಣೆಯ ಅನುಸಾರ ಸಾಮಾಜಿಕ ಸಮರಸತೆ, ಕುಟುಂಬ ಪ್ರಬೋಧನ, ಪರಿಸರ ಸಂರಕ್ಷಣೆ, ಸ್ವದೇಶಿ ಮತ್ತು ನಾಗರಿಕ ಕರ್ತವ್ಯಗಳ ಪಾಲನೆ ಎಂಬ ಈ ಪಂಚ ಪರಿವರ್ತನೆ ಮಂತ್ರವೇ ಈಗ ಹಿಂದೂತ್ವದ ಯುಗಧರ್ಮವಾಗಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೋಸಬಾಳೆ ಹೇಳಿದರು.

ಅವರು ಮಹಾರಾಷ್ಟ್ರದ ಪುಣೆ ನಗರದ ಯಳವಂಡಿಯ ರಾಷ್ಟ್ರೀಯ ಪ್ರಕೃತಿ ಚಿಕಿತ್ಸಾ ಸಂಸ್ಥೆಯ ಸಭಾಂಗಣದಲ್ಲಿ ಭಾನುವಾರ ನಡೆದ ಆಯುಶ್ ಇಲಾಖೆ ಆಡಳಿತ ಮಂಡಳಿ ಸದಸ್ಯರಾದ ಅನಂತ ಬಿರಾದಾರ ಅವರ ಕುಟುಂಬದ ಸ್ನೇಹಮಿಲನ ಮತ್ತು ಕುಟುಂಬ ಪ್ರಬೋಧನ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ವ್ಯಕ್ತಿತ್ವ ನಿರ್ಮಾಣ ಮತ್ತು ಸಮಾಜದ ಸಂಘಟನೆ ಸಂಘದ ಮೂಲಾಧಾರವಾಗಿದೆ ಆದರೆ ಕಾಲಾನುಸಾರ ಸಮಾಜ ಪರಿವರ್ತನೆಗಾಗಿ ಸಂಘವು ಪಂಚ ಪರಿವರ್ತನೆ ಎಂಬ ವಿಚಾರವನ್ನು ಜನರ ಮುಂದಿಟ್ಟಿದೆ, ಜನ್ಮದ ಆಧಾರದ ಮೇಲೆ ನಡೆಯುವ ಭೇದಭಾವ ದೇವರ ವಿರೋಧಿಯಾಗಿದೆ ಮತ್ತು ಅದಕ್ಕೆ ಹಿಂದೂ ಸಮಾಜದಲ್ಲಿ ಯಾವುದೇ ಸ್ಥಾನವಿಲ್ಲ ಸಮಾಜದಲ್ಲಿನ ಭೇದಭಾವ ಸಂಪೂರ್ಣವಾಗಿ ನಾಶವಾಗಬೇಕು, ಪರಿಸರ ಸಂರಕ್ಷಣೆಗೆ ಕೇವಲ ಕಾನೂನು ಮಾಡಿದರೆ ಸಾಲದು ಅದು ನಿತ್ಯ ಸಂಸ್ಕಾರಗಳ ಮೂಲಕ ಜಾರಿಯಾಗಬೇಕು, ನಾಗರಿಕರು ಸಂವಿಧಾನ ನೀಡಿರುವ ಹಕ್ಕುಗಳ ಜೊತೆಗೆ ತಮ್ಮ ಕರ್ತವ್ಯಗಳ ಅರಿವನ್ನು ಹೊಂದಿರಬೇಕು, ಕುಟುಂಬವೇ ರಾಷ್ಟ್ರದ ಆರ್ಥಿಕ ಮತ್ತು ಸಾಮಾಜಿಕ ಘಟಕವಾಗಿದ್ದು ಇದೇ ಕುಟುಂಬ ವ್ಯವಸ್ಥೆಯ ಕಾರಣದಿಂದ ಭಾರತವು ಸಾವಿರಾರು ವರ್ಷಗಳ ಕಾಲ ವಿದೇಶಿಯರ ಆಕ್ರಮಣಗಳನ್ನು ಯಶಸ್ವಿಯಾಗಿ ಎದುರಿಸಿದೆ, ಆದರೆ ಇಂದಿನ ತಾಂತ್ರಿಕ ಯುಗದಲ್ಲಿ ಪಾಶ್ಚಾತ್ಯ ದೇಶಗಳ ಅಂಧಾನುಕರಣದಿಂದ ನಮ್ಮ ಕುಟುಂಬ ವ್ಯವಸ್ಥೆಗೆ ದೊಡ್ಡ ಸವಾಲು ಎದುರಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಕರ್ನಾಟಕದಲ್ಲಿ ವಾಸಿಸುವ ಪ್ರತಿಯೊಬ್ಬರು ಕನ್ನಡ ತಿಳಿದಿರಬೇಕು, ಮಹಾರಾಷ್ಟ್ರದಲ್ಲಿ ವಾಸಿಸುವ ಪ್ರತಿಯೊಬ್ಬರೂ ಮರಾಠಿ ಭಾಷೆಯನ್ನು ತಿಳಿದಿರಬೇಕು ಭಾರತದ ಪ್ರತಿಯೊಂದು ಭಾಷೆಯಲ್ಲಿಯೂ ವಿಶ್ವದ ಅತ್ಯುತ್ತಮ ಸಾಹಿತ್ಯ ನಿರ್ಮಾಣವಾಗಿದೆ ಮಕ್ಕಳಿಗೆ ವಿದೇಶಿ ಭಾಷೆಗಳನ್ನು ಕಲಿಸಿ, ಆದರೆ ಮಾತೃ ಭಾಷೆಯನ್ನು ಮಾತನಾಡುವುದರಲ್ಲಿ ಯಾವುದೇ ಹೀನಭಾವ ಇರಬಾರದು ಭಾಷೆ ಮತ್ತು ಸಂಸ್ಕೃತಿ ಬಗ್ಗೆ ಕೇವಲ ಹೆಮ್ಮೆಪಡುವುದರಿಂದ ಸಾಲದು ಅದನ್ನು ಪ್ರತಿದಿನದ ಆಚರಣೆಯಲ್ಲಿ ತೋರಿಸಬೇಕು ಈ ನಿಟ್ಟಿನಲ್ಲಿ ಅನಂತ ಬಿರಾದರ ಅವರು ತಮ್ಮ ಮದುವೆಯ 25 ನೇ ವಾರ್ಷಿಕ ಮಹೋತ್ಸವದ ನಿಮಿತ್ತ ತಮ್ಮ ಕುಟುಂಬ ಹಾಗೂ ಬಂಧು ಬಳಗದವರನ್ನೆಲ್ಲ ಒಂದೆಡೆ ಸೇರಿಸಿ ಕುಟುಂಬ ಪ್ರಬೋದನ ಕಾರ್ಯಕ್ರಮ ಹಮ್ಮಿಕೊಂಡಿದ್ದು ನಿಜಕ್ಕು ಶ್ಲಾಘನೀಯವಾಗಿದೆ ಎಂದರು.

## ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ ವೇಳಾಪಟ್ಟಿ ಪ್ರಕಟ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಮೇ 19 : ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ ವೇಳಾಪಟ್ಟಿ ಪ್ರಕಟಿಸಲಾಗಿದೆ ಎಂದು ಯಾದಗಿರಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಾದ ಶ್ರೀ ಹರ್ಷಲ್ ಭೋಯರ್ ಅವರು ತಿಳಿಸಿದ್ದಾರೆ. ಭಾರತ ಚುನಾವಣಾ ಆಯೋಗವು ರಾಜ್ಯದಲ್ಲಿ ನಡೆಯಲಿರುವ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ ವೇಳಾಪಟ್ಟಿ ಪ್ರಕಟಿಸಲಾಗಿರುತ್ತದೆ. 2026ರ ಜೂನ್ 20 ರಿಂದ 2026ರ ಅಕ್ಟೋಬರ್ 7ರ ವರೆಗೆ ಪ್ರಕ್ರಿಯೆ ನಡೆಯಲಿದ್ದು, ವೇಳಾಪಟ್ಟಿಯು ಈ ಕೆಳಗಿನಂತೆ ಇರುತ್ತದೆ. ಹಂತಗಳು ನಮೂನೆ ಮುದ್ರಣ ಹಾಗೂ ತರಬೇತಿ ಅವಧಿ 2026ರ ಜೂನ್ 20 ರಿಂದ 29ರ ವರೆಗೆ ಇರುತ್ತದೆ. ಮನೆ ಮನೆ ಸಮೀಕ್ಷೆ 2026ರ ಜೂನ್ 30 ರಿಂದ 2026ರ ಜುಲೈ 29ರ ವರೆಗೆ ಇರುತ್ತದೆ. Rationalization of polling station 2026ರ ಜುಲೈ 29 ರಂದು ನಡೆಯಲಿದೆ.

ಕರಡು ಮತದಾರರ ಪಟ್ಟಿ ಪ್ರಕಟಣೆ 2026ರ ಆಗಸ್ಟ್ 5 ರಂದು ಪ್ರಕಟಿಸುವುದು. ಹಕ್ಕು ಮತ್ತು ಆಕ್ಷೇಪಣೆ ಅವಧಿ 2026ರ ಆಗಸ್ಟ್ 5 ರಿಂದ 2026ರ ಸೆಪ್ಟೆಂಬರ್ 4ರ ವರೆಗೆ ಈ ಅವಧಿಯಲ್ಲಿ ಅವಕಾಶ ಕಲ್ಪಿಸಿದೆ. ಹಕ್ಕು ಮತ್ತು ಆಕ್ಷೇಪಣೆ ವಿಲೇವರಿ 2026ರ ಆಗಸ್ಟ್ 5 ರಿಂದ 2026ರ ಅಕ್ಟೋಬರ್ 3ರ ವರೆಗೆ ವಿಲೇವರಿ ನಡೆಯಲಿದೆ. ಅಂತಿಮ ಮತದಾರರ ಪಟ್ಟಿಯನ್ನು 2026ರ ಅಕ್ಟೋಬರ್ 7 ರಂದು ಪ್ರಕಟಿಸುವುದು. ಎಸ್‌ಐಆರ್ ಅರ್ಹತಾ 2026ರ ಅಕ್ಟೋಬರ್ 1 ರಂದು ಇರುತ್ತದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರುದ್ರಮುನಿ ಶ್ರೀಗಳ ಪುಣ್ಯಾರಾಧನೆ: ಅರ್ಥಪೂರ್ಣ ಆಚರಣೆಗೆ ನಿರ್ಧಾರ



**ಬಾಗಲಕೋಟೆ:** ತಾಲ್ಲೂಕಿನ ಬಿಲ್ ಕೆರೂರ ಬಿಲ್ವಾಶ್ರಮ ಹಿರೇಮಠದ ಲಿಂ.ರುದ್ರಮುನಿ ಶಿವಾಚಾರ್ಯರ 45 ನೆಯ ಪುಣ್ಯಾರಾಧನೆ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ.

ಶ್ರೀಮಠದಲ್ಲಿ ನಡೆದ ಜಾತ್ರಾ ಮಹೋತ್ಸವದ ಪೂರ್ವಭಾವಿ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದ್ದು, ಬರುವ ಜೂನ್ 28 ರಂದು ಶ್ರೀಗಳ ಪುಣ್ಯಾರಾಧನೆ ಜರುಗಲಿದ್ದು, ಈ ವರ್ಷವೂ ಸರ್ವಧರ್ಮ ಸಾಮೂಹಿಕ ವಿವಾಹ ಕಾರ್ಯಕ್ರಮ ಆಯೋಜಿಸಲು ತೀರ್ಮಾನಿಸಲಾಯಿತು ಎಂದು ಶ್ರೀಮಠದ ಸಿದ್ಧಲಿಂಗ ಸ್ವಾಮೀಜಿ ತಿಳಿಸಿದ್ದಾರೆ. ಸಭೆಯಲ್ಲಿ ಬಿಲ್ ಕೆರೂರ ಗ್ರಾಮದ ಹಿರಿಯರು, ವಿವಿಧ ಗ್ರಾಮಗಳ ಶ್ರೀಮಠದ ನೂರಾರು ಜನ ಭಕ್ತರು ಪಾಲ್ಗೊಂಡಿದ್ದರು.

ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮದುವೆ ಆಗಬಯಸುವ ವಧು - ವರರು ತಮ್ಮ ಜನ್ಮ ದಾಖಲೆಗಳೊಂದಿಗೆ ಭಾವಚಿತ್ರ ಸಹಿತ ಜೂನ್ 20 ರೊಳಗೆ ಹೆಸರು ದಾಖಲಿಸುವಂತೆ ಶ್ರೀಗಳು ತಿಳಿಸಿದ್ದಾರೆ.

# ಬಾರಿ ಮಳೆಗೆ ತತ್ತರಿಸಿದ ಬಳ್ಳಾರಿ: ಜನಜೀವನ ಅಸ್ತವ್ಯಸ್ತ



**ಬಳ್ಳಾರಿ:** ಈ ವರ್ಷದ ಮೊದಲ ಭಾರೀ ಮಳೆಯೇ ಗಣಿನಾಡು ಬಳ್ಳಾರಿಯನ್ನು ಸಂಪೂರ್ಣ ಅಸ್ತವ್ಯಸ್ತಗೊಳಿಸಿದೆ. ಸೋಮವಾರ ಸಂಜೆ ಆರಂಭವಾದ ಧಾರಾಕಾರ ಮಳೆ ಹಲವು ಗಂಟೆಗಳ ಕಾಲ ನಿರಂತರವಾಗಿ ಸುರಿದ ಪರಿಣಾಮ ನಗರ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳು ಜಲಾವೃತಗೊಂಡವು. ರಸ್ತೆಗಳು ಕೆರೆಗಳಂತಾಗಿದ್ದು, ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿತು.

ನಗರದ ಪ್ರಮುಖ ವಾಣಿಜ್ಯ ಪ್ರದೇಶಗಳಾದ ಗಾಂಧಿನಗರ, ಕೌಲ್‌ಬಜಾರ್, ಬೆಂಗಳೂರು ರಸ್ತೆ, ಮೋತಿ ಸರ್ಕಲ್, ಸುಧಾ ಕ್ರಾಸ್, ಡಬ್ಲ್ಯುಡಿಸಿ ಪ್ರದೇಶ, ಹವಂಬಾವಿ, ಬಸವೇಶ್ವರ ನಗರ ಸೇರಿದಂತೆ ಹಲವೆಡೆ ಮಳೆ ನೀರು ರಸ್ತೆ ಮೇಲೆ ಹರಿದು ವಾಹನ ಸಂಚಾರಕ್ಕೆ ತೀವ್ರ ಅಡಚಣೆ ಉಂಟಾಯಿತು. ಕೆಲವೆಡೆ ಅಂಗಡಿಗಳಿಗೆ ನೀರು ನುಗ್ಗಿದ ಪರಿಣಾಮ ವ್ಯಾಪಾರಸ್ಥರು ಆತಂಕಕ್ಕೀಡಾದರು. ಮಳೆಯ ತೀವ್ರತೆಗೆ ವ್ಯಾಪಾರ ವಹಿವಾಟು ಸಂಪೂರ್ಣ ಕುಂಠಿತಗೊಂಡಿದ್ದು, ಸಂಜೆ ವೇಳೆಗೆ ಅನೇಕ ಅಂಗಡಿ ಮುಂಗಟ್ಟುಗಳು ಮುಚ್ಚಲ್ಪಟ್ಟವು.

ಭಾರೀ ಮಳೆಯೊಂದಿಗೆ ಗುಡುಗು ಹಾಗೂ ಸಿಡಿಲಿನ ಆರ್ಭಟವೂ ಹೆಚ್ಚಾಗಿದ್ದರಿಂದ ಜನರು ಭಯಭೀತರಾದರು. ಮಳೆ ಆರಂಭವಾದ ಕೆಲವೇ ಕ್ಷಣಗಳಲ್ಲಿ ಆಕಾಶದಲ್ಲಿ ನಿರಂತರ ಮಿಂಚು ಕಾಣಿಸಿಕೊಂಡು, ಭಾರೀ ಸದ್ದುಗಳೊಂದಿಗೆ ಸಿಡಿಲು ಬಡಿದ ಪರಿಣಾಮ ಮಕ್ಕಳು, ವೃದ್ಧರು ಹಾಗೂ ಮಹಿಳೆಯರಲ್ಲಿ ಆತಂಕದ ವಾತಾವರಣ ನಿರ್ಮಾಣವಾಯಿತು. ಹಲವರು ಸುರಕ್ಷತೆಗಾಗಿ ಮನೆಗಳಲ್ಲೇ ಉಳಿದುಕೊಂಡರು.

ನಗರದ ತಗ್ಗು ಪ್ರದೇಶಗಳಾದ ರಾಯಲ್ ಸರ್ಕಲ್ ಸುತ್ತಮುತ್ತ, ಕಪಗಲ್ಲು ರಸ್ತೆ, ಕಣೇಕಲ್ ರಸ್ತೆ ಭಾಗಗಳಲ್ಲಿ ಮನೆಗಳಿಗೆ ನೀರು ನುಗ್ಗಿದ ಘಟನೆಗಳು ವರದಿಯಾಗಿವೆ. ಒಳಚರಂಡಿ ವ್ಯವಸ್ಥೆ ಸಮರ್ಪಕವಾಗಿಲ್ಲದ ಕಾರಣ ಮಳೆ ನೀರು ರಸ್ತೆ ಮೇಲೆಯೇ ನಿಂತು ಕೆಸರುಮಯ ವಾತಾವರಣ ನಿರ್ಮಾಣವಾಯಿತು. ಮಳೆ ನೀರು ಮತ್ತು ಚರಂಡಿ ನೀರು ಒಂದೇ ಸೇರಿ ಹರಿದ ಪರಿಣಾಮ ಜನರು ದುರ್ವಾಸನೆ ಹಾಗೂ ಅಸ್ವಚ್ಛತೆಯಿಂದ ಸಂಕಷ್ಟ ಅನುಭವಿಸಿದರು.

ಮಳೆಯಿಂದ ವಾಹನ ಸವಾರರು ಪರದಾಡುವಂತಾಯಿತು. ರಸ್ತೆಗಳಲ್ಲಿನ ಗುಂಡಿಗಳು ನೀರಿನಿಂದ ಮುಚ್ಚಿಕೊಂಡಿದ್ದರಿಂದ ಬೈಕ್ ಸವಾರರು ಹಲವು ಕಡೆ ಜಾರಿ ಬಿದ್ದ ಘಟನೆಗಳು ಸಂಭವಿಸಿವೆ. ಸಂಚಾರ ದಟ್ಟಣೆ ಹೆಚ್ಚಾಗಿ, ನಗರದ ಪ್ರಮುಖ ವೃತ್ತಗಳಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲಸ ಮುಗಿಸಿ ಮನೆಗೆ ತೆರಳುತ್ತಿದ್ದ ಉದ್ಯೋಗಿಗಳು ಗಂಟೆಗಟ್ಟಲೆ ಟ್ರಾಫಿಕ್‌ನಲ್ಲಿ ಸಿಲುಕಿಕೊಂಡರು.

ನಗರದ ಕೆಲ ಭಾಗಗಳಲ್ಲಿ ವಿದ್ಯುತ್ ವ್ಯತ್ಯಯವೂ ಉಂಟಾಯಿತು. ಗುಡುಗು-ಸಿಡಿಲಿನ ಭೀತಿಯಿಂದ ಮುನ್ನೆಚ್ಚರಿಕಾ ಕ್ರಮವಾಗಿ ಕೆಲ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ಇದರಿಂದ ಜನರು ಕತ್ತಲಲ್ಲೇ ಕಾಲ ಕಳೆಯುವಂತಾಯಿತು.

ಕೃಷಿಕರಲ್ಲಿ ಮಾತ್ರ ಈ ಮಳೆ ಸಂತಸ ಮೂಡಿಸಿದೆ. ಹಲವು ದಿನಗಳಿಂದ ಬಿಸಿಲಿನ ತಾಪಕ್ಕೆ ಕಂಗೆಟ್ಟಿದ್ದ ಜನತೆಗೆ ಮಳೆ ತಂಪು ನೀಡಿದರೂ, ಏಕಾಏಕಿ ಸುರಿದ ಧಾರಾಕಾರ ಮಳೆಯಿಂದ ನಗರ ಪ್ರದೇಶಗಳಲ್ಲಿ ಅವಾಂತರಗಳು ಸೃಷ್ಟಿಯಾದವು. ಮುಂಗಾರು ಪೂರ್ವ ಸಿದ್ಧತೆಗಳ ಕೊರತೆ ಮತ್ತೊಮ್ಮೆ ಬಹಿರಂಗಗೊಂಡಿದ್ದು, ಮಳೆ ನೀರು ಸರಾಗವಾಗಿ ಹರಿದು ಹೋಗುವ ವ್ಯವಸ್ಥೆ ಇಲ್ಲದಿರುವುದು ಜನರ ಆಕ್ರೋಶಕ್ಕೆ ಕಾರಣವಾಗಿದೆ.

“ಪ್ರತಿ ವರ್ಷ ಮಳೆಯಾದಾಗ ಇದೇ ಸಮಸ್ಯೆ ಎದುರಾಗುತ್ತದೆ. ರಸ್ತೆ, ಚರಂಡಿ ಅಭಿವೃದ್ಧಿಗೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದರೂ ಪರಿಸ್ಥಿತಿ ಬದಲಾಗಿಲ್ಲ,” ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸಿದರು.

ಹವಾಮಾನ ಇಲಾಖೆ ಮುಂದಿನ ಕೆಲ ದಿನಗಳ ಕಾಲ ಜಿಲ್ಲೆಯಲ್ಲಿ ಇನ್ನಷ್ಟು ಮಳೆಯಾಗುವ ಸಾಧ್ಯತೆ ಇದೆ ಎಂದು ಮುನ್ಸೂಚನೆ ನೀಡಿದ್ದು, ಸಾರ್ವಜನಿಕರು ಅಗತ್ಯ ಮುನ್ನೆಚ್ಚರಿಕೆ ವಹಿಸುವಂತೆ ಸೂಚಿಸಿದೆ.

# ಇಬ್ಬರ ನಡುವಿನ ಮುಗ್ದ ಜನತೆ ಅಸಮಾಧಾನ

• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ



ಕೊಪ್ಪಳ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಶಾಸಕರಾದ ಗಾಲಿ ಜನಾರ್ಧನ ರೆಡ್ಡಿ ಅವರು ಪತ್ರಿಕಾಗೋಷ್ಠಿ ನಡೆಸಿ ರಾಜ್ಯದ ಭ್ರಷ್ಟ ಕಾಂಗ್ರೆಸ್ ಸರ್ಕಾರದ ಮೂರು ವರ್ಷದ ವೈಫಲ್ಯಗಳು, ಜನವಿರೋಧಿ ಆಡಳಿತ ಮತ್ತು ನಿರಂತರ ಹಗರಣಗಳ ಕುರಿತು ವಿವರವಾಗಿ ಮಾತನಾಡಿದರು.

ಜನಸಾಮಾನ್ಯರ ಕೋಟಿ ಕೋಟಿ ತೆರಿಗೆ ಹಣವನ್ನು ದುಂದುವೆಚ್ಚ ಮಾಡಿ ನಡೆಸುತ್ತಿರುವ “ಸಾಧನಾ ಸಮಾವೇಶ” ನಿಜಕ್ಕೂ ಯಾರ ಸಾಧನೆಗಾಗಿ ಎಂಬ ಪ್ರಶ್ನೆ ಇಂದು ರಾಜ್ಯದ ಪ್ರತಿಯೊಬ್ಬ ನಾಗರಿಕನಲ್ಲೂ ಮೂಡಿದೆ. ಗ್ಯಾರಂಟಿಗಳ ಹೆಸರಲ್ಲಿ ಕರ್ನಾಟಕವನ್ನು ಸಾಲದ ಸುಳಿಗೆ ತಳ್ಳಿರುವ ಕಾಂಗ್ರೆಸ್ ಸರ್ಕಾರ, ಕೇವಲ 2025-26ರ ಹಣಕಾಸು ವರ್ಷದಲ್ಲೇ ₹1,16,000 ಕೋಟಿ ಸಾಲ ಮಾಡಿ ರಾಜ್ಯದ ಭವಿಷ್ಯವನ್ನು ಗಂಭೀರ ಸಂಕಷ್ಟಕ್ಕೆ ದೂಡಿದೆ.

ವರ್ಷಕ್ಕೆ ಸುಮಾರು ₹45,000 ಕೋಟಿ ಬಡ್ಡಿ ಕಟ್ಟುವ ದುಸ್ಥಿತಿ ತಂದಿಟ್ಟು, ಪೆಟ್ರೋಲ್, ಡೀಸೆಲ್, ಹಾಲು, ಮದ್ಯ ಹಾಗೂ ಆಸ್ತಿ ನೋಂದಣಿ ಶುಲ್ಕಗಳನ್ನು ಹೆಚ್ಚಿಸುವ ಮೂಲಕ ಬಡ ಹಾಗೂ ಮಧ್ಯಮ ವರ್ಗದ ಜನರ ಜೇಬಿಗೆ ಕತ್ತರಿ ಹಾಕಿರುವುದನ್ನೇ ಸರ್ಕಾರ ತನ್ನ ಸಾಧನೆ ಎಂದು ಬಿಂಬಿಸಿಕೊಳ್ಳುತ್ತಿದೆ.

ಒಂದೆಡೆ ವಾಲ್ಮೀಕಿ ನಿಗಮದ ಕೋಟ್ಯಂತರ ರೂಪಾಯಿ ಹಗರಣ ಹಾಗೂ ದಲಿತರ ಖಅಕ-ಖಖಕ ಅನುದಾನದ ದುರುಪಯೋಗ ನಡೆದಿದ್ದರೆ, ಮತ್ತೊಂದೆಡೆ ಮುಖ್ಯಮಂತ್ರಿಗಳ ಕುಟುಂಬವೇ ಸಿಲುಕಿರುವ ಒಗಅಂ ಹಗರಣ ಮತ್ತು ಅಬಕಾರಿ ಇಲಾಖೆಯ ₹700 ಕೋಟಿ ಲಂಚದ ಆರೋಪಗಳು ಸರ್ಕಾರದ ಅಸಲಿ ಮುಖವನ್ನು ಜನರ ಮುಂದಿಟ್ಟಿವೆ.

ಉದ್ಯೋಗ ಕೇಳಿ ಶಾಂತಿಯುತವಾಗಿ ಪ್ರತಿಭಟನೆ ನಡೆಸಿದ ನಿರುದ್ಯೋಗಿ ಯುವಕರ ಮೇಲೆ ಪೊಲೀಸ್ ದೌರ್ಜನ್ಯ ನಡೆಸಿ ಜೈಲಿಗೆ ಕಳುಹಿಸುವ ಕೆಲಸ ನಡೆಯುತ್ತಿದೆ. ಶಾಸಕರ ಅಭಿವೃದ್ಧಿ ನಿಧಿ ಕಡಿತಗೊಳಿಸಿ, ರಸ್ತೆ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಸಮರ್ಪಕ ಅನುದಾನವಿಲ್ಲದ ಸ್ಥಿತಿ ನಿರ್ಮಾಣವಾಗಿದ್ದು, ಇಡೀ ರಾಜ್ಯದ ಅಭಿವೃದ್ಧಿ ಕುಂಠಿತಗೊಂಡಿದೆ. ರಾಜ್ಯದ ತಿಜೋರಿಯನ್ನು ಖಾಲಿ ಮಾಡಿ, ವರ್ಗಾವಣೆ ದಂಧೆ ಹಾಗೂ ಕುರ್ಚಿ ಕಿತ್ತಾಟದಲ್ಲೇ ಮುಳುಗಿರುವ ಕಾಂಗ್ರೆಸ್ ಸರ್ಕಾರ ಕರ್ನಾಟಕವನ್ನು ಹೈಕಮಾಂಡ್‌ನ ಂಖಿಒ ಆಗಿ ಪರಿವರ್ತಿಸಿದೆ.

ಬರೀ ಲೂಟಿ, ಹಗರಣ ಮತ್ತು ವೈಫಲ್ಯಗಳನ್ನು ಮುಚ್ಚಿಹಾಕಲು ಜನರ ಹಣದಲ್ಲೇ ತಮಗೇ ತಾವೇ ಬೆನ್ನು ತಟ್ಟಿಕೊಳ್ಳುತ್ತಿರುವ ಈ “ಸಾಧನಾ ಸಮಾವೇಶ” ರಾಜ್ಯದ ಜನತೆಗೆ, ಯುವಶಕ್ತಿಗೆ ಮತ್ತು ಕರ್ನಾಟಕದ ಭವಿಷ್ಯಕ್ಕೆ ಮಾಡುತ್ತಿರುವ ಘೋರ ದ್ರೋಹವಾಗಿದೆ.

ಇಂತಹ ನಿರಂತರ ವೈಫಲ್ಯಗಳು, ಹಗರಣಗಳು, ಜನವಿರೋಧಿ ಆಡಳಿತ ಮತ್ತು ರಾಜ್ಯವನ್ನು ಸಾಲದ ಸುಳಿಗೆ ತಳ್ಳಿದ ಸಾಧನೆಗಳಿಗೆ ಈ ಕಾಂಗ್ರೆಸ್ ಸರ್ಕಾರಕ್ಕೆ “ವೈಫಲ್ಯದ ಗಿನ್ನೆಸ್ ದಾಖಲೆ” ನೀಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಸಂದರ್ಭದಲ್ಲಿ ರಾಜ್ಯ ಬಿಜೆಪಿ ಕಾರ್ಯಕಾರಿಣಿ ಸದಸ್ಯರಾದ ಬಸವರಾಜ್ ಕ್ಯಾವಟರ್, ಜಿಲ್ಲಾಧ್ಯಕ್ಷರಾದ ನವೀನ್ ಗುಳ್ಳಗಣ್ಣನವರ್, ಗಂಗಾವತಿ ಗ್ರಾಮೀಣ ಮಂಡಲ ಅಧ್ಯಕ್ಷರಾದ ಡಿ.ಕೆ ಆಗೋಲಿ, ಕೊಪ್ಪಳ ನಗರ ಮಂಡಲದ ಅಧ್ಯಕ್ಷರಾದ ಅಂಬರೀಷ್ ಮುರಳಿ, ಮುಖಂಡರಾದ ಯಮನೂರು ಚೌಡ್ಕಿ, ವೆಂಕಟೇಶ್ ಜಬ್ಬಲಗುಡ್ಡ ಉಪಸ್ಥಿತರಿದ್ದರು.

# ಸಾರ್ವಜನಿಕರಿಂದ ಪೌರಯುಕ್ತರಿಗೆ ಮನವಿ



• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ದಿನಾಂಕ 19.05.2026 ರ ಮಂಗಳವಾರ ಗಂಗಾವತಿ ನಗರದ 21ನೇ ವಾರ್ಡ್ ಮುರಾಹರಿ ನಗರದ ಸಾರ್ವಜನಿಕರು ಮಾನ್ಯ ಪೌರಯುಕ್ತರು ನಗರಸಭೆ ಗಂಗಾವತಿ ಇವರಿಗೆ ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮನವಿ ಪತ್ರ ಸಲ್ಲಿಸಲಾಯಿತು.

ನಮ್ಮ 21ನೇ ವಾರ್ಡಿನ ಮುರಹರಿ ನಗರದ 3ನೇ ಓಣಿ (ತಾಯಮ್ಮ ಗುಡಿ) 4ನೇ ಓಣಿ ಮತ್ತು 5ನೇ ಓಣಿಯಲ್ಲಿ ಶುದ್ಧ ಕುಡಿಯುವ ನೀರು 24*7 ನಳಕ್ಕೆ ಇನ್ನೂವರೆಗೂ ಸಂಪರ್ಕ ನೀಡಿಲ್ಲ. ನಮ್ಮ ವಾರ್ಡಿನ 1 & 2ನೇ ಓಣಿ ಗೆ ಮತ್ತು ಪಕ್ಕದ 20, 23ನೇ ವಾರ್ಡ್ ಗೆ ಸಂಪರ್ಕ ಕಲ್ಪಿಸಿದ್ದು ನಮ್ಮ 3,4, ಮತ್ತು 5ನೇ ಓಣಿಗೆ ಶುದ್ಧ ಕುಡಿಯುವ ನೀರಿನ ಸಂಪರ್ಕ ನೀಡಿಲ್ಲ ಈ ಕುರಿತು ನಗರ ಸಭೆಯ ಅಧಿಕಾರಿಗಳಿಗೆ ಹಲವಾರು ಬಾರಿ ಮನವಿ ಸಲ್ಲಿಸಿದ್ದಾರೂ ಈ ಸಮಸ್ಯೆ ಪರಿಹರಿಸುವಲ್ಲಿ ಗಮನ ಕೊಟ್ಟಿಲ್ಲ. ಹಾಗಾಗಿ ಇಂದು ನಮ್ಮ ವಾರ್ಡಿನ ನಾಗರೀಕರಾದ ಶ್ರೀಮತಿ ಯಲ್ಲಮ್ಮ, ಲಕ್ಷ್ಮಿ, ಕಾಳಮ್ಮ, ಮೂರ್ತಿಮ್ಮ, ಹೊನ್ನೂರಮ್ಮ, ಅಜ್ಮೀರ್, ಇಬ್ರಾಹಿಂ, ಶಕ್ಷಾವಲಿ, ಅಶ್ಫಾಕ್, ಕಲೀಂ, ಸಯ್ಯದ್ ಅಮನುಲ್ಲ ಮತ್ತು ಇತರರು ಸೇರಿ ನಗರಸಭೆಯ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದ್ದು ಈ ಕುರಿತು ಆದಷ್ಟು ಬೇಗ ಈ ತೊಂದರೆ ಬಗೆಹರಿಸಿ ಶುದ್ಧ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಿ ಕೊಡಬೇಕು. ಒಂದು ವೇಳೆ ನಮ್ಮ ಮನವಿಗೆ ಸ್ಪಂದಿಸದಿದ್ದಲ್ಲಿ ಸಾರ್ವಜನಿಕ ರಿಂದ ನಗರಸಭೆಯ ಮುಂದೆ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಮಾಧ್ಯಮದ ಮೂಲಕ ತಿಳಿಯಪಡಿಸುತ್ತಿದ್ದೇವೆ.

# ಗೃಹಲಕ್ಷ್ಮೀ ಹಣ ಉಳಿಸಿ ಫ್ರಿಜ್ ಖರೀದಿ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ



ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲೊಂದಾದ ಗೃಹಲಕ್ಷ್ಮೀ ಯೋಜನೆಯಡಿ ಪ್ರತಿ ತಿಂಗಳು ತನಗೆ ಬರುತ್ತಿರುವ 2 ಸಾವಿರ ರೂಪಾಯಿಗಳಲ್ಲಿ ಒಂದಿಷ್ಟು ದುಡ್ಡು ಉಳಿಕೆ ಮಾಡಿರುವ ಮಹಿಳೆಯೊಬ್ಬಳು ಅದರಲ್ಲಿ ಪ್ರಿಡ್ಜ ಖರೀದಿಸಿದ್ದಾಳೆ.

ಬಾಗಲಕೋಟೆ ತಾಲೂಕಿನ ದೇವಲಾಪುರ ಗ್ರಾಮದ ಸುವರ್ಣ ಹಿರೇಮಠ ತಮಗೆ ಬರುವ 2 ಸಾವಿರ ರೂಪಾಯಿಗಳಲ್ಲಿ ಉಳಿಕೆ ಮಾಡಿ ಪ್ರಿಡ್ಜ ಖರೀದಿ ಮಾಡಿ ಅದರ ಮೇಲೆ ಗೃಹಲಕ್ಷ್ಮೀ ಎಂದು ಬರೆಯಿಸಿದ್ದಾರೆ.

ಬಡ ಕುಟುಂಬಗಳಿಗೆ ಗೃಹಲಕ್ಷ್ಮೀ ಯೋಜನೆ ಆಧಾರವಾಗಿದ್ದು, ತಿಂಗಳು ಬರುವ ಹಣದಲ್ಲಿ ಮನೆ ಖರ್ಚು ನಿಭಾಯಿಸಿ ಸ್ವಲ್ಪ ಉಳಿಕೆ ಮಾಡಿಕೊಂಡು ಪ್ರೀಜ ತಗೊಂಡಿದ್ದೇನೆ. ನಮ್ಮಂತವರಿಗೆ ಯೋಜನೆ ಬಹಳಷ್ಟು ಅನುಕೂಲವಾಗಿದೆ. ಅದಕ್ಕಾಗಿ ಸರ್ಕಾರ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರಿಗೆ ನಮಸ್ಕಾರ ಹೇಳ್ತೀವಿರಿ, ಅವ್ರನ್ನ ನೆನಸ್ತೀವಿ ಎಂದು ಸುವರ್ಣ ಹಿರೇಮಠ ಹೇಳಿದರು.

ಸುವರ್ಣಾ ಖರೀಸಿದ ಪ್ರಿಜ್ ‌ನ್ನು ಶಾಸಕ ಉಮೇಶ ಮೇಟಿ ಸೋಮವಾರ ದೇವಲಾಪುರ ಗ್ರಾಮಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಚಾಲನೆಗೊಳಿಸಿದರು. ಈ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷ ಎಸ್. ಎನ್. ರಾಂಪುರ, ಸದಸ್ಯ ಜಟ್ಟೆಪ್ಪ ಮಾದಾಪುರ, ಜಿಪಂ ಮಾಜಿ ಅಧ್ಯಕ್ಷ ಬಸವಂತಪ್ಪ ಮೇಟಿ, ಬಲರಾಮ ಪವಾರ, ಮುದಕಪ್ಪ ಕೊಣ್ಣೂರ, ಶಶಿಕಾಂತ ಪೂಜಾರ, ಮಲ್ಲು ದ್ಯಾವನ್ನವರ ಹಾಗೂ ಶ್ರೀಕರ ದೇಸಾಯಿ ಇದ್ದರು.

# ಕರಾವಳಿ ಪ್ರದೇಶದ ಎರಡು ದಿನಗಳ ಅಧ್ಯಯನ ಪ್ರವಾಸ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಸ್ವಾತಂತ್ರ್ಯ ಪೂರ್ವದಲ್ಲಿ ಕರ್ನಾಟಕ ಧುರೀಣ ಎಂಬ ಪತ್ರಿಕೆಯನ್ನು ನಡೆಸುತ್ತಾ ಬ್ರಿಟಿಷರ ವಿರುದ್ಧ ಅಸಹ ಚಳುವಳಿಕಾರ ಪತಾಕಿ ಹಾರಿಸಿದ ಶ್ರೀ ಗಣೇಶ ರಾಮಯಾಜಿ ರವರು(ಮೂಲತ ಉತ್ತರ ಕನ್ನಡದ ಜಿಲ್ಲೆ ಹೊನ್ನಾವರ ತಾಲೂಕಿನ ಇಡುಗುಂಜಿಯಲ್ಲಿ ಜನನ) ಈ ಸಂಘವನ್ನು ಸ್ವಾತಂತ್ರ್ಯ ಪೂರ್ವದಲ್ಲಿ 1937 ರಲ್ಲಿ ಸ್ಥಾಪಿಸಿ, ನಂತರ 1966 ರಲ್ಲಿ ಸಜ್ಜನ ಮುಖ್ಯಮಂತ್ರಿ ಶ್ರೀ ಎಸ್.ನಿಜಲಿಂಗಪ್ಪ ರವರು ಜಿಲ್ಲಾ ಸಂಘವನ್ನು ಉದ್ಘಾಟಿಸಿದರು.

ನಂತರ ರಾಜ್ಯ ಸಂಘವನ್ನಾಗಿ ಅರಣ್ಯ ಸಚಿವ ಈಶ್ವರ ಖಂಡ್ರೆ ಹಾಗೂ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ ಪ್ರಭಾಕರ್ ಬೆಂಗಳೂರಿನಲ್ಲಿ ಮಾತನಾಡಿದರು.

ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘವು ಕಾನೂನಾತ್ಮಕವಾಗಿ ಕರ್ನಾಟಕ ಸರ್ಕಾರದ ನೊಂದಾಯಿತ ಸಂಸ್ಥೆಗಳು, 31 ಜಿಲ್ಲೆಗಳಲ್ಲಿ ರಾಜ್ಯ-ಜಿಲ್ಲಾ-ಹೋಬಳಿ ಮಟ್ಟದ ಎಲ್ಲಾ ಹಿರಿಯ-ಕಿರಿಯ ಪತ್ರಕರ್ತರನ್ನು ಒಳಗೊಂಡು 3630 ಸದಸ್ಯರನ್ನು ಹೊಂದಿ ರಾಜ್ಯಾದ್ಯಂತ ಕಾರ್ಯ ಚಟುವಟಿಕೆಯನ್ನು ನಡೆಸುತ್ತಿರುವ ರಾಜ್ಯ.ರಾಜ್ಯ ಸಂಘ ರಚನೆಯಾಗಿ ಕೇವಲ 11 ತಿಂಗಳಾಗಿದ್ದು ಯಶಸ್ವಿಯಾಗಿ ಉದ್ಘಾಟನೆ ಕಾರ್ಯಕ್ರಮ, ನಂತರ ಎರಡು ಬಾರಿ ಮುಖ್ಯಮಂತ್ರಿಗಳು ಹಾಗೂ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಇತರೆ ಸಚಿವರು ಹಾಗೂ ವಾರ್ತಾ ಇಲಾಖೆ ಅಧಿಕಾರಿಗಳೊಂದಿಗೆ ಸಂಘದ ಪತ್ರಕರ್ತರ ಸಮಸ್ಯೆಗಳು ಹಾಗೂ ಬೇಡಿಕೆ ಕುರಿತು ಪ್ರಸ್ತಾಪ ಮಾಡಿರುವುದು ಸರಿಯಷ್ಟೇ. ರಾಜ್ಯ ಸಂಘದ ಕಾರ್ಯ ಚಟುವಟಿಕೆ ಹಾಗೂ ಸಭೆ ನಂತರ ಎರಡು ದಿನದ ಕರಾವಳಿ ಭಾಗದ ಪ್ರಖ್ಯಾತ ಸ್ಥಳಗಳ ಅಧ್ಯಯನದ ಪ್ರವಾಸವನ್ನು ಕೈಗೊಳ್ಳಲಾಗಿದೆ. ದಿನಾಂಕ ಮೇ 17/18, 2026 ರಂದು ಕಾರ್ಕಳದ ಕ್ರಿಯೇಟಿವ್ ಗ್ಲೋಬಲ್ ಸ್ಕೂಲ್ ಮುತ್ತು ಕ್ರಿಯೇಟಿವ್ ಗ್ಲೋಬಲ್ ಕಾಲೇಜ್ ಒಳ ಆವರಣದಲ್ಲಿ ಕಾರ್ಯಕ್ರಮ ಜರುಗುವುದು ಇಸಬೆಯಲ್ಲಿ ಗಂಗಾವತಿಯಿಂದ ರಾಮಕೃಷ್ಣ.ಸಿಡಿ.

ಅಧ್ಯಕ್ಷರು ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘ (ರಿ) ಗಂಗಾವತಿ ಹಾಗೂ ಪದಾಧಿಕಾರಿಗಳು ಸದಸ್ಯರು ಎರಡು ದಿನದ ಪ್ರವಾಸದಲ್ಲಿ ಪಾಲ್ಗೊಂಡಂತ ಗಂಗಾವತಿಯ ಕರ್ನಾಟಕ ಮಾಧ್ಯಮ ಪತ್ರಕರ್ತರ ಸಂಘದ ಪದಾಧಿಕಾರಿಗಳು, ಹೆಚ್ಚು ಮಲ್ಲಿಕಾರ್ಜುನ್ ಹುನುಕುಂಟಿ ರಾಜ್ಯ ಸಮಿತಿ ಸದಸ್ಯರು. ರಮೇಶ್ ಕೋಟಿ ಜಿಲ್ಲಾ ಅಧ್ಯಕ್ಷರು. ಸಿಬಿಎಸ್ ಶ್ರೀನಿವಾಸ್ ಉಪಾಧ್ಯಕ್ಷರು.ಶರಣಯ್ಯಸ್ವಾಮಿ ಕನಕಗಿರಿ. ದೇವದಾನಂ ಸಂಘದ ಖಜಾಂಚಿ . ಮಂಜು ಆರ್ತಿ ಹಾಗೂ ವಿವಿಧ ಜಿಲ್ಲೆಗಳು ಹಾಗೂ ತಾಲೂಕಿನ ಪದಾಧಿಕಾರಿಗಳು ಹಾಗೂ ಸದಸ್ಯರು ಪಾಲ್ಗೊಂಡಿದ್ದರು.

# ರಾಜ್ಯ ಸರ್ಕಾರದ ವಿರುದ್ಧ ಶ್ರೀರಾಮುಲು ವಾಗ್ದಾಳಿ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ರಾಜ್ಯ ಸರ್ಕಾರದ ಮೂರು ವರ್ಷದ ಆಡಳಿತವನ್ನು ತೀವ್ರವಾಗಿ ಟೀಕಿಸಿದ ಬಿಜೆಪಿ ನಾಯಕ ಬಿ. ಶ್ರೀರಾಮುಲು, “ಮೂರು ವರ್ಷದಲ್ಲಿ ನೂರು ಸುಳ್ಳು ಹೇಳಿರುವುದೇ ಸರ್ಕಾರದ ಸಾಧನೆ. ಅದನ್ನೇ ಈಗ ಸಮಾವೇಶದ ಮೂಲಕ ಜನರಿಗೆ ತೋರಿಸಲು ಹೊರಟಿದ್ದಾರೆ” ಎಂದು ಆರೋಪಿಸಿದರು.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. “ಸಿದ್ದರಾಮಯ್ಯ ಸುಳ್ಳಿನ ಮಾಲೀಕರಾದರೆ, ಡಿ.ಕೆ. ಶಿವಕುಮಾರ್ ಆ ಸುಳ್ಳಿನ ಸಾಕ್ಷಿದಾರರು. ಸುಳ್ಳಿನ ಅಡಿಪಾಯದ ಮೇಲೆಯೇ ಈ ಸರ್ಕಾರ ನಡೆಯುತ್ತಿದೆ” ಎಂದು ದೂರಿದರು.

ರಾಜ್ಯದ ರೈತರ ಪರಿಸ್ಥಿತಿ ಹದಗೆಟ್ಟಿದ್ದು, ರೈತರಿಗೆ ಸಮರ್ಪಕ ನೆರವು ಸಿಗುತ್ತಿಲ್ಲ ಎಂದು ಆರೋಪಿಸಿದ ಅವರು, ಹಾಲು ಉತ್ಪಾದಕರಿಗೆ ನೀಡಬೇಕಾದ ಪ್ರೋತ್ಸಾಹಧನ ಬಾಕಿಯಾಗಿದೆ ಎಂದು ಹೇಳಿದರು. “ಬೀಜ ಮತ್ತು ಕೃಷಿ ವೆಚ್ಚಗಳು ಏರಿಕೆಯಾಗಿವೆ. ರೈತರು ಸಂಕಷ್ಟಕ್ಕೆ ಸಿಲುಕಿದ್ದು ಆತ್ಮಹತ್ಯೆಗಳ ಪ್ರಮಾಣ ಹೆಚ್ಚುತ್ತಿದೆ. ರೈತರ ಬದುಕು ಉಳಿಸುವ ಬದಲು ಸರ್ಕಾರ ರೈತರ ಆತ್ಮಹತ್ಯೆ ಭಾಗ್ಯ ನೀಡುವ ಕೆಲಸ ಮಾಡುತ್ತಿದೆ” ಎಂದು ಕಿಡಿಕಾರಿದರು.

ರೈತರ ಸಾವಿನ ಅಂಕಿ-ಅಂಶಗಳನ್ನು ಉಲ್ಲೇಖಿಸಿದ ಶ್ರೀರಾಮುಲು, “ಇದು ಮಾನಗೆಟ್ಟ ಸರ್ಕಾರ. ರೈತರ ನೋವಿಗೆ ಸ್ಪಂದಿಸುವ ಬದಲು ಸರ್ಕಾರ ರಾಜಕೀಯ ಸಮಾವೇಶಗಳಲ್ಲಿ ತೊಡಗಿದೆ” ಎಂದು ಟೀಕಿಸಿದರು. ಕೇಂದ್ರ ಸರ್ಕಾರದ ರಸಗೊಬ್ಬರಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡಲಾಗುತ್ತಿದೆ ಎಂಬ ಗಂಭೀರ ಆರೋಪವನ್ನೂ ಅವರು ಮಾಡಿದರು.

ಕೇಂದ್ರದ ಕಿಸಾನ್ ಸನ್ಮಾನ್ ಯೋಜನೆ ರಾಜ್ಯದಲ್ಲಿ ಸಮರ್ಪಕವಾಗಿ ಜಾರಿಯಾಗುತ್ತಿಲ್ಲ ಎಂದು ದೂರಿದ ಅವರು, ನೀರು, ವಿದ್ಯುತ್, ಭೂ ನೋಂದಣಿ ಸೇರಿದಂತೆ ಎಲ್ಲ ಸೇವೆಗಳ ದರ ಏರಿಕೆಯಾಗಿದೆ ಎಂದು ಹೇಳಿದರು. “ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ಜನರನ್ನು ಮರಳು ಮಾಡುವ ಕೆಲಸ ನಡೆಯುತ್ತಿದೆ. ಜನರಿಗೆ ಶಾಶ್ವತ ಅಭಿವೃದ್ಧಿ ನೀಡುವ ಬದಲು ಮೋಸದ ರಾಜಕಾರಣ ನಡೆಯುತ್ತಿದೆ” ಎಂದು ಆರೋಪಿಸಿದರು.

ರಾಜ್ಯದ ಸಾರಿಗೆ ಇಲಾಖೆಯ ಸ್ಥಿತಿಗತಿಗಳ ಕುರಿತು ಮಾತನಾಡಿದ ಅವರು, ಕೆಎಸ್‌ಆರ್‌ಟಿಸಿ ನೌಕರರ ಸಮಸ್ಯೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸುತ್ತಿಲ್ಲ ಎಂದರು. “ಸಾರಿಗೆ ನೌಕರರ ಮುಷ್ಕರ ತಡೆಯಲು ಸರ್ಕಾರಕ್ಕೆ ಆಗುತ್ತಿಲ್ಲ. ವೇತನ ಹೆಚ್ಚಳವೂ ಇಲ್ಲ. ಹಳೆಯ ಬಸ್‌ಗಳೇ ರಸ್ತೆಯಲ್ಲಿ ಓಡುತ್ತಿವೆ. ಪಂಚರ್ ಹಾಕಿಸಲು ಹಣವಿಲ್ಲದ ಪರಿಸ್ಥಿತಿ ಬಂದಿದೆ. ಬಾಗಿಲುಗಳು ಕಿತ್ತು ಹೋದರೂ ದುರಸ್ತಿ ಮಾಡಲಾಗುತ್ತಿಲ್ಲ” ಎಂದು ಟೀಕಿಸಿದರು.

ಅಂಗನವಾಡಿ ನೌಕರರು ಹಾಗೂ ಸರ್ಕಾರಿ ನೌಕರರ ಸಂಬಳದ ವಿಷಯದಲ್ಲಿಯೂ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿದ ಅವರು, “ಎಲ್ಲಾ ಇಲಾಖೆಗಳಲ್ಲೂ ಆಡಳಿತ ಸಂಪೂರ್ಣ ಕುಸಿದಿದೆ. ಇಂತಹ ಸಂದರ್ಭದಲ್ಲಿ ಮೂರು ವರ್ಷದ ಸಾಧನಾ ಸಮಾವೇಶ ಯಾವ ಪುರುಷಾರ್ಥಕ್ಕೆ?” ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ ಜಾತಿ ಮತ್ತು ಧರ್ಮದ ಆಧಾರದ ಮೇಲೆ ಸಮಾಜವನ್ನು ವಿಭಜಿಸುವ ಕೆಲಸ ನಡೆ-ಯುತ್ತಿದೆ ಎಂದು ಆರೋಪಿಸಿದ ಶ್ರೀರಾಮುಲು, ಹಿಜಾಬ್ ವಿಚಾರವನ್ನು ಉಲ್ಲೇಖಿಸಿ ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. “ಹಿಜಾಬ್ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿ ಇರುವಾಗಲೇ ಸರ್ಕಾರ ನಿಷೇಧ ಹಿಂಪಡೆಯಲು ಮುಂದಾಗಿರುವುದು ಯಾಕೆ? ಇದು ಜನರ ಗಮನ ಬೇರೆಡೆ ಸೆಳೆಯುವ ಪ್ರಯತ್ನ” ಎಂದರು.

ಕಾಂಗ್ರೆಸ್ ನಾಯಕ ನಾಸೀರ್ ಹುಸೇನ್ ಕುರಿತ ವಿವಾದವನ್ನು ಉಲ್ಲೇಖಿಸಿದ ಅವರು, “ಪಾಕಿಸ್ತಾನ ಪರ ಘೋಷಣೆಗಳ ವಿಚಾರದಲ್ಲಿಯೂ ಕಾಂಗ್ರೆಸ್ ಮೌನವಾಗಿದೆ” ಎಂದು ಆರೋಪಿಸಿದರು. ಹಿಂದೂಗಳ ಭಾವನೆಗಳಿಗೆ ಧಕ್ಕೆ ತರುವ ಕೆಲಸ ಸರ್ಕಾರದಿಂದ ನಡೆಯುತ್ತಿದೆ ಎಂದು ದೂರಿದ ಅವರು, ಹಿಂದೂ ಹಬ್ಬಗಳ ಮೇಲೂ ದಾಳಿ ನಡೆಯುತ್ತಿದೆ ಎಂದು ಹೇಳಿದರು.

ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನಡುವೆ ಅಂತರ್ದ್ವಂದ್ವ ನಡೆಯುತ್ತಿದೆ ಎಂದು ಆರೋಪಿಸಿದ ಶ್ರೀರಾಮುಲು, “ಈಗ ಸಿದ್ದರಾಮಯ್ಯ ಡಬ್ಬಿಯೇ ಹೆಚ್ಚು ಸೌಂಡ್ ಮಾಡುತ್ತಿದೆ” ಎಂದು ವ್ಯಂಗ್ಯವಾಡಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮ ಹಗರಣವನ್ನು ಉಲ್ಲೇಖಿಸಿದ ಅವರು, “ಹಗರಣದಲ್ಲಿ ಹಣ ಹೊಡೆದಿದ್ದಕ್ಕೆ ಸಮಾವೇಶ ಮಾಡುತ್ತಿದ್ದೀರಾ? ರೈತರ ಸಾವಿಗೆ ಸಮಾವೇಶ ಮಾಡುತ್ತಿದ್ದೀರಾ?” ಎಂದು ಪ್ರಶ್ನಿಸಿದರು. ಕುಕ್ಕರ್ ಬಾಂಬ್ ಪ್ರಕರಣದ ಆರೋಪಿಗಳನ್ನು “ಬ್ರದರ್” ಎಂದು ಕರೆಯಲಾಗಿದೆ ಎಂದು ಟೀಕಿಸಿದ ಅವರು, “ಯಾವ ಸಾಧನೆಗಾಗಿ ಸಮಾವೇಶ ಮಾಡುತ್ತಿದ್ದಾರೆ ಎಂಬುದನ್ನು ಸರ್ಕಾರವೇ ಹೇಳಬೇಕು” ಎಂದರು.

ಮುಸ್ಲಿಂ ಕಾಲೋನಿಗಳ ಅಭಿವೃದ್ಧಿಗೆ ಸಾವಿರಾರು ಕೋಟಿ ರೂಪಾಯಿ ಮೀಸಲಿಡಲಾಗುತ್ತಿದೆ ಎಂದು ಆರೋಪಿಸಿದ ಶ್ರೀರಾಮುಲು, “ಒಂದು ಸಮುದಾಯದ ಓಲೈಕೆಗಾಗಿ ಸರ್ಕಾರ ಆಡಳಿತ ನಡೆಸುತ್ತಿದೆ. ಹಿಂದೂಗಳ ಮೇಲೆ ಮಾತ್ರ ಪ್ರಕರಣ ದಾಖಲಿಸುವ ರಾಜಕಾರಣ ನಡೆಯುತ್ತಿದೆ” ಎಂದು ದೂರಿದರು.

## ಸಮಾಜ ಸೇವಕ ನಬಿ ಜಮಾದಾರಗೆ ಸಮಾಜ ಸೇವಾ ರತ್ನ



**ವಿಜಯಪುರ:** ಸಮಾಜ ಸೇವೆ ಹಾಗೂ ಕನ್ನಡ ನಾಡು-ನುಡಿಯ ಅಭಿವೃದ್ಧಿಗಾಗಿ ಸಲ್ಲಿಸಿದ ಗಣನೀಯ ಸೇವೆಯನ್ನು ಗುರುತಿಸಿ, ಇಲ್ಲಿನ ಹೆಸರಾಂತ ಉದ್ಯಮಿ ಹಾಗೂ ಕಾಂಗ್ರೆಸ್ ಮುಖಂಡರಾದ ನಬಿ ಆರ್. ಜಮಾದಾರ ಅವರಿಗೆ 2026ನೇ ಸಾಲಿನ ರಾಜ್ಯ ಮಟ್ಟದ 'ಸಮಾಜ ಸೇವಾ ರತ್ನ' ಪ್ರಶಸ್ತಿಯನ್ನು ಘೋಷಿಸಲಾಗಿದೆ.

ಜಮಾದಾರ ಟ್ರೇಡರ್ಸ್ ಮಾಲೀಕರಾದ ಇವರು ಆಲಮೇಲ ಭಾಗದಲ್ಲಿ ತಮ್ಮ ಸಾಮಾಜಿಕ ಕಳಕಳಿ ಮತ್ತು ಜನಪರ ಕೆಲಸಗಳ ಮೂಲಕ ಚಿರಪರಿಚಿತರಾಗಿದ್ದಾರೆ. ಶಿಕ್ಷಣ, ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಇವರು ನೀಡಿದ ಕೊಡುಗೆಯನ್ನು ಪರಿಗಣಿಸಿ ಈ ಗೌರವ ನೀಡಲಾಗುತ್ತಿದೆ.

ಪ್ರಶಸ್ತಿ ಪ್ರದಾನವನ್ನು ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಸುಕ್ಷೇತ್ರ ಶ್ರೀ ಚೌಡೇಶ್ವರಿ ದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಈ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ಖೇಡಗಿಯ ವಿರಕ್ತ ಮಠದ ಸಭಾಂಗಣದಲ್ಲಿ ನಾಡಿನ ವಿವಿಧ ಮಠಾಧೀಶರು, ಹರ-ಗುರು ಚರಮೂರ್ತಿಗಳು ಹಾಗೂ ಗಣ್ಯರ ಸಮುಖದಲ್ಲಿ ಗೌರವಿಸಲಾಗುವುದು. ನಬಿ ಜಮಾದಾರ ಅವರು ಕೇವಲ ಉದ್ಯಮಿಯಾಗಿ ಉಳಿಯದೆ, ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸ್ಪಂದಿಸುವ ಗುಣ ಹೊಂದಿದ್ದಾರೆ. ಅವರ ಈ ಸೇವೆಗೆ ಅರ್ಹವಾಗಿಯೇ ರಾಜ್ಯ ಮಟ್ಟದ ಗೌರವ ಒಲಿದುಬಂದಿದೆ," ಎಂದು ಅವರ ಅಭಿಮಾನಿಗಳು ಹಾಗೂ ಹಿತೈಷಿಗಳು ಸಂತಸ ವ್ಯಕ್ತಪಡಿಸಿದ್ದಾರೆ. ಈ ಪ್ರಶಸ್ತಿ ಘೋಷಣೆಯಾದ ಹಿನ್ನೆಲೆಯಲ್ಲಿ ಆಲಮೇಲ ಹಾಗೂ ಇಂಡಿ ಭಾಗದ ಕಾಂಗ್ರೆಸ್ ಮುಖಂಡರು ಮತ್ತು ನಾಗರಿಕರು ಅವರಿಗೆ ಅಭಿನಂದಿಸಿದ್ದಾರೆ.

## ವಿದ್ಯಾರ್ಥಿನಿಯರ ಬೀಳ್ಕೊಡುಗೆ ಸಮಾರಂಭ




**ಗಂಗಾವತಿ:** ನಗರದ ಐ.ಎಂ.ಎ ಸಭಾಂಗಣದಲ್ಲಿ ಮೇ-17 ರಂದು ಸಂಕಲ್ಪ ಎಜುಕೇಶನ್ ಟ್ರಸ್ಟಿನ ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯವು ಹಮ್ಮಿಕೊಂಡಿದ್ದ 13ನೇ ವಾರ್ಷಿಕೋತ್ಸವ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿನಿಯರಿಗೆ ಬೀಳ್ಕೊಡುಗೆ ಮತ್ತು ಪದವಿ ಪ್ರಧಾನ ಸಮಾರಂಭದಲ್ಲಿ ವಿಶೇಷ ಆಹ್ವಾನಿತರಾಗಿದ್ದ ಸಿಂಡಿಕೇಟ್ ಮಾಜಿ ಸದಸ್ಯರಾದ ಆರ್.ಸಿ ಪಾಟೀಲ್ ಅವರು ವಿದ್ಯಾರ್ಥಿನಿಯರು ಯಾವುದೇ ರಂಗಗಳಲ್ಲಿ ಯಶಸ್ವಿಯಾಗಿ ಭವಿಷ್ಯ ರೂಪಿಸಿಕೊಳ್ಳಬೇಕಾದರೆ ಆತ್ಮವಿಶ್ವಾಸದಿಂದ ಕಾರ್ಯನಿರ್ವಹಿಸಬೇಕು ಎಂದು ಸಲಹೆ ಕೊಟ್ಟರು.


ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಉಪಾಧ್ಯಕ್ಷರಾದ ಎಂ.ಆರ್. ಮಂಜುಸ್ವಾಮಿಯವರು, ಕಠಿಣ ಸವಾಲುಗಳು ಎದುರಾದಾಗ ಎದೆಗುಂದದೇ ತಾಳ್ಮೆಯಿಂದ ಎದುರಿಸುವ ದೃಢ ಮನಸ್ಸು ನಮ್ಮದಾಗಿರಬೇಕು. ವೇಗವಾಗಿ ಬೆಳೆಯುತ್ತಿರುವ ಇಂದಿನ ತಂತ್ರಜ್ಞಾನದ ಜೊತೆ ನಾವು ಸಾಗಬೇಕು ಎಂದು ಕರೆಕೊಟ್ಟರು.

ಡಾ. ಅಮಿತ್ ಕುಮಾರರೆಡ್ಡಿ ಪದವಿ ಪುರಸ್ಕಾರ ಕಾರ್ಯಕ್ರಮ ನೆರವೇರಿಸಿದರು. ಅಧ್ಯಕ್ಷರಾದ ಹೇಮಂತರಾಜ ಜಿ. ಕಲ್ಮಂಗಿಯವರು, ಕಾಲೇಜಿನ ಹದಿಮೂರು ವರ್ಷದ ಸಾಧನೆ ಹಾಗೂ ವಿದ್ಯಾರ್ಥಿನಿಯರು ಉದ್ಯೋಗ ಪಡೆದು ಸ್ವಾವಲಂಬಿ ಜೀವನ ಸಾಗಿಸುತ್ತಿರುವುದು ಹೆಮ್ಮೆಯ ಸಂಗತಿ ಎಂದು ಪ್ರಾಸ್ತಾವಿಕ ನುಡಿಯಲ್ಲಿ ಹೇಳಿದರು.

ಮುಖ್ಯ ಅತಿಥಿಗಳಾಗಿ ಕಾರ್ಯದರ್ಶಿ ಬಸವರಾಜ ಕೇಸರಹಟ್ಟಿ ಅಂತಿಮ ವರ್ಷದ ವಿದ್ಯಾರ್ಥಿನಿಯರಿಗೆ ಶುಭ ಹಾರೈಸಿದರು. ಅಧ್ಯಕ್ಷತೆವಹಿಸಿದ್ದ ಮಲ್ಲಿಕಾರ್ಜುನ ಸಿಂಗನಾಳ ಅಧ್ಯಕ್ಷೀಯ ನುಡಿ ಹೇಳಿದರು. ಈ ಕಾರ್ಯಕ್ರಮದಲ್ಲಿ ಪ್ರಾಚಾರ್ಯ ಬಸವರಾಜ ಶಿರಿಗೇರಿ ಉಪಸ್ಥಿತರಿದ್ದು, ರ್ಯಾಂಕ್ ಸಾಧನೆಗೈದ ಬಿ.ಎ ಪ್ರಥಮ ರ್ಯಾಂಕ್ ಪಡೆದ ತಿರುಮಲ ತಂ. ಪಾಮಣ್ಣ ಪೂಜಾರಿ, ಐಚ್ಛಿಕ ಕನ್ನಡ ಚಿನ್ನದ ಪದಕ ಪಡೆದ ರೇವತಿ ಜಯಣ್ಣ ಹೆಬ್ಬಾಳ, ಬಿ.ಕಾಂ ನಲ್ಲಿ ನಾಲ್ಕನೇ ರ್ಯಾಂಕ್ ಪಡೆದ ರಂಜಿತಾ ರಮೇಶ ಹಾಗೂ 10ನೇ ರ್ಯಾಂಕ್ ಪಡೆದ ಸಾಕ್ಷಿಪ್ರಿಯ ಮಂಜುನಾಥ ಶಹಪೂರ ವಿದ್ಯಾರ್ಥಿನಿಯರಿಗೆ ಮತ್ತು ಪಾಲಕರಿಗೆ ಸನ್ಮಾನ ಕಾರ್ಯಕ್ರಮ ನೆರವೇರಿಸಿದರು.

ಹಿರಿಯ ಉಪನ್ಯಾಸಕರಾದ ಶಂಕರಲಿಂಗಪ್ಪ, ಮುಖ್ಯ ಅತಿಥಿಗಳಾಗಿದ್ದು, ನಾಗರಾಜ ಹೆಚ್., ವಿಶ್ವನಾಥ, ಬಸವನಗೌಡ, ಅಶೋಕ ಹೆಚ್. ಎಂ., ರಮೇಶ, ರಮೇಶ ಪೂಜಾರ, ಶ್ರೀಮತಿ ವಿದ್ಯಾ, ಮುಸ್ಕಾನ್, ಬಸವರಾಜ ವೈ., ಶ್ರೀಮತಿ ಆಶಾ, ಸುರೇಶ, ಶ್ರೀಮತಿ ಸ್ಮಿತಾ ಇನ್ನಿತರ ಉಪನ್ಯಾಸಕರು ಕಾರ್ಯಕ್ರಮ ನೆರವೇರಿಸಿದರು.

## ಐತಿಹಾಸಿಕ ಪುರಾತನ ಬಾವಿ



**ಗುರುಮಠಕಲ್:** ಪಟ್ಟಣದಿಂದ ಕೇವಲ ಆರು ಕಿಲೋ ಮೀಟರ್ ದೂರದಲ್ಲಿರುವ ಪ್ರಕೃತಿಯ ಮಡಿಲಲ್ಲಿರುವ ಐತಿಹಾಸಿಕ ಬೋರಬಂಡ ಪಶ್ಚಿಮಾದ್ರಿ ಶ್ರೀ ಸಿದ್ದಲಿಂಗೇಶ್ವರ ವಿರಕ್ತಮಠ ಬೋರಬಂಡ ಪೀಠ ಹಾಗೂ ಅದರ ಆವರಣದಲ್ಲಿ ಇರುವ ಪುರಾತನ ಬಾವಿ ಇದೀಗ ಜನರ ಗಮನ ಸೆಳೆಯುತ್ತಿದೆ. ಆದರೆ ಸ್ಥಳೀಯರ ಹೊರತಾಗಿ ಈ ಭಾಗದ ಅನೇಕ ಜನರಿಗೆ ಈ ಐತಿಹಾಸಿಕ ತಾಣದ ಕುರಿತು ಸಮರ್ಪಕ ಮಾಹಿತಿ ಇಲ್ಲದಿರುವುದು ವಿಷಾದನೀಯವಾಗಿದೆ.

ಸುಮಾರು ಅರ್ಧ ಎಕರೆ ಪ್ರದೇಶದಲ್ಲಿ ಮಠ ಹಾಗೂ ಬಾವಿ ನಿರ್ಮಾಣಗೊಂಡಿದೆ, ಈ ಬಾವಿಯು ಆಧುನಿಕ ಸ್ವಿಮ್ಮಿಂಗ್ ಪೂಲ್ ಮಾದರಿಯ ವಿನ್ಯಾಸವನ್ನು ಹೊಂದಿದ್ದು, ನೋಡುಗರಲ್ಲಿ ಆಶ್ಚರ್ಯ ಮೂಡಿಸುತ್ತದೆ. ಹಲವು ವರ್ಷಗಳ ಇತಿಹಾಸ ಹೊಂದಿರುವ ಈ ಬಾವಿಯಲ್ಲಿ ಇಂದಿಗೂ ಸ್ವಚ್ಛ ಹಾಗೂ ಶುದ್ಧ ನೀರು ಇರುವುದೇ ವಿಶೇಷವಾಗಿದೆ. ಪುರಾತನ ಕಾಲದ ಶಿಲ್ಪಕಲೆ, ನೀರಿನ ಸಂರಕ್ಷಣೆ ಹಾಗೂ ತಾಂತ್ರಿಕ ಜ್ಞಾನದ ಪ್ರತೀಕವಾಗಿ ಈ ಬಾವಿ ಕಾಣಿಸಿಕೊಂಡಿದ್ದು, ಮಠದ ಐತಿಹಾಸಿಕ ಮಹತ್ವವನ್ನು ಮತ್ತಷ್ಟು ಹೆಚ್ಚಿಸಿದೆ. ಮಠ ಹಾಗೂ ಬಾವಿಯ ಬಗ್ಗೆ ಸರ್ಕಾರ ಮತ್ತು ಪ್ರವಾಸೋದ್ಯಮ ಇಲಾಖೆ ಹೆಚ್ಚಿನ ಪ್ರಚಾರ ನೀಡಿದಲ್ಲಿ ಈ ತಾಣ ರಾಜ್ಯ ಮಟ್ಟದಲ್ಲಿ ಗುರುತಿಸಿಕೊಳ್ಳುವ ಸಾಧ್ಯತೆ ಇದೆ ಎಂದು ಸ್ಥಳೀಯರು ಅಭಿಪ್ರಾಯಪಟ್ಟಿದ್ದಾರೆ.

## ಅಧ್ಯಕ್ಷರಾಗಿ ಡಾ.ಸಯ್ಯದ ಮುಹಮ್ಮದ ಅಲಿ ಅಲ್ ಹುಸ್ಸೇನಿ ಆಯ್ಕೆ

• ಮಲ್ಲಮ್ಮ ನುಡಿ ವಾರ್ತೆ ಹುಬ್ಬಳ್ಳಿ

ಅಖಿಲ ಕರ್ನಾಟಕ ಸುನ್ನಿ ಮಶಾಯಿಖ್ ಕೌನ್ಸಿಲ್‌ನ ಭವ್ಯ ಜನರಲ್ ಬಾಡಿ ಸಭೆಯಲ್ಲಿ, ದರ್ಗಾ ಹಜರತ್ ಖ್ವಾಜಾ ಬಂದೇನವಾಜ್ ರಹ್ಮತುಲ್ಲಾಹಿ ಅಲೈಹಿ ಅವರ ಆಸ್ತಾನಾ ಆಲಿಯಾದ ಸಜ್ಜಾದಾ ನಶೀನ್, ಕರ್ನಾಟಕ ಸ್ಟೇಟ್ ಬೋರ್ಡ್ ಆಫ್ ವಕ್ಫ್ ಅಧ್ಯಕ್ಷರು, ಖ್ವಾಜಾ ಬಂದೇನವಾಜ್ ವಿಶ್ವವಿದ್ಯಾಲಯದ ಚಾನ್ಸಲರ್ ಹಾಗೂ ಖ್ವಾಜಾ ಎಜುಕೇಶನ್ ಸೊಸೈಟಿಯ ಅಧ್ಯಕ್ಷರಾದ ಡಾ ಹಾಫಿಜ್ ಸೈದ್ ಮೊಹಮ್ಮದ್ ಅಲಿ ಅಲ್ ಹುಸೇನಿ ಅವರನ್ನು ಏಕಮತದಿಂದ ಅಖಿಲ ಕರ್ನಾಟಕ ಸುನ್ನಿ ಮಶಾಯಿಖ್ ಕೌನ್ಸಿಲ್‌ನ ಅಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು.

ಈ ಘೋಷಣೆಯೊಂದಿಗೆ ಸಭಾಂಗಣದಲ್ಲಿ ಉಪಸ್ಥಿತರಿದ್ದ ಸಜ್ಜಾದಾಗಣ್, ಮಶಾಯಿಖ್‌ಗಳು, ಉಲಮಾಗಳು ಮತ್ತು ಭಕ್ತರಲ್ಲಿ ಸಂತೋಷದ ವಾತಾವರಣ ನಿರ್ಮಾಣವಾಯಿತು. ದರೂದ್-ಓ-ಸಲಾಂ ಹಾಗೂ ತಕ್ಬೀರ್ ಘೋಷಣೆಗಳಿಂದ ಸಭಾಂಗಣ ಆಧ್ಯಾತ್ಮಿಕ ವಾತಾವರಣದಿಂದ ಮೆರೆಯಿತು.

ಹುಬ್ಬಳ್ಳಿಯ ರಾಯಲ್ ರಿಟ್ಜ್ ಹೋಟೆಲ್‌ನಲ್ಲಿ ನಡೆದ ಈ ಸಭೆಗೆ ದರ್ಗಾ ಹಜರತ್ ಖ್ವಾಜಾ ಗಂಜ್ ಬಕ್ಷ್ ರಹ್ಮತುಲ್ಲಾಹಿ ಅಲೈಹಿ ಅವರ ಸಜ್ಜಾದಾ ನಶೀನ್ ಸಯ್ಯದ ಶಾಹ ಹಸನ ಶಬ್ಬೀರ್ ಹುಸೇನಿ ಅಧ್ಯಕ್ಷತೆ ವಹಿಸಿದ್ದರು. ಸಭೆಯ ಮೇಲ್ವಿಚಾರಣೆಯನ್ನು ಡಾ ಹಫೀಜ್ ಸೈದ್ ಮೊಹಮ್ಮದ ಅಲಿ



ಅಲ್ ಹುಸ್ಸೇನಿ ನೆರವೇರಿಸಿದರು.

ಹಜ್ರತ್ ಸಜ್ಜಾದಾ ನಶೀನ್ ಸಾಹೇಬರು ತಸವ್ವುಫ್‌ನ ಮೂಲ ತತ್ವವಾದ "ಫನಾ ಫಿಲ್ಲಾಹ್" ಕುರಿತು ವಿಶೇಷವಾಗಿ ಮಾತನಾಡಿದ ಅವರು, ಮೊದಲಿಗೆ ಮಾನವನ ಅಹಂಕಾರ ನಾಶವಾಗಬೇಕು ಎಂದರು. ನಿಜವಾದ ತಸವ್ವುಫ್ ಎಂದರೆ ವಿನಯ, ಪ್ರೀತಿ ಮತ್ತು ಇತರರಿಗೆ ತೊಂದರೆ ಕೊಡದಿರುವುದು ಎಂದು ಹೇಳಿದರು ತಸವ್ವುಫ್, ಖಾನ್ಕಾಹಿ ವ್ಯವಸ್ಥೆ, ಉಮ್ಮತ್ ಏಕತೆ, ನೈತಿಕತೆ, ವಿನಯಶೀಲತೆ ಮತ್ತು ಮುಂದಿನ ಪೀಳಿಗೆಯ ಧಾರ್ಮಿಕ-ಆಧ್ಯಾತ್ಮಿಕ ತರಬೇತಿ ಕುರಿತಾಗಿ ಗಂಭೀರ ಹಾಗೂ ಪ್ರಬೋಧನಾತ್ಮಕ ಭಾಷಣ ಮಾಡಿದರು. ಖಾನ್ಕಾಹ್‌ಗಳು ಕೇವಲ ಆಧ್ಯಾತ್ಮಿಕ ಕೇಂದ್ರಗಳಲ್ಲ, ಸಮಾಜ ಸುಧಾರಣೆ, ಮಾನವೀಯತೆ ಹಾಗೂ ನೈತಿಕ ಮೌಲ್ಯಗಳ ರಕ್ಷಣೆಯ ಬಲಿಷ್ಠ ಕೇಂದ್ರಗಳಾಗಿವೆ ಎಂದು ಅವರು ಹೇಳಿದರು. ಮಶಾಯಿಖ್‌ಗಳ ನಡುವಿನ ಸಂಬಂಧ ಮತ್ತಷ್ಟು ಬಲಪಡಿಸುವ ಅಗತ್ಯವಿದೆ ಎಂದು ಅವರು ಒತ್ತಿಹೇಳಿದರು. ಇದರಿಂದ ಸಮುದಾಯದ ಸಮಸ್ಯೆಗಳು ಹಾಗೂ ಆಧ್ಯಾತ್ಮಿಕ ವಿಚಾರಗಳಿಗೆ ಒಟ್ಟಾಗಿ ಪರಿಹಾರ ಕಂಡುಕೊಳ್ಳಬಹುದು ಎಂದರು.

ಅವರು ತಮ್ಮ ತಾತರಾದ ದರ್ಗಾ ಹಜರತ್ ಖ್ವಾಜಾ ಬಂದೇನವಾಜ್ ರಹ್ಮತುಲ್ಲಾಹಿ ಅಲೈಹಿ ಅವರ ಸಜ್ಜಾದಾ ನಶೀನ್ ಆಗಿದ್ದ ಸೈದ್ ಶಾಹ್ ಮೊಹಮ್ಮದ್ ಅಲ್ ಹುಸೇನಿ ಹಾಗೂ ತಂದೆ-ಯಾದ ಡಾ ಸಯ್ಯದ್ ಶಾಹ್ ಗೆಸುದಾರಜ್ ಖುಸ್ರೋ ಹುಸೇನಿ ಅವರನ್ನು ಸ್ಮರಿಸಿ, ಜನಸೇವೆ ಮತ್ತು ಸಮಾಜ ಸೇವೆಯ ಪಾಠವನ್ನು ತಮ್ಮ ಪೂರ್ವಜರಿಂದ ಕಲಿತಿದ್ದಾಗಿ ಹೇಳಿದರು.

ಮುರೀದ್ ಮತ್ತು ಮುರ್ಶಿದ್ ಸಂಬಂಧ ಅತ್ಯಂತ ಪವಿತ್ರ ಹಾಗೂ ಆಧ್ಯಾತ್ಮಿಕ ಸಂಬಂಧವಾಗಿದ್ದು, ಕೇವಲ ಬೈಅತ್ ಸಾಕಾಗುವುದಿಲ್ಲ. ಸರಿಯಾದ ತರಬೇತಿ, ನೈತಿಕ ಸುಧಾರಣೆ ಹಾಗೂ ಆಧ್ಯಾತ್ಮಿಕ ಮಾರ್ಗದರ್ಶನ ಅಗತ್ಯ ಎಂದು ಹೇಳಿದರು. ಇಂದಿನ ಕಾಲದಲ್ಲಿ ತರಬೇತಿಯಿಲ್ಲದೆ ಮುರೀದ್ ಮಾಡುವ ಪ್ರವೃತ್ತಿ ಹೆಚ್ಚುತ್ತಿರುವುದರ ಬಗ್ಗೆ ಅವರು ವಿಷಾದ ವ್ಯಕ್ತಪಡಿಸಿದರು.

ಅಖಿಲ ಕರ್ನಾಟಕ ಸುನ್ನಿ ಮಶಾಯಿಖ್ ಕೌನ್ಸಿಲ್ ಕೇವಲ ಸಭೆಗಳನ್ನು ಆಯೋಜಿಸುವ ಸಂಘಟನೆಯಲ್ಲ, ಬದಲಾಗಿ ಮಶಾಯಿಖ್‌ಗಳ ಸಾಮೂಹಿಕ ಚಿಂತನೆ ಮತ್ತು ಮಾರ್ಗದರ್ಶನದ ಮೂಲಕ ಸಮುದಾಯಕ್ಕೆ ದಿಕ್ಕು ತೋರಿಸುವ ಬಲಿಷ್ಠ ಆಧ್ಯಾತ್ಮಿಕ ಹಾಗೂ ಚಿಂತನಾ ವೇದಿಕೆಯಾಗಿದೆ ಎಂದು ಹೇಳಿದರು.

ಸಭೆಯಲ್ಲಿ ಕೌನ್ಸಿಲ್‌ನ 25 ವರ್ಷದ ಇತಿಹಾಸ, ಉದ್ದೇಶಗಳು ಹಾಗೂ ಹಿಂದಿನ ಮಹತ್ವದ ಸಮ್ಮೇಳನಗಳ ಕುರಿತು ವಿವರವಾಗಿ ಪ್ರಸ್ತಾಪಿಸಲಾಯಿತು. 1998ರಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಅಖಿಲ ಭಾರತ ಮಟ್ಟದ ಮೊದಲ ಮಹಾಸಮ್ಮೇಳನ, ನಂತರ 2000 ಮತ್ತು 2007ರಲ್ಲಿ ನಡೆದ ಸಮ್ಮೇಳನಗಳ ಬಗ್ಗೆ ಸ್ಮರಿಸಲಾಯಿತು.

ಈ ಸಭೆಯಲ್ಲಿ ಕರ್ನಾಟಕದ ವಿವಿಧ ಭಾಗಗಳಿಂದ ಸಜ್ಜಾದಾಗಣ್, ಮಶಾಯಿಖ್‌ಗಳು, ಉಲಮಾಗಳು ಮತ್ತು ಅವಲಿಯಾಕರಂರ ಭಕ್ತರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು.


## 40 KW ಟಾಟಾ ಸೋಲಾರ್ ಪ್ಯಾನಲ್ ಅಳವಡಿಕೆ: ಸ್ವಾವಲಂಬನೆಯತ್ತ ಹೆಜ್ಜೆ!

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ಪ್ರಸ್ತುತ ದಿನಗಳಲ್ಲಿ ಹೆಚ್ಚುತ್ತಿರುವ ವಿದ್ಯುತ್ ವೆಚ್ಚಕ್ಕೆ ಬ್ರೇಕ್ ಹಾಕಲು ಮತ್ತು ಪರಿಸರಸ್ನೇಹಿ ಶಕ್ತಿಯನ್ನು ಅಳವಡಿಸಿಕೊಳ್ಳಲು ಶಿ.ಹೇ.ಮಲ್ಲಮ್ಮ ಸಂಸ್ಥೆಯು ಒಂದು ಮಹತ್ವದ ನಿರ್ಧಾರ ಕೈಗೊಂಡಿದೆ. ಸಂಸ್ಥೆಯ ಆವರಣದಲ್ಲಿ 40 ಏಫ ಸಾಮರ್ಥ್ಯದ ಟಾಟಾ ಕಂಪನಿಯ ಸೋಲಾರ್ ಫಲಕಗಳನ್ನು ಯಶಸ್ವಿಯಾಗಿ ಅಳವಡಿಸಲಾಗಿದ್ದು, ಇಂದು ಅದರ ಪ್ರಾರಂಭೋತ್ಸವ ಹಾಗೂ ಪೂಜಾ ಕಾರ್ಯಕ್ರಮವು ಅತ್ಯಂತ ಸಡಗರದಿಂದ ನೆರವೇರಿತು.

ಆರ್ಥಿಕ ಸವಾಲಿದ್ದರೂ ದೃಢ ನಿರ್ಧಾರ!

ಸಂಸ್ಥೆಯು ಪ್ರಸ್ತುತ ಹಣಕಾಸಿನ ತೊಂದರೆಯಲ್ಲಿದ್ದರೂ ಸಹ, ಪ್ರತಿ ತಿಂಗಳು ಬರುತ್ತಿದ್ದ ವಿದ್ಯುತ್ ಬಿಲ್ ನಿರೀಕ್ಷೆಗೂ ಮೀರಿ ಸಂಸ್ಥೆಗೆ ಹೊರೆಯಾಗುತ್ತಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ ಆಡಳಿತ



ಮಂಡಳಿಯ ಎಲ್ಲ ಗೌರವಾನ್ವಿತ ನಿರ್ದೇಶಕರು, ಭವಿಷ್ಯದ ಹಿತದೃಷ್ಟಿಯಿಂದ ಈ ಸೋಲಾರ್ ಯೋಜನೆಗೆ ಪ್ರಥಮ ಆದ್ಯತೆ ನೀಡಲು ಒಮ್ಮತದ ನಿರ್ಧಾರ ಕೈಗೊಂಡರು. ಕೇವಲ ಎರಡು ತಿಂಗಳ ಅಲ್ಪಾವಧಿಯಲ್ಲಿ ಈ ಬೃಹತ್ ಕಾರ್ಯವನ್ನು ಪೂರ್ಣಗೊಳಿಸಿರುವುದು ಸಂಸ್ಥೆಯ ಆಡಳಿತ ಮಂಡಳಿಯ ದಕ್ಷತೆಗೆ ಸಾಕ್ಷಿಯಾಗಿದೆ.

**'ಎನರ್ಜಿ ನೀಡ್ಸ್' ಸಂಸ್ಥೆಗೆ ಧನ್ಯವಾದಗಳು**

ಈ ಅತ್ಯಾಧುನಿಕ ಸೋಲಾರ್ ಯೋಜನೆಯನ್ನು ಅತ್ಯಂತ ಗುಣಮಟ್ಟದಿಂದ ಮತ್ತು ಜವಾಬ್ದಾರಿಯುತವಾಗಿ ಪೂರ್ಣಗೊಳಿಸಿಕೊಟ್ಟ ಕೀರ್ತಿ 'ಇಟಿಜಡಿಂಥಿ ಓಜಜಝ' ಸಂಸ್ಥೆಯ ಪಾಲುದಾರರಾದ ಶ್ರೀಯುತ ರವಿ ಖಜ್ಜಿಡೋಣಿ ಹಾಗೂ ಅವರ ತಂಡಕ್ಕೆ ಸಲ್ಲುತ್ತದೆ. ಸಂಸ್ಥೆಯ ಆವರಣಕ್ಕೆ ಸೂಕ್ತವಾಗುವಂತೆ ಅತ್ಯುತ್ತಮ ತಂತ್ರಜ್ಞಾನ ಬಳಸಿ, ನಿಗದಿತ ಅವಧಿಯಲ್ಲಿ ಕೆಲಸ ಮುಗಿಸಿಕೊಟ್ಟ ಇವರ ಕಾರ್ಯವೈಖರಿಯನ್ನು ಮುಕ್ತಕಂಠದಿಂದ ಶ್ಲಾಘಿಸಲಾಯಿತು.

**ಗೌರವ ಸಮರ್ಪಣೆ**

ಕಾರ್ಯಕ್ರಮದ ಅಂಗವಾಗಿ, ಸಂಸ್ಥೆಯ ಹಿತವನ್ನು ಕಾಪಾಡಿ, ಈ ಯೋಜನೆಯು ಯಶಸ್ವಿಯಾಗಲು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಶ್ರಮಿಸಿದ ಮತ್ತು ಸಹಕರಿಸಿದ ಎಲ್ಲಾ ಗಣ್ಯರನ್ನು ಹಾಗೂ ತಾಂತ್ರಿಕ ವರ್ಗದವರನ್ನು ಸಂಸ್ಥೆಯ ವತಿಯಿಂದ ಅತ್ಯಂತ ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು.

**ಭವಿಷ್ಯದ ಉಳಿತಾಯದ ಹಾದಿ**

ಈ 40 KW ಟಾಟಾ ಸೋಲಾರ್ ಪ್ಯಾನಲ್ ಅಳವಡಿಕೆಯಿಂದಾಗಿ ಶಿ.ಹೇ.ಮಲ್ಲಮ್ಮ ಸಂಸ್ಥೆಯ ಮಾಸಿಕ ವಿದ್ಯುತ್ ವೆಚ್ಚದಲ್ಲಿ ಗಣನೀಯ ಪ್ರಮಾಣದ ಉಳಿತಾಯವಾಗಲಿದೆ. ಈ ಉಳಿತಾಯದ ಹಣವನ್ನು ಸಂಸ್ಥೆಯು ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳ/ಸಂಸ್ಥೆಯ ಇತರೆ ಜನಪರ ಹಾಗೂ ಶೈಕ್ಷಣಿಕ ಅಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಳ್ಳಲು ಸಹಕಾರಿಯಾಗಲಿದೆ. ಈ ಯಶಸ್ವಿ ಯೋಜನೆಗೆ ಕಾರಣಕರ್ತರಾದ ಆಡಳಿತ ಮಂಡಳಿಗೆ, ನಿರ್ದೇಶಕರಿಗೆ ಹಾಗೂ ಸಿಬ್ಬಂದಿ ವರ್ಗಕ್ಕೆ ಎಲ್ಲೆಡೆಯಿಂದ ಅಭಿನಂದನೆಗಳ ಮಹಾಪೂರವೇ ಹರಿದುಬಂದಿದೆ ಇನ್ನು ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಸುರೇಶ್ ದೇಸಾಯಿ, ಗೌರವ ಅಧ್ಯಕ್ಷರಾದ ಎಚ್ ಆರ್. ಮಾಚಪ್ಪನವರ, ಎಚ್ ವಿ, ಕರೀಗೌಡರ್, ಉಪಾಧ್ಯಕ್ಷರಾದ ಕೆ. ವಿ. ಪಾಟೀಲ್ ಶಿರಗೂರ್, ಕಾರ್ಯದರ್ಶಿ ಆರ್ ಟಿ ಕೊಡಬಾಗಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಕೃಷಿ ಯಂತ್ರೋಪಕರಣ ಮೂಲಭೂತ ಸೌಲಭ್ಯ ಕಲ್ಪಿಸಲು ಮನವಿ

• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ಕರ್ನಾಟಕ ದಲಿತ ಸಂಘರ್ಷ ಸಮಿತಿ ಕಲ್ಯಾಣ ಕರ್ನಾಟಕ ವಿಭಾಗ ಕೊಪ್ಪಳ ಜಿಲ್ಲಾ ಸಮಿತಿ ಹಾಗೂ ರಾಜ್ಯ ಸಮಿತಿಯ ನೇತೃತ್ವದಲ್ಲಿ ಮಂಗಳವಾರದಂದು ಮುಂಗಾರು ಹಂಗಾಮ ಪ್ರಯುಕ್ತ ರೈತರ ಕೃಷಿ ಚಟುವಟಿಕೆಗಳಿಗೆ ಅಗತ್ಯ ಇರುವ ರಸಗೊಬ್ಬರ ಕೃಷಿ ಉಪಕರಣ ಯಂತ್ರಗಳು ಬೀಜಗಳು ಕೀಟನಾಶಕ ಸೇರಿದಂತೆ ಮತ್ತಿತರ ಸೌಲಭ್ಯಗಳನ್ನು ಕಲ್ಪಿಸುವಂತೆ ಒತ್ತಾಯಿಸಿ . ಮಂಗಳವಾರದಂದು ಸಹಾಯಕ ಕೃಷಿ ನಿರ್ದೇಶಕರು ತಾಲೂಕು ಕೃಷಿ ಇಲಾಖೆ ಅಧಿಕಾರಿಗಳ ಮೂಲಕ ಮಾನ್ಯ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರವನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ವಿಭಾಗೀಯ ಸಂಚಾಲಕ ಹಂಪೇಶ್ ಹರಿವರು ಮಾತನಾಡಿ ಎಸ್ಸಿ ಎಸ್ಟಿ ಸಮುದಾಯಕ್ಕೆ ಕೃಷಿ ಯಂತ್ರೋಪಕರಣಗಳು



ಸಹಾಯಧನ ಮತ್ತು ರಸಗೊಬ್ಬರಗಳು ಮತ್ತು ಕೀಟನಾಶಕಗಳನ್ನು ಗಂಗಾವತಿ ರೈತ ಸಂಪರ್ಕ ಕೇಂದ್ರದಿಂದ 2026 ಹಾಗೂ 27 ನೇ ಸಾಲಿನಲ್ಲಿ ಸಮರ್ಪಕವಾಗಿ ವಿತರಣೆ ಯಾಗಬೇಕು ಮುಂಗಾರು ಹಂಗಾಮು ಹವಮಾನ ಕೃಷಿ ಬೇಸಾಯಗಳಾ ಬೀಜಗಳಾದ ಶೇಂಗಾ ತೊಗರಿ ಜೋಳ ಸಜ್ಜೆ ಬೀಜಗಳು ಸೋನಾಮಸೂರಿ 50 ಕಾವೇರಿ ಮತ್ತಿತರ ಬೀಜಗಳಿಗೆ ರೈತರಿಗೆ ಅನುಕೂಲವಾಗುವ ಹಿತದೃಷ್ಟಿಯಿಂದ ರೈತ ಸಂಪರ್ಕ ಕೇಂದ್ರಗಳಾದ ಗಂಗಾವತಿ ವೆಂಕಟಗಿರಿ ಕನಕಗಿರಿ ಹುಲಿ ಹೈದರಾ ನವಲಿ ಕಾರ್ಟಗಿ ಕನಕಗಿರಿ ಮರಳಿ ಈ ಎಲ್ಲಾ ರೈತ ಸಂಪರ್ಕ ಕೇಂದ್ರಗಳಿಗೆ ವಿತರಣೆ ಮಾಡುವಂತೆ ತಕ್ಷಣವೇ ಆದೇಶ ನೀಡಬೇಕು. ಗಂಗಾವತಿ ಕಾರಟಗೆ ಕನಕಗಿರಿ ಖಾಸಗಿ ರಸಗೊಬ್ಬರ ಅಂಗಡಿಗಳಲ್ಲಿ ಕಳಪೆ ಮಟ್ಟದ ಬಿತ್ತನೆ ಬೀಜ ಕೀಟನಾಶಕ ರಸಗೊಬ್ಬರ ಕೊಡುತ್ತಿದ್ದು ಈ ಕುರಿತು ಸಮಗ್ರ ತನಿಖೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸಹಾಯಕ ಕೃಷಿ ನಿರ್ದೇಶಕರಿಗೆ ಪ್ರಮುಖ ಒಂಬತ್ತು ಬೇಡಿಕೆಗಳನ್ನು ಈಡೇರಿಸುವಂತೆ ಮನವಿ ಮಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಖಜಾಂಚಿ ಯಮನೂರಪ್ಪ ನಾಯಕ್ ತಾಲೂಕ ಅಧ್ಯಕ್ಷ ದುರ್ಗಪ್ಪ ಹೊಸಳ್ಳಿ ಮುಖಂಡರುಗಳಾದ ಶರಣಪ್ಪ ದೊಡ್ಮನಿ ಆರ್ ಕೆ ರಮೇಶ್ ಬಸವರಾಜ್ ಕುರುಬರ ದುರ್ಗಪ್ಪ ಐಹೊಳೆ ಗೋವಿಂದಪ್ಪ ಹುಲುಗಪ್ಪ ದುರ್ಗೇಶ್ ಹರಿಗೋಳ್ ಅಂಬಣ್ಣ ಗಂಗಪ್ಪ ಹನುಮಂತಪ್ಪ ಬಳ್ಳಾರಿ ಲೋಕೇಶ್ ಇನ್ನಿತರರು ಉಪಸ್ಥಿತರಿದ್ದರು

## ಸಾರ್ಥಕತೆಯ ದಾರಿಯಲ್ಲಿ ಚಲಿಸುವುದು ಹೇಗೆ..?




**ತತ್ತ್ವ-ಭಾವಾರ್ಥ**

● ಬಸವರಾಜ ಶರಣರು ಬೋರಗಿ

ತಾತ್ವಿಕ ಚಿಂತಕರು

ಕಗ್ಗ:

ಹರಿ ನೀರನೆದುರಿಸಲ್
ಖರೆ ಮೀನ ಛಲಬೇಕು
ಅರಿಬಿಯಾ ಮೀನದಕೆ ಸರಿಯಲ್ಲ ತಿಳಿ ।
ಧರಿ ಬಾಳ ಶರಧಿಯೊಲ್
ಹುರಿಗಟ್ಟಿನಿಂ ತಾ ಚಲಿಸಿ
ಪರ ತೀರವದು ಸೇರ್-ಮಂದ ಮನುಜ ॥



ಮಾನವನ ಜೀವನವೆಂಬುದು ನಿತ್ಯ ಚಲನಶೀಲವಾದ ಸಾಗರದಂತೆ. ಇಲ್ಲಿ ಹರಿಯುವ ನೀರು ಎಂದರೆ ಕಾಲಪ್ರವಾಹ, ಪರಿಸ್ಥಿತಿ, ಸಮಾಜದ ಒತ್ತಡಗಳು ಹಾಗೂ ವಿಧಿವೈಪರೀತ್ಯಗಳು. ಇವುಗಳಿಗೆ ಎದುರಾಗಿ ನಿಲ್ಲುವುದು ಎಲ್ಲರಿಗೂ ಸಾಧ್ಯವಲ್ಲ. ಈ ತಾತ್ವಿಕ ಸತ್ಯವನ್ನು ಈ ಕಗ್ಗವು ಆಳವಾದ ರೂಪಕಗಳ ಮೂಲಕ ನಮಗೆ ಬೋಧಿಸುತ್ತದೆ.

"ಹರಿ ನೀರನೆದುರಿಸಲ್ ಖರೆ ಮೀನ ಛಲಬೇಕು" ಎಂಬ ಸಾಲು, 'ನಿಜವಾದ ಮೀನು ಮಾತ್ರವೇ ಹರಿಯುವ ನೀರಿನ ವಿರುದ್ಧ ಈಜಬಲ್ಲದು' ಎಂಬ ಅರ್ಥವನ್ನು ಹೊತ್ತುಕೊಂಡಿದೆ. ಜೀವಂತ ಮೀನುಗಳಿಗೆ ಇರುವ ಶಕ್ತಿ, ಚೈತನ್ಯ ಮತ್ತು ಸಹಜ ಸಾಮರ್ಥ್ಯವಿಲ್ಲದೆ ಹರಿವಿನ ವಿರುದ್ಧ ಸಾಗುವುದು ಅಸಾಧ್ಯ. ಇದರಿಂದ ಕಗ್ಗ ತಿಳಿಸುವುದು ಏನೆಂದರೆ, ಜೀವನದ ಸಂಕಷ್ಟಗಳ ವಿರುದ್ಧ ನಿಲ್ಲಲು ಕೇವಲ ಮಾತು, ವೇಷ ಅಥವಾ ಬಾಹ್ಯ ತೋರಿಕೆ ಸಾಲದು; ಆಂತರಿಕ ಶಕ್ತಿ, ನಿಜವಾದ ಪರಿಶ್ರಮ ಮತ್ತು ದೃಢ ಸಂಕಲ್ಪವೇ ಅಗತ್ಯವಿದೆ.

ಇದನ್ನು ಮತ್ತಷ್ಟು ಸ್ಪಷ್ಟಗೊಳಿಸುವ ಸಾಲು "ಅರಿಬಿಯಾ ಮೀನದಕೆ ಸರಿಯಲ್ಲ ತಿಳಿ". ಇಲ್ಲಿ 'ಅರಿಬಿಯಾ ಮೀನು' ಎಂದರೆ ವಸ್ತ್ರದಿಂದ ಮಾಡಿದ ಕೃತಕ, ನಕಲಿ ಮೀನು. ಅದು ಮೀನು ಆಕಾರದಲ್ಲಿದ್ದರೂ ಜೀವವಿಲ್ಲ; ನೀರಿನಲ್ಲಿ ಹಾಕಿದರೆ ಹರಿವಿಗೆ ಎದುರಾಗುವುದಲ್ಲ, ಬದಲಾಗಿ ತೇಲಿ ಅಥವಾ ಮುಳುಗಿ ಹೋಗುತ್ತದೆ. ಇದೇ ರೀತಿಯಲ್ಲಿ, ಜೀವನದಲ್ಲಿ ನಕಲಿ ಧೈರ್ಯ, ಕೃತಕ ಭಕ್ತಿ, ತೆ-ೋರಿಕೆಯ ಜ್ಞಾನ ಅಥವಾ ಬಾಹ್ಯ ವೇಷಗಳಿಂದ ಯಾರೂ ಸಂಕಷ್ಟಗಳನ್ನು ಎದುರಿಸಲು ಸಾಧ್ಯವಿಲ್ಲ. 'ರೂಪ ಮಾತ್ರವಿದ್ದರೂ ತತ್ವವಿಲ್ಲದ ವ್ಯಕ್ತಿ ಜೀವನ ಸಾಗರದಲ್ಲಿ ಅಸ್ಥಿರನಾಗುತ್ತಾನೆ' ಎಂಬ ತೀಕ್ಷ್ಣ ಸಂದೇಶ ಇಲ್ಲಿ ಅಡಗಿದೆ.

"ಧರಿ ಬಾಳ ಶರಧಿಯೊಲ್" ಎಂಬಲ್ಲಿ, ಮಾನವನ ಜೀವನವನ್ನು ಮಹಾ ಶರಧಿಗೆ (ಸಮುದ್ರಕ್ಕೆ) ಹೋಲಿಸಲಾಗಿದೆ. ಈ ಸಾಗರದಲ್ಲಿ ಅಲೆಗಳು ಎಂದರೆ ಸುಖ-ದುಃಖ, ಲಾಭ-ನಷ್ಟ, ಜಯ-ಪರಾಭವಗಳು. ಇಂತಹ ಅಲೆಗಳ ಮಧ್ಯೆ ತೇಲಿ ಉಳಿಯಲು ಅಥವಾ ಎದುರು ಸಾಗಲು ಕೇವಲ ಆಕಾರ ಸಾಕಾಗದು; ಒಳಗಿನ ಬಲ ಅವಶ್ಯವಾಗಿದೆ.

ಅದರ ಮುಂದುವರಿದ ಸಾಲು "ಹುರಿಗಟ್ಟಿನಿಂ ತಾ ಚಲಿಸಿ" ಎಂಬುದು, ಧೈರ್ಯವನ್ನು ಗಟ್ಟಿಗೊಳಿಸಿಕೊಂಡು, ಸ್ವಪ್ರಯತ್ನದಿಂದ ಚಲಿಸಬೇಕೆಂದು ಸೂಚಿಸುತ್ತದೆ. ಜೀವನದಲ್ಲಿ ಯಾರೂ ಮತ್ತೊಬ್ಬನ ಪರವಾಗಿ ಈಜಲಾರರು; ಪ್ರತಿಯೊಬ್ಬನೂ ತನ್ನದೇ ಶಕ್ತಿ ಮತ್ತು ವಿವೇಕದ ಮೂಲಕ ಮುಂದೆ ಸಾಗಬೇಕು.

ಕೊನೆಯ ಸಾಲು "ಪರ ತೀರವದು ಸೇರ್-ಮಂದ ಮನುಜ" ಮಾನವನ ಅಂತಿಮ ಗುರಿಯನ್ನು ಸೂಚಿಸುತ್ತದೆ. ಈ ಪರತೀರವೆಂದರೆ ಕೇವಲ ಭೌತಿಕ ಯಶಸ್ಸಲ್ಲ; ಅದು ಆತ್ಮಸಾಕ್ಷಾತ್ಕಾರ, ಸಾರ್ಥಕ ಜೀವನ ಮತ್ತು ಪರಮಾರ್ಥದ ಸ್ಥಿತಿ. ನಕಲಿಯಿಂದ, ತೋರಿಕೆಯಿಂದ ಬದುಕಿದವನು ಮಧ್ಯದಲ್ಲೇ ಮುಳುಗುತ್ತಾನೆ; ಆದರೆ ನಿಜವಾದ ಗುಣ, ಪರಿಶ್ರಮ ಮತ್ತು ಛಲ ಹೊಂದಿದವನು ಮಾತ್ರ ಜೀವನ ಸಾಗರವನ್ನು ದಾಟಿ ಪರತೀರವನ್ನು ಸೇರುತ್ತಾನೆ.

ಹೀಗಾಗಿ, ಈ ಕಗ್ಗವು ಮಾನವನಿಗೆ ನೀಡುವ ತಾತ್ವಿಕ ಉಪದೇಶವೆಂದರೆ... ನಿನ್ನ ಬದುಕು ನಿಜವಾಗಿರಲಿ; ಕೃತಕತೆ ಬಿಟ್ಟು ಆಂತರಿಕ ಶಕ್ತಿಯನ್ನು ಬೆಳೆಸಿಕೋ; ಆಗಲೇ ಕಾಲಪ್ರವಾಹದ ವಿರುದ್ಧ ನಿಂತು ಸಾರ್ಥಕತೆಯ ತೀರ ತಲುಪಲು ಸಾಧ್ಯ. ಈ ಸಂದೇಶವೇ ಈ ಕಗ್ಗದ ಜೀವಾಳವಾಗಿದೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)